# ಅಖಿಲ ಭಾರತ ಪತ್ರಿಕೆ

ಡಿಸೆಂಬರ್ 2017



# ಮೃತ್ಯುವಿನ ನಂತರ ಜೀವನ

ಬೆಲೆ : 15/-



*The Divine is present*
*in the very atoms of our body.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### “ಮೃತ್ಯುವಿನ ನಂತರ ಜೀವನ”

**ಅನು : ಡಾ. ಕೆ.ಎಸ್. ಆಮೂರ**

ಮೃತ್ಯುವಿನ ಕ್ಷಣ 5

ಒಂದು ಜೀವನದಿಂದ ಇನ್ನೊಂದು ಜೀವನದತ್ತ ಸಂಕ್ರಮಣ 19

ಮೃತ್ಯುವಿನ ನಂತರ ಏನು ಸಂಭವಿಸುತ್ತದೆ? 29

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಮೃತ್ಯುವಿನ ನಂತರ ಏನು ಪಟ್ಟುಹಿಡಿದು ಉಳಿದುಕೊಳ್ಳುತ್ತದೆ? 43

**ಅನು : ಡಾ. ಬಿ.ಆರ್.ಭೀಡ**

ಮೃತ್ಯುವಿನ ಅನೇಕ ಮುಖಗಳು 51

**ವಾರ್ತಾಪತ್ರ** 59

## (All India Magazine) ಸಂಪಾದಕೀಯ:

ಜನರು ಅಸ್ತಿತ್ವದ ಆಳಾತಿಆಳದ ರಹಸ್ಯಗಳ ಬಗ್ಗೆ ಆಲೋಚಿಸತೊಡಗಿದಾಗಿನಿಂದ ಮೃತ್ಯುವಿನಾಚೆಗಿನ ಜೀವನ ಅವರನ್ನು ಮೋಹಕ್ಕೊಳಪಡಿಸಿದೆ. ಆದಾಗ್ಯೂ ಯಾರು ಈ ಪ್ರಶ್ನೆಗೆ ಉತ್ತರ ನೀಡಬಲ್ಲರು? ಮೃತರಾದವರು ಮೃತ್ಯುವಿನ ಪ್ರಾಂತಕ್ಕೆ ಹೋಗಿ ಅಲ್ಲಿಂದ ತಮ್ಮ ದೇಹದಲ್ಲಿ ಮರಳಿ ಬಂದವರಾಗಿರಬೇಕು ಇಲ್ಲವೆ ಜೀವಿಸುತ್ತಿದ್ದಾಗಲೇ ಮೃತ್ಯುವನ್ನು ಅನುಭವಕ್ಕೆ ತಂದುಕೊಂಡ, ಅಪರೂಪಕ್ಕೆ ಕಂಡುಬರುವ, ಯೋಗಿಯಾಗಲಿ ಇಲ್ಲವೆ ಅನುಭಾವಿಯಾಗಲಿ ಆಗಿರಬೇಕು. ಈ ವಿಷಯದಲ್ಲಿ ನಾವು ಅತ್ಯಂತ ಸುದೈವಿಗಳು ಹಾಗೂ ಸವಲತ್ತನ್ನು ಹೊಂದಿದವರು ಆಗಿದ್ದೇವೆ, ಏಕೆಂದರೆ ಈ ವಿಷಯ ಮತ್ತು ಇಂತಹ ಬೇರೆ ವಿಷಯಗಳನ್ನು ಕುರಿತು ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ನಮಗೆ ಅತ್ಯಂತ ಅಮೂಲ್ಯವಾದ ಕಾಣಿಕೆಗಳನ್ನು, ದರ್ಶನಗಳನ್ನು, ವಿವೇಕವನ್ನು ನೀಡಿದ್ದಾರೆ. ಅವರಿಗೆ ಈ ರಹಸ್ಯಗಳು ತಾತ್ವಿಕ ಚರ್ಚೆಯ ವಿಷಯವಾಗಲಿ ಇಲ್ಲವೆ ಚಿಂತನೆಯ ವಿಷಯವಾಗಲಿ ಆಗಿರಲಿಲ್ಲ, ಹಾಗೆಯೇ ಧಾರ್ಮಿಕ ನಂಬಿಕೆಯ ವಿಷಯವೂ ಆಗಿರಲಿಲ್ಲ. ಅತಿಮಾನಸ ಪ್ರಜ್ಞೆಯಿಂದ ಸಂಪನ್ನರಾದ ಅವರು ಈ ಸತ್ಯಗಳನ್ನು ಹಾಗೂ ಸೃಷ್ಟಿಯ ಅನೇಕ ಗೋಚರವಿಷಯಗಳ ಹಿಂದಿರುವ ದೈವೀ ಸತ್ಯವನ್ನು ನೋಡಿದ್ದರು: ಮೃತ್ಯುವಿನ ಆಳವಾದ ಜಡಸ್ಥಿತಿಯಾಚೆಗೆ ಅಸ್ತಿತ್ವದಲ್ಲಿರುವ ಜೀವನದ ರಹಸ್ಯಗಳಲ್ಲಿ ಒಂದನ್ನು ಕುರಿತು ಆಳಾತಿಆಳದ ತಿಳಿವಳಿಕೆಗಾಗಿ ಈ ಸಂಚಿಕೆಯನ್ನು ಮುಡುಪಾಗಿರಿಸುತ್ತಿದ್ದೇವೆ.

*



ನಾನು ಜನರಿಗಾಗಿ ವಿಫಲವಾಗದ ಶಾಂತಿಯನ್ನು ಹಕ್ಕಿನಿಂದ ಪ್ರತಿಪಾದಿಸುತ್ತೇನೆ, ನಾನು ಪೃಥ್ವಿಗಾಗಿ ಗಾಯಗೊಂಡಿರದ, ಕಾಲರಹಿತ ದಿವ್ಯಾನಂದವನ್ನು ಹಕ್ಕಿನಿಂದ ಪ್ರತಿಪಾದಿಸುತ್ತೇನೆ, ನರಕದಲ್ಲಿ ವೇದನೆ ಪಡುತ್ತಿರುವ ಆತ್ಮಗಳಿಗಾಗಿ ದೈವೀ ಬಲವನ್ನು, ಅಜ್ಞಾನದ ಕಂದರವನ್ನು ತುಂಬಲು ದೈವೀ ಪ್ರಕಾಶವನ್ನು ನಾನು ಅರಸುತ್ತೇನೆ.

**CWSA, 2/674** – ಶ್ರೀ ಅರವಿಂದರು

*

# ಮೃತ್ಯುವಿನ ಆಂತರಿಕ ಕಾರಣ ಹಾಗೂ ನಿಜವಾದ ಪ್ರಾಮುಖ್ಯತೆ

ಪೃಥ್ವಿಯ ಮೇಲಿನ ಭೌತಿಕ ದ್ರವ್ಯದ ಪರಿಸ್ಥಿತಿಗಳು ಮೃತ್ಯು ಅತ್ಯಗತ್ಯದ್ದನ್ನಾಗಿ ಮಾಡಿದವು. ಭೌತಿಕ ಉತ್ಕ್ರಾಂತಿಯ ಇಡೀ ಅರ್ಥ ಮೊದಲ ಅಪ್ರಜ್ಞೆಯ ಸ್ಥಿತಿಯಿಂದ ಹೆಚ್ಚುತ್ತಿರುವ ಪ್ರಜ್ಞೆಯತ್ತ ಬೆಳವಣಿಗೆ ಪಡೆಯುವುದಾಗಿದೆ. ಮತ್ತು ಬೆಳವಣಿಗೆಯ ಈ ವಿಧಾನದಲ್ಲಿ ರೂಪಗಳ ವಿಘಟನೆ, ವಿಷಯಗಳು ನಿಜವಾಗಿ ಸಂಭವಿಸಿದ ಹಾಗೆ, ಅನಿವಾರ್ಯವಾದ ಆವಶ್ಯಕತೆಯಾಯಿತು. ಏಕೆಂದರೆ, ಸಂಘಟನೆಗೊಳಗೊಂಡ ಪ್ರಜ್ಞೆಗೆ ಒಂದು ಸ್ಥಿರವಾದ ಆಧಾರ ದೊರಕಲೆಂದು ಒಂದು ಸ್ಥಿರಗೊಂಡ ರೂಪದ ಆವಶ್ಯಕತೆಯಿದ್ದಿತು. ಮತ್ತು ಆದಾಗ್ಯೂ ರೂಪದ ಸ್ಥಿರಗೊಳ್ಳುವಿಕೆ ಮೃತ್ಯು ಅನಿವಾರ್ಯವಾಗುವಂತೆ ಮಾಡಿತು. ಭೌತದ್ರವ್ಯ ರೂಪಗಳನ್ನು ಧಾರಣ ಮಾಡಬೇಕಾಗಿತ್ತು; ವ್ಯಕ್ತೀಕರಣ ಮತ್ತು ಪ್ರಾಣದ ಶಕ್ತಿಗಳು ಇಲ್ಲವೆ ಪ್ರಜ್ಞೆಯ ಶಕ್ತಿಗಳು ಮೂರ್ತರೂಪದಲ್ಲಿ ಮೈದಾಳದೆ ಇದ್ದರೆ ರೂಪಗಳು ಅಸಾಧ್ಯವಾಗಿರುತ್ತಿದ್ದವು ಮತ್ತು ಇವುಗಳಿಲ್ಲದೆ ಭೌತಿಕ ಸ್ತರದ ಮೇಲೆ ಸಂಘಟನೆಗೊಳಗಾದ ಅಸ್ತಿತ್ವದ ಮೊದಲ ಪರಿಸ್ಥಿತಿಗಳ ಕೊರತೆ ಇರುತ್ತಿತ್ತು, ಆದರೆ ಒಂದು ನಿಶ್ಚಿತ ಮತ್ತು ಮೂರ್ತರೂಪದ ರೂಪತಾಳುವಿಕೆ ಒಮ್ಮೆಗೆ ಗಡುಸಾಗುವ, ಕಠಿಣವಾಗುವ ಮತ್ತು ಕಲ್ಲಾಗಿಸುವ ಪ್ರವೃತ್ತಿಯನ್ನು ಕುಗ್ಗಿಸುತ್ತದೆ. ವ್ಯಕ್ತಿಗತ ಎರಕ ಅತಿಯಾಗಿ ಬಂಧನಕ್ಕೊಳಪಡಿಸುವ ಎರಕದಂತೆ ಪಟ್ಟು ಹಿಡಿಯಿತು; ಅದು ಶಕ್ತಿಗಳ ಚಲನೆಗಳನ್ನು ಅನುಸರಿಸಲಾರದು ಅದು ವಿಶ್ವಂಭರ ಕ್ರಿಯಾಶೀಲತೆಯಲ್ಲಿ ಪ್ರಗತಿಪರ ಚಲನೆಯೊಂದಿಗೆ ಸಾಮರಸ್ಯದಲ್ಲಿ ಬದಲಾವಣೆ ಪಡೆಯಲಾರದು, ಅದು ಸತತ ಪ್ರಕೃತಿಯ ಒತ್ತಾಯದ ಬೇಡಿಕೆಯನ್ನು ಈಡೇರಿಸಲಾರದು ಇಲ್ಲವೆ ಅದರೊಂದಿಗೆ ಹೆಜ್ಜೆ ಇರಿಸಲಾರದು, ಅದು ತರಂಗದಿಂದ ಹೊರಗೆ ಬಂದುಬಿಡುತ್ತದೆ. ರೂಪ ಹಾಗೂ ಅದರ ಮೇಲೆ ಒತ್ತಡ ತರುತ್ತಿರುವ ಶಕ್ತಿ ಇವುಗಳ ನಡುವೆ ಬೆಳೆಯುತ್ತಿರುವ ಈ ಅಸಮತೆ ಹಾಗೂ ಹೊಂದಿಕೆ ಇಲ್ಲದಿರುವಿಕೆ ಇರುವ ಒಂದು ಹಂತದಲ್ಲಿ ರೂಪದ ಸಂಪೂರ್ಣ ವಿಘಟನೆಯನ್ನು ತಪ್ಪಿಸಲಾಗದು. ಹೊಸ ರೂಪವೊಂದನ್ನು ಸೃಷ್ಟಿಸಬೇಕು, ಹೊಸ ಸಾಮರಸ್ಯ ಹಾಗೂ ಅನುರೂಪತೆ (parity) ಸಾಧ್ಯವಾಗುವಂತೆ ಮಾಡಬೇಕು. ಇದು ಮೃತ್ಯುವಿನ ನಿಜವಾದ ಪ್ರಾಮುಖ್ಯತೆ ಮತ್ತು ಇದು ಪ್ರಕೃತಿಯಲ್ಲಿ ಅದರ ಉಪಯೋಗ. ಆದರೆ ರೂಪ ಹೆಚ್ಚು ತೀವ್ರಗತಿಯದು ಹಾಗೂ ನಮ್ಯವಾದದ್ದು

ಆದಾಗ ಹಾಗೂ ದೇಹದ ಜೀವಕೋಶಗಳು ಬದಲಾಗುತ್ತಿರುವ ಪ್ರಜ್ಞೆಯ ಜೊತೆಗೆ ಎಚ್ಚತ್ತುಕೊಳ್ಳುವಂತೆ ಮಾಡಲಾದರೆ ಅಲ್ಲಿ ತೀವ್ರ ಪರಿಣಾಮದ ವಿಘಟನೆಯ ಆವಶ್ಯಕತೆ ಇರುವುದಿಲ್ಲ, ಮೃತ್ಯು ಇನ್ನು ಮುಂದೆ ಅನಿವಾರ್ಯ–ವಾಗುವುದಿಲ್ಲ.

**CWM, 3/37** **- ಶ್ರೀಮಾತೆ**

*

## ಮೃತ್ಯುವಿನ ಕ್ಷಣ

### ಮೃತ್ಯುವಿನತ್ತ ಸರಿಯಾದ ಮನೋಭಾವ

ಪರಿಸ್ಥಿತಿ ಏನೇ ಇರಲಿ, ನಿಮ್ಮ ಮನಸ್ಸು, ಅದು ಹೆಚ್ಚು ಅನುಕೂಲಕರವಾದ ಏನೋ ಒಂದು ಎಂದು ಭಾವನೆಗೆ ತಂದುಕೊಳ್ಳುವುದನ್ನು ರೂಢಿಸಿಕೊಂಡಿದ್ದರೆ, ಅದು ಇನ್ನು ಮುಂದೆ ಅಸಂತೋಷಕರವಾಗಿರುವುದಿಲ್ಲ. ಇದು ಚೆನ್ನಾಗಿ ತಿಳಿದುಬಂದ ಸಂಗತಿ; ವಿಷಯವೊಂದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿರು–ವವರೆಗೆ, ಅದರ ವಿರುದ್ಧ ಹೋರಾಡುತ್ತಿರುವವರೆಗೆ, ಅದನ್ನು ತಡೆಗಟ್ಟಲು ಪ್ರಯತ್ನಿಸುತ್ತಿರುವವರೆಗೆ ಅಲ್ಲಿ ಪೀಡೆಗಳು, ತೊಂದರೆಗಳು, ಬಿರುಗಾಳಿಗಳು, ಆಂತರಿಕ ಹೋರಾಟಗಳು ಮತ್ತು ಎಲ್ಲ ವೇದನೆ ಇರುತ್ತವೆ. ಆದರೆ ಮನಸ್ಸು "ಒಳ್ಳೆಯದು, ಇದು ಬರಲೇಬೇಕಾಗಿದ್ದಾಗಿದೆ, ಮತ್ತು ಅದು ಈ ರೀತಿ ಸಂಭವಿಸಲೇಬೇಕು" ಎಂದು ಹೇಳಿದಾಗ, ಏನೇ ಸಂಭವಿಸಲಿ, ನೀವು ತೃಪ್ತಿಯಿಂದಿರುತ್ತೀರಿ. ಮೊನ್ನೆ ಕೆಲವು ರಹಸ್ಯವಾದಿಗಳ ಬಗ್ಗೆ ನಿಮಗೆ ಹೇಳಿದ್ದೆ, ಅವರು ತಮ್ಮ ದೇಹದ ಮೇಲೆ ಮನಸ್ಸಿನ ಎಂತಹ ನಿಯಂತ್ರಣ ದೊರಕಿಸಿರುತ್ತಾರೆ ಎಂದರೆ ಅವರಿಗೆ ಯಾವುದರ ಭಾವನೆಯೂ ಬರುವುದಿಲ್ಲ: ಅವರ ಮೇಲೆ ಹೇರಲಾದ ವೇದನೆ ಅವರಿಗೆ ಒಂದು ಕ್ಷಣದಲ್ಲಿ ಹಲವಾರು ಹಂತಗಳನ್ನು ದಾಟಿಹೋಗಲು ಸಹಾಯ ಮಾಡುವುದು ಮತ್ತು ಸಿದ್ಧಿಯನ್ನು ಪಡೆಯಲು ಒಂದು ಮೆಟ್ಟಿಲನ್ನು ಒದಗಿಸುವುದು ಎಂದು ಅವರು ಯೋಚಿಸಿದರೆ ಇನ್ನುಮುಂದೆ ಅವರಿಗೆ ವೇದನೆಯ ಭಾವನೆ ಬರುವುದಿಲ್ಲ, ಆ ಸಿದ್ಧಿ ಅವರು ತಮ್ಮ ಮುಂದೆ ಇರಿಸಿಕೊಂಡಿದ್ದ ಗುರಿ ಎಂದರೆ ಭಗವಂತನೊಡನೆ ಏಕತೆಯನ್ನು ಪಡೆಯುವುದಾಗಿರುತ್ತದೆ. ಮಾನಸಿಕ ಕಲ್ಪನೆಯ ಮೂಲಕ ಅವರ ದೇಹ ನೇರ

ವಿದ್ಯುತ್ ಪ್ರವಾಹದಿಂದಲೋ ಎಂಬಂತೆ ಪ್ರಚೋದನೆಗೆ ಒಳಗಾಗಿರುತ್ತದೆ. ಇದು ಬಹಳಷ್ಟು ಸಲ ಸಂಭವಿಸಿದೆ. ನಿಜವಾದ ಉತ್ಸಾಹವಿದ್ದ ಜನರಲ್ಲಿ ಇದು ಕಂಡುಬರುವ ಸಾಮಾನ್ಯ ಅನುಭವ ಮತ್ತು ಒಟ್ಟಿನಲ್ಲಿ ಯಾವುದಾದರೊಂದು ಕಾರಣಕ್ಕಾಗಿ ಮನುಷ್ಯ ತನ್ನ ದೇಹವನ್ನು ತ್ಯಜಿಸಿ ಹೋಗಲೇಬೇಕಾದರೆ ಮೃತ್ಯುವನ್ನು ಜುಗುಪ್ಸೆ ತರಿಸುವ ಸೋಲನ್ನಾಗಿ ಮಾಡುವುದಕ್ಕಿಂತ ಭವ್ಯವಾದ, ಸಂತೋಷಕರವಾದ, ಉತ್ಸಾಹದಿಂದ ಕೂಡಿದ ಏನೋ ಒಂದನ್ನಾಗಿ ಮಾಡುವುದು ಹೆಚ್ಚು ಒಳ್ಳೆಯದಲ್ಲವೆ? ತಮ್ಮ ದೇಹಕ್ಕೆ ಅಂಟಿಕೊಂಡು ಹೋಗುವುದನ್ನು ಮುಂದುವರಿಸಲು ಸಾಧ್ಯವಿದ್ದ ಎಲ್ಲ ಸಾಧನಗಳನ್ನು ಉಪಯೋಗಿಸಲು ಮತ್ತು ಕೊನೆ ಬರುವುದನ್ನು ಒಂದೆರಡು ನಿಮಿಷಗಳ ಕಾಲ ನಿಧಾನಗೊಳಿಸಲು ಪ್ರಯತ್ನಿಸುವ ಜನರು ನಿಮಗೆ ಭಯ ತರಿಸುವ ತಳಮಳದ ಉದಾಹರಣೆಯನ್ನು ಕೊಡುತ್ತಾರೆ. ಅದು ತಮ್ಮ ಆತ್ಮದ ಬಗ್ಗೆ ಅವರು ಅರಿವು ತಂದುಕೊಂಡಿರಲಿಲ್ಲ ಎಂಬುದನ್ನು ತೋರಿಸುತ್ತದೆ.

**CWM, 4/354-55** **- ಶ್ರೀಮಾತೆ**

*

**ಮೃತ್ಯು ಕೇವಲ ಒಂದು ಸಾಧನ**

ಒಟ್ಟಿನಲ್ಲಿ, ಬಹುಶಃ, ಅದೊಂದು ಸಾಧನ, ಅಲ್ಲವೆ? ಮನುಷ್ಯ ಈ ಅಪಘಾತವನ್ನು ಒಂದು ಸಾಧನವೆಂದು ಬದಲಿಸಬಹುದು. ಮನುಷ್ಯ ಪ್ರಜ್ಞಾವಂತನಾಗಿದ್ದರೆ, ಪ್ರತಿಯೊಂದನ್ನು ಮಾಡುವಂತೆ, ಮೃತ್ಯುವನ್ನು ಒಂದು ಬಹಳ ಸುಂದರವಾದ ವಿಷಯವನ್ನಾಗಿ ಮಾಡಬಲ್ಲನು. ಮತ್ತು ಗಮನಿಸ–ಬೇಕಾದುದೆಂದರೆ ಯಾರು ಅದಕ್ಕೆ ಭಯಪಟ್ಟುಕೊಳ್ಳುವುದಿಲ್ಲವೋ, ಅದನ್ನು ಕುರಿತು ತಳಮಳಗೊಂಡಿರುವುದಿಲ್ಲವೋ, ಯಾವ ಕೊಳಕುತನವಿಲ್ಲದೆ ಮೃತ್ಯುವನ್ನು ಹೊಂದಬಲ್ಲರೋ ಅಂತಹರು ಅದನ್ನು ಕುರಿತು ಎಂದಿಗೂ ಯೋಚನೆ ಮಾಡುವುದಿಲ್ಲ, ಮುಂದೂಡಬೇಕು ಎಂಬ ದಿಗಿಲು ಹುಟ್ಟಿಸುವ ಈ ವಿಷಯದಿಂದ ಎಲ್ಲ ಕಾಲದಲ್ಲಿ ಗೀಳುಹಿಡಿದವರಾಗಿರುವುದಿಲ್ಲ. ಅದು ಅವರನ್ನು ಎದುರಿಸು–ತ್ತಿರುತ್ತದೆ, ಅದರಿಂದ ಅವರು ತಪ್ಪಿಸಿಕೊಳ್ಳಬೇಕು, ಅದನ್ನು ಸಾಧ್ಯವಿದ್ದಷ್ಟು ದೂರ ಇರಿಸಬೇಕೆಂದು ಯೋಚಿಸುವುದಿಲ್ಲ. ಇಂತಹರು ಮೃತ್ಯುವಿನ ಸಮಯ ಬಂದಾಗ ತಮ್ಮ ತಲೆಯನ್ನೆತ್ತಿ, ಮುಗುಳ್ನಗುತ್ತ "ನಾನಿಲ್ಲಿದ್ದೇನೆ" ಎಂದು ಹೇಳಬಲ್ಲರು.

ಇಂತಹ ಜನರೇ ತಮ್ಮ ಜೀವನದ ಉಪಯೋಗವನ್ನು ಸಾಧ್ಯವಿದ್ದಷ್ಟು ಅತ್ಯಂತ ಒಳ್ಳೆಯ ರೀತಿಯಲ್ಲಿ ಮಾಡುವ ಸಂಕಲ್ಪ ಹೊಂದಿರುತ್ತಾರೆ. "ಅವಶ್ಯವಿರುವಷ್ಟು ಕಾಲ ನಾನಿಲ್ಲಿ ಕೊನೆಯ ನಿಮಿಷದವರೆಗೆ ಉಳಿದುಕೊಳ್ಳುತ್ತೇನೆ ಮತ್ತು ನನ್ನ ಗುರಿಯನ್ನು ಸಿದ್ಧಿಸಿಕೊಳ್ಳಲು ಒಂದು ಕ್ಷಣವನ್ನೂ ಕೂಡ ಕಳೆದುಕೊಳ್ಳುವುದಿಲ್ಲ" ಎಂದು ಅವರು ಹೇಳುತ್ತಾರೆ. ಇವರು ಆವಶ್ಯಕತೆ ಉಂಟಾದಾಗ ಒಳ್ಳೆಯ ಪ್ರದರ್ಶನವನ್ನಿರಿಸುತ್ತಾರೆ, ಏಕೆ? ಅದು ಬಹಳ ಸರಳವಾದ ವಿಷಯ, ಏಕೆಂದರೆ ಅವರು ಆ ಆದರ್ಶದಲ್ಲಿ, ಆ ಆದರ್ಶದ ಸತ್ಯದಲ್ಲಿ ಜೀವಿಸುತ್ತಾರೆ, ಏಕೆಂದರೆ ಅದೇ ಅವರಿಗೆ ನಿಜವಾದ ವಿಷಯ, ಅವರ ಸತ್ತೆಯ ಅಸ್ತಿತ್ವದ ಕಾರಣ, ಮತ್ತು ಎಲ್ಲ ವಸ್ತು–ವಿಷಯಗಳಲ್ಲಿ ಅವರು ಈ ಆದರ್ಶವನ್ನು, ಅಸ್ತಿತ್ವದ ಈ ಕಾರಣವನ್ನು ನೋಡಬಲ್ಲರು, ಅವರು ಎಂದಿಗೂ ಪ್ರಾಪಂಚಿಕ ಜೀವನದ ಕೊಳಕುತನದಲ್ಲಿ ಕೆಳಗಿಳಿದು ಬರುವುದಿಲ್ಲ.

ಹಾಗಾಗಿ ಉಪಸಂಹಾರ ಹೀಗಿದೆ:

ಮನುಷ್ಯ ಎಂದಿಗೂ ಮೃತ್ಯುವಿಗಾಗಿ ಇಚ್ಛೆಪಡಬಾರದು
ಮನುಷ್ಯ ಸಾವನ್ನಪ್ಪಲು ಎಂದಿಗೂ ಸಂಕಲ್ಪ ಮಾಡಬಾರದು.
ಮನುಷ್ಯ ಸಾವನ್ನಪ್ಪಲು ಭಯಪಟ್ಟುಕೊಳ್ಳಬಾರದು
ಮತ್ತು ಎಲ್ಲ ಪರಿಸ್ಥಿತಿಗಳಲ್ಲಿ ಮನುಷ್ಯ ತನ್ನನ್ನೇ ಮೀರಿ ಹೋಗಲು ಸಂಕಲ್ಪ ಹೊಂದಿರಬೇಕು.

**CWM, 4/354-55** **- ಶ್ರೀಮಾತೆ**

*

**ಮೃತ್ಯುವಿನ ಭಯ**

ಮನುಷ್ಯ ಸಾವನ್ನಪ್ಪುವುದಿದ್ದರೆ, ಅವನು ಸಾಯುತ್ತಾನೆ, ಮತ್ತು ಅವನು ಸಾವನ್ನಪ್ಪುವುದು ಇರದಿದ್ದರೆ ಜೀವಂತವಾಗಿರುತ್ತಾನೆ. ಮರಣಾಂತಕ ಅಪಾಯದಲ್ಲಿ ನೀವಿದ್ದಾಗಲೂ ಕೂಡ, ಅದು ನಿಮ್ಮ ಮರಣದ ಗಳಿಗೆಯಾಗಿರದಿದ್ದರೆ, ನೀವು ಮರಣ ಹೊಂದುವುದಿಲ್ಲ, ನೀವು ಎಲ್ಲ ಅಪಾಯದಿಂದ ಹೊರಗಿದ್ದಾಗಲೂ ಕೂಡ ನಿಮ್ಮ ಪಾದದ ಮೇಲಾಗುವ ಒಂದು ಗೀರು ನೀವು ಮರಣ ಹೊಂದುವಂತೆ ಮಾಡುವುದಕ್ಕೆ ಸಾಕಾಗುತ್ತದೆ. ಪಾದದ ಮೇಲೆ ಟಾಚನಿ (pin) ಯಿಂದ

ಉಂಟಾದ ಗೀರಿನಿಂದ ಸಾವನ್ನಪ್ಪಿದ ಜನರಿದ್ದಾರೆ– ಏಕೆಂದರೆ ಸಾವಿನ ಸಮಯ ಸನ್ನಿಹಿತವಾಗಿತ್ತು. ಹಾಗಾಗಿ ಭಯಕ್ಕೆ ಅರ್ಥವಿಲ್ಲ. ನೀವು ಕೈಕೊಳ್ಳಬಹುದಾದದ್ದು ಏನೆಂದರೆ ಒಂದು ಉಚ್ಚತರ ಪ್ರಜ್ಞೆಯವರೆಗೆ ಮೇಲೇರಿಕೊಂಡು ಹೋಗಬೇಕು, ಅಲ್ಲಿದ್ದುಕೊಂಡು "ಅದಿರುವುದು ಹಾಗೆ, ನಾವು ಆ ವಾಸ್ತವ ಸಂಗತಿಯನ್ನು ಒಪ್ಪಿಕೊಂಡಿದ್ದೇವೆ, ಏಕೆಂದರೆ ಅದು ಅನಿವಾರ್ಯವಾದ ಸಂಗತಿ ಎಂದು ಗುರುತಿಸಲಾಗಿದೆ. ಆದರೆ ನಾನು ಚಿಂತೆ ಮಾಡುವ ಕಾರಣವಿಲ್ಲ, ಏಕೆಂದರೆ ಅದು ಬರಲೇಬೇಕಾದಾಗ ಬಂದೇ ಬರುತ್ತದೆ, ಅದು ಬರುವುದು ಇರದಿದ್ದರೆ, ಬರುವುದಿಲ್ಲ. ಆದರೆ ಅದು ಬರಲೇಬೇಕಾದ ಸಮಯದಲ್ಲಿ ಬರುತ್ತದೆ. ಅದು ನನಗೆ ಅನಿವಾರ್ಯವಾಗಿ ಬರಲಿರುವುದರಿಂದ, ಆ ವಿಷಯ ಕುರಿತು ನಾನು ಭಯಪಟ್ಟುಕೊಳ್ಳದೇ ಇರುವುದು ಹೆಚ್ಚು ಒಳ್ಳೆಯದು, ಪರಿಪೂರ್ಣವಾಗಿ ಸ್ವಾಭಾವಿಕವಾದದ್ದನ್ನು ನಾವು ಒಪ್ಪಿಕೊಳ್ಳಲೇಬೇಕು" ಎಂದು ಹೇಳಬಲ್ಲಿರಿ.

ಅಲ್ಲಿ ಇನ್ನೊಂದು ರೀತಿಯಿದೆ, ಅದು ಸ್ವಲ್ಪ ಕಠಿಣವಾದದ್ದು, ಆದರೆ ಅದು ಹೆಚ್ಚು ಒಳ್ಳೆಯದಾದದ್ದು ಎಂದು ನಾನು ನಂಬುತ್ತೇನೆ "ಈ ದೇಹ ನಾನಲ್ಲ" ಎಂದು ಮನುಷ್ಯ ತನಗೇ ಹೇಳಬೇಕು ಎನ್ನುವುದರಲ್ಲಿ ಆ ರೀತಿಯಿದೆ. ಮನುಷ್ಯ ತನ್ನಲ್ಲಿಯೇ ತನ್ನದೇ ನಿಜವಾದ ಭಾಗವಾಗಿರುವ ಚೈತ್ಯಸತ್ತೆಯನ್ನು ಕಂಡುಹಿಡಿಯಲು ಪ್ರಯತ್ನಿಸುವುದರಲ್ಲಿ ಆ ರೀತಿಯಿದೆ ಮತ್ತು ಮನುಷ್ಯ ತನ್ನ ಚೈತ್ಯಸತ್ತೆಯನ್ನು ಕಂಡುಕೊಂಡಾಗ– ಕೂಡಲೆ, ತಿಳಿಯಿತೆ– ಅವನಿಗೆ ಅಮರ–ನಾಗಿರುವ ಭಾವನೆ ಬರುತ್ತದೆ. ಮತ್ತು ಯಾವುದು ಹೊರಗೆ ಹೋಗುತ್ತದೆಯೋ ಮತ್ತು ಒಳಗೆ ಬರುತ್ತದೆಯೋ ಅದು ಅದರ ಅನುಕೂಲತೆಗಾಗಿ ಇದೆ. "ತೂತುಗಳಿಂದ ತುಂಬಿಕೊಂಡಿದ್ದ ಒಂದು ಜೊತೆ ಚಪ್ಪಲಿಗಳನ್ನು ಬದಿಗೆ ಸರಿಸಿ ಇಡುವಾಗ ನಾನು ರೋದಿಸುವುದಿಲ್ಲ, ನನ್ನ ಚಪ್ಪಲಿಗಳು ಸವೆದು ಹೋದಾಗ ಅವುಗಳನ್ನು ಬದಿಗೆ ಎಸೆಯುವಾಗ ನಾನು ರೋದಿಸುವುದಿಲ್ಲ" ಸರಿ, ಚೈತ್ಯಸತ್ತೆ ಈ ದೇಹವನ್ನು ಧಾರಣಮಾಡಿದೆ, ಏಕೆಂದರೆ ಅದನ್ನು ತನ್ನ ಕಾರ್ಯಕ್ಕಾಗಿ ಉಪಯೋಗಿಸುವ ಆವಶ್ಯಕತೆಯಿತ್ತು, ಆದರೆ ದೇಹವನ್ನು ತ್ಯಜಿಸುವ ಸಮಯ ಒದಗಿ ಬಂದಾಗ ಎಂದರೆ ಒಂದಿಲ್ಲೊಂದು ಕಾರಣಕ್ಕಾಗಿ ಇನ್ನುಮುಂದೆ ಯಾವ ಉಪಯೋಗಕ್ಕೂ ಬರುವುದಿಲ್ಲ ಎಂದಾದಾಗ ಮನುಷ್ಯ ದೇಹವನ್ನು ತ್ಯಜಿಸುತ್ತಾನೆ, ಮತ್ತು ಅವನಿಗೆ ಭಯ ಉಂಟಾಗುವುದಿಲ್ಲ. ಅದು ಬಹಳ ಸ್ವಾಭಾವಿಕ ಸಂಜ್ಞೆ– ಅದನ್ನು ಕನಿಷ್ಠಮಟ್ಟದ ವಿಷಾದ ಇಲ್ಲದೆ ಕೈಕೊಳ್ಳಲಾಗುತ್ತದೆ, ಅಷ್ಟೇ.

ನೀವು ನಿಮ್ಮ ಚೈತ್ಯಸತ್ತೆಯಲ್ಲಿದ್ದ ತತ್ಕ್ಷಣ ನಿಮಗೆ ಆ ಭಾವನೆ ಸ್ವಯಂಪ್ರೇರಿತವಾಗಿ, ಪ್ರಯತ್ನವಿಲ್ಲದೆ ಬರತೊಡಗುತ್ತದೆ. ನೀವು ಭೌತಿಕ ಜೀವನದ ಮೇಲೆ ಹಾರಾಡುತ್ತೀರಿ ಮತ್ತು ನಿಮಗೆ ಅಮರತ್ವವಿರುವ ಭಾವನೆ ಬರುತ್ತದೆ. ಇದು ಅತ್ಯಂತ ಒಳ್ಳೆಯ ಉಪಾಯವೆಂದು ನನಗನಿಸುತ್ತದೆ. ...

ಈಗ, ಮೂರನೆಯ ವಿಷಯವೊಂದಿದೆ, ಅದನ್ನೂ ಕೂಡ ಮನುಷ್ಯ ತಿಳಿದುಕೊಂಡಿರಬೇಕು, ಆದರೆ ಇದಕ್ಕಾಗಿ ಮನುಷ್ಯ ಅಧಿಕ ಬಲವುಳ್ಳ ಯೋಗಿಯಾಗಿರಬೇಕು. ಏಕೆಂದರೆ ಇದರ ಅರ್ಥ ಮೃತ್ಯು ಅನಿವಾರ್ಯವಾದ ವಿಷಯವಲ್ಲ, ಅದೊಂದು ಅಪಘಾತವಾಗಿದ್ದು ಇಲ್ಲಿಯವರೆಗೆ ಆಗುತ್ತಲೇ ಇದೆ (ಸಂದರ್ಭ ಯಾವುದೇ ಇರಲಿ ಇಲ್ಲಿಯವರೆಗೆ ಆಗುತ್ತಲೇ ಬಂದಿದ್ದು), ಅದನ್ನು ನಮ್ಮ ತಲೆಯಲ್ಲಿರಿಸಿಕೊಂಡಿದ್ದೇವೆ. ಹಾಗೂ ಈ ಅಪಘಾತದ ಮೇಲೆ ಜಯಸಾಧಿಸಿ ಅದನ್ನು ಸೋಲಿಸುವುದನ್ನು ನಮ್ಮ ಸಂಕಲ್ಪದಲ್ಲಿರಿಸಿಕೊಂಡಿದ್ದೇವೆ. ಆದರೆ ಅದು ಎಷ್ಟೊಂದು ಭೀಕರ ಹಾಗೂ ದಿಗಿಲು ಹುಟ್ಟಿಸುವ ಸಮರವಾಗಿದೆ. ಆ ಸಮರ ಪ್ರಕೃತಿಯ ಎಲ್ಲ ನಿಯಮಗಳ ವಿರುದ್ಧ, ಎಲ್ಲ ಸಾಮೂಹಿಕ ಸೂಚನೆಗಳ ವಿರುದ್ಧ, ಎಲ್ಲ ಪ್ರಾಪಂಚಿಕ ರೂಢಿಗಳ ವಿರುದ್ಧ ಇದೆಯೆಂದರೆ ಯಾವುದಕ್ಕೂ ಭಯಪಡದ ಮೊದಲ ದರ್ಜೆಯ ಯೋಧನಾಗಿರದೆ ಹೋದರೆ ಆ ಸಮರವನ್ನು ಪ್ರಾರಂಭ ಮಾಡದೆ ಇರುವುದು ಹೆಚ್ಚು ಒಳ್ಳೆಯದು. ನೀವು ಪರಿಪೂರ್ಣವಾಗಿ ಎದೆಗಾರನಾದ ಮಹಾಸಾಹಸಿಯಾಗಿರಬೇಕು, ಏಕೆಂದರೆ ಪ್ರತಿಯೊಂದು ಹೆಜ್ಜೆಯಲ್ಲಿ, ಪ್ರತಿಯೊಂದು ನಿಮಿಷ ಸ್ಥಾಪಿತಗೊಂಡ ಎಲ್ಲ ವಿಷಯಗಳ ವಿರುದ್ಧ ಹೋರಾಡುವುದಿರುತ್ತದೆ. ಹಾಗಾಗಿ ಅದು ಸುಲಭದ ವಿಷಯವಲ್ಲ.

**CWM, 5/315-16** **- ಶ್ರೀಮಾತೆ**

*

**ಮರಣ ಹೊಂದಲು ಒಪ್ಪಿಕೊಂಡಾಗ ಮನುಷ್ಯ ಮರಣಕ್ಕೀಡಾಗುತ್ತಾನೆ**

**ಪ್ರಶ್ನೆ:** *ನೀವು ಹೇಳಿದ್ದೀರಿ: "ಮನುಷ್ಯ ಅದರ ಗಳಿಗೆಗಾಗಿ ಅವಸರಿಸಲಾರ ಇಲ್ಲವೆ ಅದು ನಿಧಾನವಾಗುವಂತೆ ಮಾಡಲಾರ." ಆದರೆ ಮನುಷ್ಯ ಪ್ರಗತಿ ಹೊಂದುತ್ತಿ–ರುವುದು ನಿಂತು ಹೋದಾಗ ಅವನಿಗೆ ಮರಣ ಬರುತ್ತದೆ. ಇಲ್ಲವೆ ಇದರರ್ಥ*

*ಮನುಷ್ಯ ಜನ್ಮತಾಳಿದಂದಿನಿಂದ ಮರಣದ ದಿನ ಹಾಗೂ ಕ್ಷಣ ಇವುಗಳನ್ನು ಪೂರ್ವನಿಯಾಮಕವನ್ನಾಗಿ ಮಾಡಲಾಗಿರುತ್ತದೆಯೆ?*

**ಶ್ರೀಮಾತೆ:** ಇಲ್ಲ. ಇದು ಒಟ್ಟಿನಲ್ಲಿ ಬೇರೆ ವಿಷಯ ಮತ್ತು ಇನ್ನೊಂದು ಸ್ತರದ ಮೇಲೆ ಆಗುವಂತಹದು. ನಾನು ಬರೆದಿಟ್ಟದ್ದು ಹೀಗಿದೆ: "ಮರಣ ಹೊಂದಲು ಒಪ್ಪಿಕೊಂಡಾಗ ಮನುಷ್ಯ ಮರಣಕ್ಕೀಡಾಗುತ್ತಾನೆ."– ಇದು ನಾನಿಲ್ಲಿ ಹೇಳಿದ್ದಕ್ಕೆ ವಿರುದ್ಧವಾಗಿದೆ ಎಂದು ತೋರಿಬರುತ್ತದೆ, ಆದರೆ ಇದು ಸತ್ಯವಾದದ್ದು. ನಾನಿದನ್ನು ನಿಮಗೆ ಈಗಾಗಲೆ ಹೇಳಿದ್ದೇನೆ, ಸಂದರ್ಭ ಏನೇ ಇರಲಿ ನಾನದನ್ನು ಎಲ್ಲಿಯೋ ಬರೆದಿಟ್ಟಿದ್ದೇನೆ. ಅಲ್ಲಿ ಎರಡು ದೃಷ್ಟಿಕೋನಗಳಿವೆ. ಇಲ್ಲಿ ನಾನು ಬಹಳ ಸಾಧಾರಣವಾದ ಪ್ರಾಪಂಚಿಕ ದೃಷ್ಟಿಕೋನವನ್ನು ಆಯ್ದುಕೊಂಡಿದ್ದೇನೆ, ಅದು ಭೌತಿಕ ಪ್ರಜ್ಞೆಯದಾಗಿದೆ. ಆದರೆ ಎಲ್ಲಿಯೋ ಒಂದೆಡೆ ವಿವರಣೆ ನೀಡಿದ್ದು ಹೀಗಿದೆ: ನಮ್ಮ ಸತ್ತೆಯಲ್ಲಿ ಭಿನ್ನ "ನಿಯಂತ್ರಣಾವಾದ (determinism)ಗಳ ಪದರುಗಳಿವೆ, ಭೌತಿಕ ಅಸ್ತಿತ್ವಕ್ಕೆ ಒಂದು ನಿಯಂತ್ರಣಾವಾದವಿದೆ, ಪ್ರಾಣಿಕ ಅಸ್ತಿತ್ವಕ್ಕೆ ಒಂದು ನಿಯಂತ್ರಣಾವಾದವಿದೆ, ಮಾನಸಿಕ ಅಸ್ತಿತ್ವಕ್ಕೆ ಒಂದು ನಿಯಂತ್ರಣಾವಾದವಿದೆ; ಉಚ್ಚತರ ಮಾನಸಿಕ ಹಾಗೂ ಚೈತ್ಯ ಇವುಗಳಿಗೆ ಒಂದು ನಿಯಂತ್ರಣಾವಾದವಿದೆ. ನಂತರ ಉಚ್ಚತರ ಅಸ್ತಿತ್ವಗಳಿಗೆ ನಿಯಂತ್ರಣಾವಾದಗಳಿವೆ– ಅತಿಮಾನಸ ಅಸ್ತಿತ್ವಕ್ಕೆ ಒಂದು ನಿಯಂತ್ರಣಾವಾದವಿದೆ ಮತ್ತು ಪ್ರತಿಯೊಬ್ಬನ ನಿಯಂತ್ರಣಾವಾದ ಈ ಎಲ್ಲ ನಿಯಂತ್ರಣಾವಾದಗಳಿಂದ ಬರುತ್ತದೆ. (ಇದನ್ನು ನಾನು ಎಲ್ಲಿಯೋ ಬರೆದಿಟ್ಟಿದ್ದೇನೆ ಎಂಬುದರ ಬಗ್ಗೆ ನನಗೆ ನಿಶ್ಚಿತತೆಯಿದೆ.) ಉದಾಹರಣೆಗೆ ಒಂದು ನಿಶ್ಚಿತ ಕ್ಷಣದಲ್ಲಿ ಇಡೀ ಭೌತಿಕ ಹಠಾತ್ತನೆ ಅತಿಮಾನಸದಂತಹ ಅತ್ಯಂತ ಉಚ್ಚತರ ನಿಯಂತ್ರಣಾವಾದದ ಸಂಪರ್ಕದಲ್ಲಿ ಪ್ರವೇಶಮಾಡಿದರೆ, ಮತ್ತು ಅವೆರಡನ್ನೂ ಜೋಡಿಸುವುದರಲ್ಲಿ ಯಶಸ್ವಿಯಾದರೆ, ಆ ಕ್ಷಣದಲ್ಲಿ ನೀವು ನಿಮ್ಮ ಭೌತಿಕ ನಿಯಂತ್ರಣಾವಾದವನ್ನು ಸಂಪೂರ್ಣವಾಗಿ ಬದಲು ಮಾಡುತ್ತೀರಿ: ಭೌತಿಕ ನಿಯಂತ್ರಣಾವಾದ ನಿರ್ಧರಿಸಿದ ಮೃತ್ಯುವನ್ನು ತೆಗೆದು ಹಾಕಲಾಗಿರುತ್ತದೆ, ಮತ್ತು ಪರಿಸ್ಥಿತಿಗಳು ಬದಲಾಗುತ್ತವೆ ಮತ್ತು ಅವುಗಳನ್ನು ಹಿಂದೆ ದೂಡಲಾಗಿರುತ್ತದೆ.

ಉಚ್ಚತರ ನಿಯಂತ್ರಣಾವಾದ ಮಧ್ಯೆ ಪ್ರವೇಶಿಸುವಂತೆ ಮಾಡದಿದ್ದರೆ ನಿಜವಾಗಿ ನೀವು ಏನನ್ನೂ ಬದಲು ಮಾಡಲಾರಿರಿ. ಅದು ಮಾತ್ರ ನಿಮ್ಮ ಭೌತಿಕ

ನಿಯಂತ್ರಣಾವಾದವನ್ನು ಬದಲಿಸಬಲ್ಲದು. ನಿಮ್ಮ ಭೌತಿಕ ನಿಯಂತ್ರಣಾವಾದದಲ್ಲಿ ನೀವು ಉಳಿದುಕೊಂಡುಬಿಟ್ಟರೆ ಮತ್ತು ನಿಮ್ಮ ನಿಯಂತ್ರಣಾವಾದವನ್ನು ಬದಲಿಸಲು ಬಯಸಿದರೆ ನೀವದನ್ನು ಮಾಡಲಾಗುವುದಿಲ್ಲ.

**CWM, 6/47-48** **- ಶ್ರೀಮಾತೆ**

*

**ಆತ್ಮದ ಸುತ್ತ ಭಿನ್ನ ಭಾಗಗಳನ್ನು ಪ್ರಜ್ಞಾಪೂರ್ವಕವಾಗಿ ಸಂಘಟಿಸುವುದು**

**ಪ್ರಶ್ನೆ:** *ಜನರು ಮರಣ ಹೊಂದುತ್ತಿರುವಾಗ, ಕೆಲವೊಮ್ಮೆ ತಾವು ಮರಣ ಹೊಂದಲಿದ್ದೇವೆ ಎಂಬುದನ್ನು ತಿಳಿದುಕೊಂಡಿರುತ್ತಾರೆ. ಮರಣ ತರುತ್ತಿರುವುದಕ್ಕೆ ದೂರ ಹೋಗೆಂದು ಏಕೆ ಹೇಳಲಾಗುವುದಿಲ್ಲ?*

**ಶ್ರೀಮಾತೆ:** ಅಹಾ! ಸರಿ, ಅದು ಜನರ ಮೇಲೆ ಅವಲಂಬಿಸಿರುತ್ತದೆ. ಎರಡು ವಿಷಯಗಳು ಅವಶ್ಯವಾಗಿವೆ. ಮೊಟ್ಟಮೊದಲಿಗೆ ನಿಮ್ಮ ಸತ್ತೆಯಲ್ಲಿರುವ ಯಾವುದೂ ಮರಣವನ್ನಪ್ಪಲು ಬಯಸಬಾರದು. ಅದು ಬಹಳಷ್ಟು ಸಲ ಸಂಭವಿಸುವುದಿಲ್ಲ. ನಿಮ್ಮಲ್ಲಿ ಎಲ್ಲಿಯೋ ಒಂದೆಡೆ ಸೋಲನ್ನು ಒಪ್ಪಿಕೊಳ್ಳುವವನು ಯಾವಾಗಲೂ ಇದ್ದೇ ಇರುತ್ತಾನೆ, ಅಲ್ಲಿ ದಣಿದುಕೊಂಡ ಏನೋ ಒಂದಿರುತ್ತದೆ, ಜುಗುಪ್ಸೆಗೊಳಗಾದ ಏನೋ ಒಂದಿರುತ್ತದೆ, ತನಗೆ ಸಾಕಾಗಿ ಹೋಯಿತು ಎಂದು ಹೇಳುವ ಏನೋ ಒಂದಿರುತ್ತದೆ, ಆಲಸಿಯಾದ ಏನೋ ಒಂದಿರುತ್ತದೆ, ಹೋರಾಡಲು ಬಯಸದ ಏನೋ ಒಂದು ಹೇಳುತ್ತದೆ "ಸರಿ, ಅಹಾ! ಇದು ಮುಗಿದು ಹೋಗಲಿ, ಅಷ್ಟರಮಟ್ಟಿಗೆ ಅದು ಒಳ್ಳೆಯದು". ಅದು ಸಾಕಾಗುತ್ತದೆ. ನೀವು ಮರಣ ಹೊಂದುತ್ತೀರಿ.

ಆದರೆ ವಾಸ್ತವ ಸಂಗತಿ ಹೀಗಿದೆ: ನಿಮ್ಮಲ್ಲಿ ಪರಿಪೂರ್ಣವಾಗಿ ಯಾವುದೂ ಮರಣ ಹೊಂದುವುದನ್ನು ಒಪ್ಪಿಕೊಳ್ಳದಿದ್ದರೆ, ನೀವು ಮರಣ ಹೊಂದುವುದಿಲ್ಲ. ಯಾರೊಬ್ಬರು ಮರಣ ಹೊಂದುವುದಕ್ಕೆ ಅಲ್ಲಿ ಯಾವಾಗಲೂ ಒಂದು ಕ್ಷಣವಿರುತ್ತದೆ, ಬಹುಶಃ ಕ್ಷಣದ ಒಂದು ನೂರಾಂಶದಷ್ಟು ಇರುತ್ತದೆ, ಆಗ ಅವನು ತನ್ನ ಒಪ್ಪಿಗೆ ನೀಡುತ್ತಾನೆ. ಒಪ್ಪಿಕೊಳ್ಳುವ ಈ ಕ್ಷಣವಿರದಿದ್ದರೆ ಅವನು ಮರಣ ಹೊಂದುವುದಿಲ್ಲ.

ಎಲ್ಲ ಭೌತಿಕ ಹಾಗೂ ಪ್ರಾಣಿಕ ನಿಯಮಗಳ ಪ್ರಕಾರ, ನಿಜವಾಗಿ, ಮರಣ ಹೊಂದಬೇಕಾಗಿದ್ದ, ಆದರೆ ಅದನ್ನು ತಿರಸ್ಕರಿಸಿದ ಜನರ ಪರಿಚಯ ನನಗಿತ್ತು. ಅವರು ಹೇಳಿದರು: "ಇಲ್ಲ ನಾನು ಮರಣ ಹೊಂದುವುದಿಲ್ಲ" ಮತ್ತು ಅವರು ಜೀವಂತವಾಗಿ ಉಳಿದುಕೊಂಡರು. ಇನ್ನಿತರರಿದ್ದಾರೆ, ಅವರು ಮರಣ ಹೊಂದುವುದಿರುವುದಿಲ್ಲ, ಆದರೆ ಅವರು ಹೇಳುತ್ತಾರೆ: "ಅಹಾ! ಸರಿ, ಅಷ್ಟರಮಟ್ಟಿಗೆ ಅದು ಬಹಳ ಒಳ್ಳೆಯದು, ಅದು ಮುಗಿದು ಹೋಗುತ್ತದೆ". ಅವರು ಆ ಬಗೆಯವರಾಗಿರುತ್ತಾರೆ ಮತ್ತು ಅದು ಮುಗಿದು ಹೋಗುತ್ತದೆ. ಅಷ್ಟು ಕೂಡ, ಅದಕ್ಕಿಂತ ಹೆಚ್ಚಿನದೇನೂ ಇಲ್ಲ" ನಿಮ್ಮಲ್ಲಿ ಪಟ್ಟುಹಿಡಿಯುವ ಇಚ್ಛೆ ಇರುವ ಆವಶ್ಯಕತೆ ಇಲ್ಲ, ನೀವು ಕೇವಲ "ಸರಿ, ಹೌದು, ನನಗೆ ಸಾಕಷ್ಟಾಗಿ ಹೋಗಿದೆ" ಎಂದು ಹೇಳಬೇಕು ಮತ್ತು ಅದು ಮುಗಿದು ಹೋಗುತ್ತದೆ. ಹಾಗಾಗಿ, ನಿಜವಾಗಿ, ಅದು ಹಾಗಿದೆ. ನೀವು ಹೇಳುತ್ತಿರುವ ಹಾಗೆ ಮೃತ್ಯು ನಿಮ್ಮ ಹಾಸಿಗೆಯ ಬಳಿ ನಿಂತುಕೊಂಡಿರಬಹುದು ಮತ್ತು ನೀವು ಅವನಿಗೆ ಹೇಳಬಹುದು "ನನಗೆ ನೀನು ಬೇಡ, ದೂರ ಹೊರಟು ಹೋಗು" ಮತ್ತು ಅದು ದೂರ ಹೋಗುವ ನಿರ್ಬಂಧಕ್ಕೆ ಒಳಗಾಗುತ್ತದೆ. ಆದರೆ, ಸಾಮಾನ್ಯವಾಗಿ, ಮನುಷ್ಯ ಹಿಂದೆಗೆಯುತ್ತಾನೆ, ಏಕೆಂದರೆ ಅವನು ಹೋರಾಡಬೇಕಾಗುತ್ತದೆ, ಬಲಿಷ್ಠನಾಗಿರಬೇಕಾಗುತ್ತದೆ, ಧೈರ್ಯಶಾಲಿಯಾಗಿರಬೇಕಾಗುತ್ತದೆ ಮತ್ತು ತಾಳ್ಮೆಯುಳ್ಳವನಾಗಿರಬೇಕಾಗುತ್ತದೆ, ಜೀವನದ ಮಹತ್ವದಲ್ಲಿ ಶ್ರೇಷ್ಠ ನಂಬಿಕೆ ಹೊಂದಿರಬೇಕಾಗುತ್ತದೆ, ಉದಾಹರಣೆಗೆ ತಾನಿನ್ನೂ ಏನನ್ನೋ ಕೈಕೊಳ್ಳುವುದಿದೆ ಮತ್ತು ತಾನು ಅದನ್ನು ಪೂರ್ತಿಯಾಗಿ ಮಾಡಲೇಬೇಕು ಎಂದು ದೃಢವಾದ ಭಾವನೆ ತಂದುಕೊಳ್ಳುವ ಮನುಷ್ಯನಿರುತ್ತಾನೆ. ಆದರೆ ಅವನ ಅಂತರಂಗದಲ್ಲಿ, ಎಲ್ಲಿಯೋ ಒಂದೆಡೆ ಕನಿಷ್ಠಮಟ್ಟದ ಸೋಲನ್ನು ಒಪ್ಪಿಕೊಳ್ಳುವಂತಹದು ಇದ್ದು ಶರಣಾಗತವಾಗಿ "ಅದು ಸರಿಯಾಗಿದೆ" ಎಂದು ಹೇಳುವುದಿಲ್ಲ ಎಂಬ ಖಾತರಿ ಯಾರಿಗಿರುತ್ತದೆ? ಇಲ್ಲಿ ಮನುಷ್ಯ ತನ್ನನ್ನು ಏಕತ್ರ–ಗೊಳಿಸಿಕೊಳ್ಳುವುದರ ಆವಶ್ಯಕತೆ ಇರುತ್ತದೆ.

ನಾವು ಯಾವುದೇ ರೀತಿಯನ್ನು ಅನುಸರಿಸಲಿ, ಯಾವುದೇ ವಿಷಯವನ್ನು ಅಭ್ಯಾಸ ಮಾಡಲಿ ಅದೇ ಪರಿಣಾಮವನ್ನು ತಲುಪುತ್ತೇವೆ. ವ್ಯಕ್ತಿಗೆ ಅತ್ಯಂತ ಮಹತ್ವದ ವಿಷಯವೆಂದರೆ ಅವನು ತನ್ನ ದೈವೀ ಕೇಂದ್ರದ ಸುತ್ತ ಏಕತ್ರಗೊಳ್ಳುವುದಾಗಿದೆ; ಆ ರೀತಿಯಲ್ಲಿ ಅವನು ನಿಜವಾದ ವ್ಯಕ್ತಿಯಾಗುತ್ತಾನೆ,

ತನ್ನ ಹಾಗೂ ತನ್ನ ಅದೃಷ್ಟದ ಪ್ರಭುವಾಗುತ್ತಾನೆ. ಹಾಗಿರದಿದ್ದರೆ ಅವನು ಶಕ್ತಿಗಳ ಆಟಿಗೆ ವಸ್ತುವಾಗುತ್ತಾನೆ, ಮರದ ತೊಗಟೆಯ ತುಂಡೊಂದು ನದಿಯಲ್ಲಿ ತೇಲಾಡುವ ಹಾಗೆ ಹೊಯ್ದಾಡಲು ಅವನನ್ನು ಶಕ್ತಿಗಳು ಎಸೆದುಬಿಡುತ್ತವೆ. ಅವನೆಲ್ಲಿ ಹೋಗಲು ಬಯಸುವುದಿಲ್ಲವೋ ಅಲ್ಲಿಗೆ ಹೋಗುತ್ತಾನೆ, ಅವನು ಕೈಕೊಳ್ಳಲು ಬಯಸದ ಕಾರ್ಯಗಳನ್ನು ಅವನಿಂದ ಮಾಡಿಸಲಾಗುತ್ತದೆ, ಮತ್ತು ಕೊನೆಗೆ ಹಿಡಿದುಕೊಳ್ಳಲು ಆಧಾರವಿರದೆ ಇರುವ ರಂಧ್ರದಲ್ಲಿ ಬಿದ್ದುಬಿಡುತ್ತಾನೆ. ಆದರೆ ನೀವು ಪ್ರಜ್ಞಾಪೂರ್ವಕವಾಗಿ ಸಂಘಟಿತರಾಗಿದ್ದರೆ, ದೈವೀ ಕೇಂದ್ರದ ಸುತ್ತ ಏಕತ್ರಗೊಂಡಿದ್ದರೆ, ಅದರ ಆಳಿಕೆಗೆ ಒಳಗಾಗಿದ್ದರೆ, ಅದರಿಂದ ನಿರ್ದೇಶನ ಪಡೆಯುತ್ತಿದ್ದರೆ, ನಿಮ್ಮ ಅದೃಷ್ಟದ ಪ್ರಭುವಾಗಿರುತ್ತೀರಿ. ಅದು ಪ್ರಯತ್ನ ಕೈಕೊಳ್ಳಲು ತೊಂದರೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದೆ.

**CWM, 5/138** **- ಶ್ರೀಮಾತೆ**

*

**ಅಂಧಕಾರದಿಂದ ಕೂಡಿದ ಅಪಾಯಕಾರಿ ಮರಣ**

**ಪ್ರಶ್ನೆ:** *ಆತ್ಮಹತ್ಯೆ ಮಾಡಿಕೊಂಡ ಮನುಷ್ಯ ವೇದನೆಗೆ ಏಕೆ ಒಳಗಾಗುತ್ತಾನೆ?*

**ಶ್ರೀಮಾತೆ:** ಅವನು ಆತ್ಮಹತ್ಯೆ ಏಕೆ ಮಾಡಿಕೊಳ್ಳುತ್ತಾನೆ? ಏಕೆಂದರೆ ಅವನು ಅಂಜುಬುರುಕನಾಗಿರುತ್ತಾನೆ... ಅಂಜುಬುರುಕ ಮನುಷ್ಯ ಯಾವಾಗಲೂ ವೇದನೆಗೆ ಒಳಗಾಗುತ್ತಾನೆ.

**ಪ್ರಶ್ನೆ:** *ಮುಂದಿನ ಜೀವನದಲ್ಲಿ ಅವನು ಮತ್ತೆ ವೇದನೆಗೆ ಒಳಗಾಗುತ್ತಾನೆಯೆ?*

**ಶ್ರೀಮಾತೆ:** ಚೈತ್ಯಸತ್ತೆ ಅನುಭವಗಳ ಒಂದು ಸಂಗ್ರಹ ಮಾಡಿಕೊಳ್ಳುವುದಕ್ಕಾಗಿ, ಕಲಿಯುವುದಕ್ಕಾಗಿ ಮತ್ತು ಪ್ರಗತಿ ಸಾಧಿಸುವುದಕ್ಕಾಗಿ ಒಂದು ನಿಶ್ಚಿತ ಉದ್ದೇಶವನ್ನಿಟ್ಟುಕೊಂಡು ಬರುತ್ತದೆ. ಅದರ ಕಾರ್ಯ ಮುಗಿಯುವ ಮೊದಲು ನೀವು ದೇಹತ್ಯಾಗ ಮಾಡಿದರೆ, ಅದನ್ನು ಕೈಕೊಳ್ಳುವುದಕ್ಕಾಗಿ ಇನ್ನೂ ಹೆಚ್ಚಿನ ಕಠಿಣ ಪರಿಸ್ಥಿತಿಗಳಲ್ಲಿ ಮತ್ತೆ ಜನ್ಮತಾಳಿ ಬರಬೇಕಾಗುತ್ತದೆ. ಹಾಗಾಗಿ ಒಂದು ಜೀವನದಲ್ಲಿ ನೀವು ತಪ್ಪಿಸಿಕೊಂಡದ್ದನ್ನು ಇನ್ನೊಂದು ಜೀವನದಲ್ಲಿ ಮತ್ತೆ ಕಂಡುಕೊಳ್ಳುತ್ತೀರಿ ಮತ್ತು ಅದು ಹೆಚ್ಚು ಕಠಿಣವಾಗಿರುತ್ತದೆ. ಈ ರೀತಿ ದೇಹತ್ಯಾಗ ಮಾಡದೆ ಇದ್ದಾಗಲೂ ಜೀವನದಲ್ಲಿ ತೊಂದರೆಗಳ ಮೇಲೆ ಜಯಸಾಧಿಸುವು–

ದಿರುತ್ತದೆ, ಅದನ್ನು ನಾವು ಒಂದು ಪರೀಕ್ಷೆ ಎಂದು ಕರೆಯುತ್ತೇವೆ, ಸರಿ, ಆ ಪರೀಕ್ಷೆಯನ್ನು ಪಾಸಾಗದಿದ್ದರೆ ಇಲ್ಲವೆ ನೀವು ಅದಕ್ಕೆ ಬೆನ್ನು ತಿರುಗಿಸಿದರೆ, ಅದನ್ನು ಪಾಸಾಗದೆ ದೇಹತ್ಯಾಗ ಮಾಡಿದರೆ, ಅದನ್ನು ಇನ್ನೊಂದು ಸಮಯದಲ್ಲಿ ಪಾಸಾಗಬೇಕಾಗುತ್ತದೆ, ಅದು ಮೊದಲಿನದಕ್ಕಿಂತ ಹೆಚ್ಚು ಕಠಿಣವಾಗಿರುತ್ತದೆ.

ನಿಮಗೆ ತಿಳಿದಿರುವ ಹಾಗೆ, ಜನರು ಅತ್ಯಂತ ಅಜ್ಞಾನಿಗಳಾಗಿರುತ್ತಾರೆ, ಅವರು ಯೋಚಿಸುವ ರೀತಿ ಹೀಗಿದೆ: ಅಲ್ಲಿ ಜೀವನವಿದೆ, ನಂತರ ಮರಣವಿದೆ; ಜೀವನ ತೊಂದರೆಗಳ ಒಂದು ಗೊಂಚಲಿನ ಹಾಗಿರುತ್ತದೆ ಮತ್ತು ನಂತರ ಮರಣ ಶಾಶ್ವತ ಶಾಂತಿ ತಂದುಕೊಡುತ್ತದೆ. ಆದರೆ ಅದು ಆ ರೀತಿಯಲ್ಲಿ ಇಲ್ಲವೇ ಇಲ್ಲ ಮತ್ತು ಸಾಮಾನ್ಯವಾಗಿ ಮನುಷ್ಯ ಜೀವನದಿಂದ ಬಹುಮಟ್ಟಿಗೆ ಸ್ವೇಚ್ಛಾನುಸಾರವಾದ ರೀತಿಯಲ್ಲಿ ಮತ್ತು ಅಜ್ಞಾನದ ಹಾಗೂ ಮಬ್ಬಾದ ಭಾವೋದ್ರೇಕದ ಸ್ಥಿತಿಯಲ್ಲಿ ಮರಣವನ್ನಪ್ಪುವ ಸ್ಥಿತಿಗೆ ಹೋದಾಗ ಅವನು ನೇರವಾಗಿ ಈ ಎಲ್ಲ ಭಾವೋದ್ರೇಕಗಳಿಂದ ಹಾಗೂ ಎಲ್ಲ ಈ ಅಜ್ಞಾನದಿಂದ ಮಾಡಲಾದ ಪ್ರಾಣಿಕ ಲೋಕಕ್ಕೆ ಹೋಗುತ್ತಾನೆ. ರಕ್ಷಣೆ ನೀಡುವ ದೇಹವೂ ಇಲ್ಲದೆ ಅವನು ತಪ್ಪಿಸಿಕೊಳ್ಳಬೇಕೆಂದು ಬಯಸಿದ ತೊಂದರೆಗಳು ಅಲ್ಲಿ ಕಾಣಿಸಿಕೊಳ್ಳುತ್ತವೆ.– ನಿಮಗೆ ಯಾವಾಗಾದರೊಮ್ಮೆ ದುಃಸ್ವಪ್ನವಾಗಿದ್ದರೆ, ಎಂದರೆ, ಪ್ರಾಣಿಕ ಲೋಕದಲ್ಲಿ ದುಡುಕಿನ ತಿರುಗಾಟವಾಗಿದ್ದರೆ, ಸರಿ ನಿಮಗಿರುವ ಉಪಾಯವೆಂದರೆ ಕೂಡಲೆ ದೇಹದಲ್ಲಿ ರಭಸದಿಂದ ಮುನ್ನುಗ್ಗಿ ಬರುವುದಾಗಿದೆ. ಆದರೆ ನೀವು ನಿಮ್ಮ ದೇಹವನ್ನು ನಾಶಮಾಡಿದಾಗ ನಿಮ್ಮನ್ನು ರಕ್ಷಿಸುವುದಕ್ಕೆ ಇನ್ನು ಮುಂದೆ ದೇಹವಿರುವುದಿಲ್ಲ. ಹಾಗಾಗಿ ನೀವು ನಿಮ್ಮನ್ನು ನಿರಂತರ ದುಃಸ್ವಪ್ನದಲ್ಲಿ ಕಂಡುಕೊಳ್ಳುತ್ತೀರಿ. ಏಕೆಂದರೆ, ದುಃಸ್ವಪ್ನಗಳಿಂದ ತಪ್ಪಿಸಿಕೊಳ್ಳುವುದಕ್ಕೆ ನೀವು ಚೈತ್ಯಪ್ರಜ್ಞೆಯಲ್ಲಿರಬೇಕು ಮತ್ತು ನೀವು ಚೈತ್ಯಸತ್ತೆಯ ಪ್ರಜ್ಞೆಯಲ್ಲಿದ್ದಾಗ ವಿಷಯಗಳು ನಿಮಗೆ ತೊಂದರೆ ಕೊಡುವುದಿಲ್ಲ ಎಂಬುದರ ಬಗ್ಗೆ ನಿಶ್ಚಿತತೆಯಿಂದ ಇರಬಹುದು. ಅದು ನಿಜವಾಗಿ ಅಜ್ಞಾನದ ಅಂಧಕಾರದ ಚಲನೆ ಮತ್ತು ನಾನು ಹೇಳಿದ ಹಾಗೆ, ಪೋಷಿಸಿಕೊಂಡು ಬರಬೇಕಾದ ಪ್ರಯತ್ನದ ಎದುರಿಗೆ ಭವ್ಯ ಅಂಜುಬುರುಕು–ತನವಾಗಿರುತ್ತದೆ.

**CWM, 7/23-24** **- ಶ್ರೀಮಾತೆ**

*

## ಸತತ ನೆನಪಿನಲ್ಲಿಟ್ಟುಕೊಳ್ಳುವಿಕೆ ಹಾಗೂ ದೇಹತ್ಯಾಗ ಮಾಡಿ ಹೋಗುವ ಕ್ಷಣ

ಯಾವುದು ಯೋಚನೆ, ಆಂತರಿಕ ಗಮನ, ನಂಬಿಕೆ, ಶ್ರದ್ಧಾ ಇವುಗಳು ಸಂಪೂರ್ಣ ಹಾಗೂ ನಿಶ್ಚಿತ ಒತ್ತುನೀಡುವಿಕೆಯಿಂದ ನೆಲೆಸುವಂತೆ ಮಾಡುತ್ತದೆಯೋ ಅದರಲ್ಲಿ ನಮ್ಮ ಆಂತರಿಕ ಸತ್ತೆ ಬದಲಾಗುವ ಪ್ರವೃತ್ತಿ ಹೊಂದಿರುತ್ತದೆ. ನಾವು ಆ ಉಚ್ಚತರ ಆಧ್ಯಾತ್ಮಿಕ, ಸ್ವ–ವಿಕಾಸ ಪಡೆದ ಅನುಭವಗಳತ್ತ ಹೋದಾಗ ಈ ಪ್ರವೃತ್ತಿ ನಿರ್ಧಾರಕ ಶಕ್ತಿಯಾಗುತ್ತದೆ; ಆ ಅನುಭವಗಳು ಬಾಹ್ಯ ಪ್ರಕೃತಿಗೆ ಗುಲಾಮ–ವಾಗಿರುವ ಸಾಧಾರಣ ಮನೋವೈಜ್ಞಾನಿಕ ಅನುಭವಗಳಿಗಿಂತ ಬಾಹ್ಯ ವಿಷಯಗಳ ಮೇಲೆ ಕಡಿಮೆ ಅವಲಂಬನ ಹೊಂದಿರುತ್ತವೆ. ಯಾವುದರ ಮೇಲೆ ನಾವು ನಮ್ಮ ಮನಸ್ಸನ್ನು ಸ್ಥಿರಗೊಳಿಸಿರುತ್ತೇವೆಯೋ, ಯಾವುದಕ್ಕಾಗಿ ಅಭೀಪ್ಸೆಪಡುತ್ತಿರುವೆವೋ ಅದು ಅಲ್ಲಿ ಏಕಪ್ರಕಾರದಿಂದ ನಾವು ಆಗುತ್ತಿರು–ವುದನ್ನು ನೋಡಬಲ್ಲೆವು. ಹಾಗಾಗಿ ಅಲ್ಲಿ ಯಾವುದೇ ಯೋಚನೆಯ ದಾರಿತಪ್ಪುವಿಕೆ, ಯಾವುದೇ ನೆನಪಿನಲ್ಲಿ ನಿಷ್ಠೆಯಿಲ್ಲದಿರುವಿಕೆ ಇವುಗಳ ಅರ್ಥ ಯಾವಾಗಲೂ, ಬದಲಾವಣೆಯಲ್ಲಿ ತಡವಾಗುವಿಕೆ ಇಲ್ಲವೆ ಅದರ ವಿಧಾನದಲ್ಲಿ ಒಂದು ಬಗೆಯ ಪತನಗೊಳ್ಳುವಿಕೆ ಮತ್ತು ನಾವು ಮೊದಲಿದ್ದುದರತ್ತ ಮರಳಿ ಹೋಗುವಿಕೆ ಆಗಿರುತ್ತದೆ.– ಹೀಗಾಗುವುದು ಕನಿಷ್ಠಪಕ್ಷ ನಾವು ನಮ್ಮ ಹೊಸ ಆಗುವಿಕೆಯನ್ನು ಮೂಲಭೂತವಾಗಿ, ಮಾರ್ಪಡಿಸಲಾಗದಂತೆ ಸ್ಥಿರಗೊಳಿಸದೆ ಇದ್ದಾಗ. ನಾವು ಅದನ್ನು ಕೈಕೊಂಡಾಗ ಮತ್ತು ಅದು ನಮ್ಮ ಅನುಭವದಲ್ಲಿ ಸಾಮಾನ್ಯ ರೀತಿಯದಾದಾಗ ಅದರ ನೆನಪು ಸ್ವ–ಅಸ್ತಿತ್ವದಿಂದ ಉಳಿದುಕೊಳ್ಳುತ್ತದೆ, ಏಕೆಂದರೆ ಈಗ ಅದು ನಮ್ಮ ಪ್ರಜ್ಞೆಯ ಸ್ವಾಭಾವಿಕ ರೂಪವಾಗಿರುತ್ತದೆ. ಜೀವಿಸುವ ಮರ್ತ್ಯಸ್ತರದಿಂದ ಆಚೆಗೆ ಹೋಗುವ ನಿರ್ಣಾಯಕ ಕ್ಷಣದಲ್ಲಿ ಆಗಿರುವ ನಮ್ಮ ಪ್ರಜ್ಞೆಯ ಸ್ಥಿತಿಯ ಮಹತ್ವ ಸ್ಪಷ್ಟವಾಗುತ್ತದೆ. ಆದರೆ ಅದು ಮರಣ ಶಯ್ಯೆಯಲ್ಲಿರುವಾಗಿನ ನೆನಪಲ್ಲ; ಆ ನೆನಪು ಮತಭೇದ ಇರುವುದರೊಂದಿಗೆ ಇಲ್ಲವೆ ನಮ್ಮ ಇಡೀ ಜೀವನದ ರೀತಿಯ ಮೂಲಕ ಹಾಗೂ ನಮ್ಮ ಗತಕಾಲದ ಅಧೀನತೆಯ ಮೂಲಕ ಸಾಕಾಗದಂತೆ ತಯಾರು ಮಾಡಿದುದರೊಂದಿಗೆ ರಕ್ಷಿಸುವ ಈ ಸಾಮರ್ಥ್ಯಹೊಂದಿರುವುದಿಲ್ಲ. ಇಲ್ಲಿ ಗೀತೆಯ ಯೋಚನೆ ಹಾಗೂ ಜನಸಾಮಾನ್ಯರ ಧರ್ಮಗಳ ತೃಪ್ತಿಪಡಿಸುವಿಕೆಗಳು ಹಾಗೂ ಸೌಕರ್ಯಗಳು ಸರಿಸಮವಾಗಿಲ್ಲ, ಅದಕ್ಕೆ ಪುರೋಹಿತ ಕೊನೆಯ ಪಾಪ

ವಿಮೋಚನೆಯನ್ನು ಘೋಷಿಸುವ ಸೂತ್ರ ಹಾಗೂ ಅಭ್ಯಂಜನ ಮಾಡಿಸುವ ಒರಟಾದ ನಿರಾಧಾರ ನಂಬಿಕೆ ಇವು ಮಾಡುವ ಕ್ರಿಶ್ಚಿಯನ್ ಮರಣದ ಆತ್ಮೋದ್ಧಾರದ ಕ್ರಿಯೆಗೆ ಹಾಗೂ ಗೀತೆಯ ಯೋಚನೆಗೆ ಸರಿಸಮವಾದದ್ದು ಯಾವುದೂ ಇಲ್ಲ; ಆ ಕ್ರಿಯೆಯನ್ನು ಆತ್ಮೋದ್ಧಾರ ಮಾಡದ ಲೌಕಿಕ ಜೀವನವನ್ನು ನಡೆಸಿದ ನಂತರ ಮಾಡಲಾಗಿರುತ್ತದೆ. ಕಾಶಿಯಲ್ಲಿ ಇಲ್ಲವೆ ಪವಿತ್ರ ಗಂಗಾ ನದಿಯಲ್ಲಿ ಮುಂಜಾಗ್ರತೆ ವಹಿಸಿ ಆದ ಇಲ್ಲವೆ ಅಪಘಾತದ ಮೂಲಕ ಆದ ಮರಣ ಮುಕ್ತಿಗೆ ಸಾಕಾಗದ ಯಂತ್ರೋಪಕರಣವಾಗಿರುತ್ತದೆ. ಭೌತಿಕ ಮರಣದ ಸಮಯದಲ್ಲಿ ಮನಸ್ಸನ್ನು ಯಾವ ದೃಢವಾಗಿ ವ್ಯಕ್ತಿನಿಷ್ಠ ದೈವಿಕವಾಗುವಿಕೆಯ ಮೇಲೆ ಸ್ಥಿರಗೊಳಿಸಬೇಕೋ, ಯಾಂಸ್ಮರನ್ ಭಾವಮ್ ತ್ಯಜಂತಿ ಅಂತೇ ಕಲೇವರಮ್ ಅದು ಭೌತಿಕ ಜೀವನದಲ್ಲಿ ಯಾವುದರ ಮೇಲೆ ಆತ್ಮ ಪ್ರತಿಕ್ಷಣ ಆಂತರಿಕವಾಗಿ ಬೆಳೆಯುತ್ತಿತ್ತೋ ಅದಾಗಿರಬೇಕು. ಸದಾ ತದ್ ಭಾವ ಭಾವಿತಃ ದೈವೀ ಗುರು ಹೇಳಿದ್ದು ಹೀಗಿದೆ: "ಹಾಗಾಗಿ ಎಲ್ಲ ಕಾಲದಲ್ಲಿ ನನ್ನನ್ನು ಸ್ಮರಿಸುತ್ತಿರು ಹಾಗೂ ಹೋರಾಡು; ಏಕೆಂದರೆ ನಿನ್ನ ಮನಸ್ಸು ಹಾಗೂ ತಿಳಿವಳಿಕೆ ಇವುಗಳನ್ನು, ಯಾವಾಗಲೂ, ನನ್ನ ಮೇಲೆ ಸ್ಥಿರಗೊಳಿಸಿದಾಗ ಹಾಗೂ ನನಗೆ ಅರ್ಪಿಸಿದಾಗ, ಮಯಿ ಅರ್ಪಿತ ಮನೋಬುದ್ಧಿಃ, ನೀನು ನಿಶ್ಚಿತವಾಗಿ ನನ್ನೆಡೆಗೆ ಬರುವಿ. ಏಕೆಂದರೆ, ಯಾವಾಗಲೂ, ಅವನನ್ನು (ಭಗವಂತನನ್ನು) ಕುರಿತು, ಅವನೊಡನೆ ಏಕವಾದ ಪ್ರಜ್ಞೆಯೊಂದಿಗೆ, ಸತತ ಆಚರಿಸುವ ದಾರಿತಪ್ಪದ ಯೋಗದಲ್ಲಿ ಯಾವಾಗಲೂ ಯೋಚಿಸುವುದರ ಮೂಲಕ ಮನುಷ್ಯ ಪರಮೋಚ್ಚ ಪುರುಷನಾದ ಭಗವಂತನೆಡೆಗೆ ಬರುತ್ತಾನೆ."

**CWSA, 19/294-96** **- ಶ್ರೀ ಅರವಿಂದರು**

*

ಯೋಗಿಯೊಬ್ಬನಿಗೆ ಏನನ್ನೋ ಕುರಿತು ಭಯದ ಭಾವನೆ ಬರತೊಡಗಿದ ಕೂಡಲೆ ಅವನು ದೊರಕಿಸಬಹುದಾದ ಅತ್ಯಂತ ಒಳ್ಳೆಯ ಚಿಕಿತ್ಸೆ ಎಂದರೆ ಅವನು ಭಗವಂತನನ್ನು ಕುರಿತು ಯೋಚಿಸಬೇಕು, ನಂತರ ಅವನ ತೋಳುಗಳ ಇಲ್ಲವೆ ಪಾದಗಳ ಹತ್ತಿರ ಸೇರಿಕೊಳ್ಳಬೇಕು ಮತ್ತು ಅಂತರಂಗದಲ್ಲಿ, ಬಾಹ್ಯದಲ್ಲಿ, ಎಲ್ಲೆಡೆಯಲ್ಲಿಯೂ ಸಂಭವಿಸುವ ಪ್ರತಿಯೊಂದಕ್ಕೆ ಅವನನ್ನು ಇಡಿಯಾಗಿ ಜವಾಬ್ದಾರಿ ಹೊತ್ತವನನ್ನಾಗಿ ಮಾಡಬೇಕು– ಮತ್ತು ಕೂಡಲೆ ಭಯ

ಮಾಯವಾಗುವುದು. ಅದು ಯೋಗಿಯಾದವನಿಗೆ ಚಿಕಿತ್ಸೆ, ಅದು ಅತ್ಯಂತ ಸುಲಭವಾದದ್ದು. ಆದರೆ ಪ್ರತಿಯೊಬ್ಬನಿಗೂ ಯೋಗಿಯಾಗುವ ಕೃಪೆಯನ್ನು ದೊರಕಿಸುವ ಸಂತೋಷವಿರುವುದಿಲ್ಲ.

**CWM, 5/318** **- ಶ್ರೀಮಾತೆ**

*

**ಗಾಢ ವಿಸ್ಮೃತಿ (coma)ಯಲ್ಲಿದ್ದಾಗ ಶ್ರೀಮಾತೆಯವರ ಹೆಸರನ್ನು ಪುನರಾವರ್ತಿಸುತ್ತ ಹೇಳುತ್ತಿರುವುದು**

K ತನ್ನ ದೇಹವನ್ನು ತ್ಯಜಿಸಿದ. ಅವನಿಗೆ ಮಾಡಲಾದ ಶಸ್ತ್ರ ಚಿಕಿತ್ಸೆ ಅಸಾಧಾರಣವಾಗಿತ್ತು, ಬಹುಮಟ್ಟಿಗೆ ಪವಾಡ ಸದೃಶವಾಗಿ ಯಶಸ್ವಿಯಾಗಿತ್ತು– ಆ ಶಸ್ತ್ರಚಿಕಿತ್ಸೆ ನಿಮ್ಮ ದೇಹದಿಂದ ಏನನ್ನೋ ಹೊರಗೆಳೆದು ತೆಗೆಯುವ ಭೀತಿಕಾರಕ ಚಿಕಿತ್ಸೆಗಳಲ್ಲಿ ಒಂದಾಗಿತ್ತು. ನಂತರ ನಾಲ್ಕು ದಿನಗಳ ಕಾಲ ಅವನು ಸರಿಯಾಗಿದ್ದ. ನಂತರ ಎಲ್ಲವೂ ತಪ್ಪು ದಾರಿ ಹಿಡಿಯಿತು.

ಶಸ್ತ್ರಚಿಕಿತ್ಸೆಯ ಕಾಲದಲ್ಲಿ ಹಾಗೂ ನಂತರ, ಇಂತಹ ಸಂದರ್ಭಗಳಲ್ಲಿ ನಾನು ಯಾವಾಗಲೂ ಕೈಕೊಳ್ಳುವ ಹಾಗೆ, ಅವನ ಮೇಲೆ ಸರಳ ರೀತಿಯಲ್ಲಿ ದೈವೀಶಕ್ತಿಯನ್ನು ಇರಿಸಿದ್ದೆ, ಅದರಿಂದಾಗಿ ಪ್ರತಿಯೊಂದು ಅತ್ಯಂತ ಒಳ್ಳೆಯದರತ್ತ ಹೊರಳುವಂತಾಯಿತು. ನಂತರ ಕೆಲವು ದಿನಗಳ ಹಿಂದೆ, ನನ್ನ ಜಪದ ಸಮಯದಲ್ಲಿ, ಒಂದು ಬಗೆಯ ಆಜ್ಞೆ ಬಂದಿತು– ಅದೊಂದು ಬಹಳ ಸ್ಪಷ್ಟವಾದ ಆಜ್ಞೆ– ಆ ಆಜ್ಞೆಯ ಪ್ರಕಾರ ನಾನು ಅವನ ಮೇಲೆ ಏಕಾಗ್ರತೆ ವಹಿಸಬೇಕಾಗಿತ್ತು, ಅದರಿಂದಾಗಿ ಅವನು ತನ್ನ ಆತ್ಮದ ಬಗ್ಗೆ ಅರಿವು ತಂದುಕೊಳ್ಳುವಂತಾಗುತ್ತಿತ್ತು, ಮತ್ತು ಅತ್ಯಂತ ಒಳ್ಳೆಯ ಪರಿಸ್ಥಿತಿಗಳಲ್ಲಿ ದೇಹತ್ಯಾಗ ಮಾಡುವಂತಾಗುತ್ತಿತ್ತು. ಏಕಾಗ್ರತೆ ಅದ್ಭುತವಾಗಿ ಕಾರ್ಯಕೈಕೊಂಡದ್ದನ್ನು ನಾನು ನೋಡಿದೆ: ಅವನು ತನ್ನ ಕೊನೆಯ ದಿನಗಳಲ್ಲಿ, ಎಡೆಬಿಡದೆ, ಅರ್ಧ–ವಿಸ್ಮೃತಿಯ ಸ್ಥಿತಿಯಲ್ಲಿದ್ದಾಗಲೂ ಕೂಡ– ಮಾ, ಮಾ, ಮಾ ಎಂದು ಪುನರಾವರ್ತಿಸುತ್ತ ಹೇಳುತ್ತಿದ್ದ.

ಆ ಏಕಾಗ್ರತೆ ಹೆಚ್ಚು ಹೆಚ್ಚಾಗಿ ಬಲವುಳ್ಳದ್ದಾಗುತ್ತ ಹೋಯಿತು, ಮೊನ್ನೆ ಅದು ಬಹಳ ಸಾಮರ್ಥ್ಯಪೂರ್ಣವಾಗಿತ್ತು ಮತ್ತು ನಿನ್ನೆ ಮುಂಜಾನೆ ಹನ್ನೆರಡು ಗಂಟೆಯ ನಂತರದ ಅರ್ಧ ತಾಸಿನಲ್ಲಿ ಅದು ನನ್ನನ್ನು ಒಳಗೆಳೆಯಿತು. ಅವನು

ನನ್ನ ಬಳಿ ಒಂದು ಬಗೆಯ ಪ್ರಜ್ಞಾಪೂರ್ಣವಾದ ನಿದ್ರೆಯ ಸ್ಥಿತಿಯಲ್ಲಿ ಬಂದ, ನಾನು ಬಹುಮಟ್ಟಿಗೆ ದೊಡ್ಡ ಧ್ವನಿಯಲ್ಲಿ 'ಓಹ್, K' ಎಂದು ಹೇಳಿದೆ.

ಅದು ಹದಿನೈದು ನಿಮಿಷಗಳ ಕಾಲ ಉಳಿದುಕೊಂಡಿತ್ತು, ನಾನು ಪೂರ್ತಿಯಾಗಿ, ಅವನನ್ನು ಬರಮಾಡಿಕೊಳ್ಳುವುದಕ್ಕೇನೋ ಎನ್ನುವಂತೆ, ಅಂತರಂಗದಲ್ಲಿ ಉಳಿದುಕೊಂಡಿದ್ದೆ.

**ಅನುಯಾಯಿಯೊಡನೆ ಮಾತುಕತೆ: ಮೇ 28, 1960** **- ಶ್ರೀಮಾತೆ**

*



ನಿಮ್ಮ ದೇಹ ಮತ್ತೆ ಬದುಕುವಂತೆ ಮಾಡಿರೆಂದು ಡಿಸೆಂಬರ 8, 1950ರಂದು ಅವರನ್ನು (ಶ್ರೀ ಅರವಿಂದರನ್ನು) ನಾನು ಕೇಳಿದೆ. ಅವರು ಸ್ಪಷ್ಟವಾಗಿ ಉತ್ತರ ನೀಡಿದರು: "ನಾನು ಈ ದೇಹವನ್ನು ಉದ್ದೇಶಪೂರ್ವಕವಾಗಿ ತ್ಯಜಿಸಿದ್ದೇನೆ. ನಾನು ಅದನ್ನು ಮರಳಿ ತೆಗೆದುಕೊಳ್ಳುವುದಿಲ್ಲ. ಅತಿಮಾನಸ ರೀತಿಯಲ್ಲಿ ನಿರ್ಮಿಸಲಾದ ಮೊದಲ ಅತಿಮಾನಸ ದೇಹದಲ್ಲಿ ನಾನು ಮತ್ತೆ ಪ್ರಕಟವಾಗುತ್ತೇನೆ."

**CWM, 139** **– ಶ್ರೀಮಾತೆ**

*

ನಾನು ಮೃತ್ಯುವನ್ನು ಒಪ್ಪಿಕೊಳ್ಳಬೇಕೇ ಇಲ್ಲವೆ ಹೊರಳಿಕೊಂಡು ಮೃತ್ಯು ದೇವತೆಯೊಡನೆ ಕುಸ್ತಿ ಹಿಡಿದು ಅವನ ಮೇಲೆ ಜಯಸಾಧಿಸಬೇಕೇ? ಅದು ನನ್ನಲ್ಲಿರುವ ದೇವ ಆಯ್ದುಕೊಂಡ ರೀತಿಯದಾಗಿರುತ್ತದೆ. ಏಕೆಂದರೆ ನಾನು ಜೀವಿಸಿರಲಿ ಇಲ್ಲವೆ ಮರಣ ಹೊಂದಿರಲಿ, ನಾನು ಯಾವಾಗಲೂ ಇರುತ್ತೇನೆ.

**CWSA, 12/472–73** – ಶ್ರೀ ಅರವಿಂದರು

*

## ಒಂದು ಜೀವನದಿಂದ ಇನ್ನೊಂದು ಜೀವನದತ್ತ ಸಂಕ್ರಮಣ

### ಜೀವಂತವಿರುವವರು ಹಾಗೂ ಮರಣ ಹೊಂದಿದವರು

ಮನುಷ್ಯ ಮರಣವನ್ನು ಒಂದು ಭೀಕರ ದುರಂತವನ್ನಾಗಿ ಮಾಡಿದ್ದಾನೆ. ಕಳೆದ ಈ ಕೆಲದಿನಗಳಲ್ಲಿ ನಾನಿದನ್ನು ನೋಡಿದ್ದೇನೆ, ಏಕೆಂದರೆ ನಿನ್ನೆ ರಾತ್ರಿ ಇಲ್ಲವೆ ಮೊನ್ನೆ ರಾತ್ರಿ ಸೂಕ್ಷ್ಮ ಭೌತಿಕ ಜಗತ್ತಿನಲ್ಲಿ ಕನಿಷ್ಠ ಪಕ್ಷ ಎರಡು ಗಂಟೆಗಳ ಕಾಲ ಇದ್ದೆ, ಅಲ್ಲಿ ಜೀವಂತವಿದ್ದವರು ಹಾಗೂ ಮರಣಹೊಂದಿದವರು ಯಾವುದೇ ಭಿನ್ನತೆಯನ್ನು ಕಂಡುಕೊಳ್ಳದೆ ಪರಸ್ಪರ ಬೆರೆಯುತ್ತಾರೆ– ಅದು ಯಾವ ವ್ಯತ್ಯಾಸವನ್ನೂ ಉಂಟು ಮಾಡುವುದಿಲ್ಲ. ಅಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಜೀವಂತವಿದ್ದವರು ಅಲ್ಲಿದ್ದರು– ಅವರನ್ನು ನಾವು "ಜೀವಿಸುತ್ತಿರುವವರು" ಎಂದು ಕರೆಯುತ್ತೇವೆ, ಮರಣ ಹೊಂದಿದವರು ಎಂದು ಕರೆದುಕೊಳ್ಳುವವರೂ ಅಲ್ಲಿದ್ದರು. ಅವರು ಒಟ್ಟಿಗೆ ಕೂಡಿಕೊಂಡಿದ್ದರು, ಅವರು ಒಟ್ಟಿಗೆ ಕೂಡಿ ಊಟಮಾಡಿದರು, ಒಟ್ಟಿಗೆ ಕೂಡಿ ಚಲಿಸಿದರು, ಒಟ್ಟಿಗೆ ಕೂಡ ಆಟವಾಡಿದರು; ಇದೆಲ್ಲವೂ ಅಂದವಾದ ಬೆಳಕಿನಲ್ಲಿತ್ತು, ಅಚಂಚಲವಾಗಿತ್ತು ಮತ್ತು ಬಹಳ ಸಂತೋಷಕರವಾಗಿತ್ತು. ನಾನು ನನಗೇ ಹೇಳಿಕೊಂಡೆ: "ಅಲ್ಲಿ ಈ ರೀತಿಯ ಒಂದು ಸುಯೋಗವನ್ನುಂಟು ಮಾಡಿದ್ದಾರೆ ಮತ್ತು ನಂತರ ಹೇಳುತ್ತಾರೆ, 'ಈಗ ಮರಣ ಹೊಂದಿದವರು ಎಂದು' ಮತ್ತು "ಮೃತರಾದವರು"– ಅದರ ಅತ್ಯಂತ ಒಳ್ಳೆಯ ಭಾಗವೆಂದರೆ ಅವರನ್ನು ಪ್ರಜ್ಞಾರಹಿತವಾದ ಏನೋ ಒಂದನ್ನು ಕುರಿತು ಮಾಡುವಂತೆ ನಡೆದುಕೊಳ್ಳುತ್ತಾರೆ.– ಆದಾಗ್ಯೂ ದೇಹ ಪ್ರಜ್ಞೆಯಿಂದಿರುತ್ತದೆ.

**CWM, 10/147** - ಶ್ರೀಮಾತೆ

*

## ಮೃತರಾದವರತ್ತ ಜೀವಂತವಿದ್ದವರ ಮನೋಭಾವ

ಅಲ್ಲಿ ಮನುಷ್ಯನೊಬ್ಬನ ಇನ್ನೊಂದು ನಿದರ್ಶನವಿತ್ತು, ಅವನನ್ನು ಅಂತ್ಯಕ್ರಿಯೆ ಮಾಡುವ ಸ್ಥಳಕ್ಕೆ ಒಯ್ಯಲಾಗಿತ್ತು, ಆದರೆ ಧಾರಾಕಾರವಾಗಿ ಮಳೆ ಬರಲು ಪ್ರಾರಂಭಿಸಿತು– ಅವನನ್ನು ಸುಡುವ ಪ್ರಶ್ನೆ ಇರಲಿಲ್ಲ. ಅವನ ಜೊತೆಗೆ ಬಂದವರು "ಸುಡುವ ಕಾರ್ಯಕ್ರಮವನ್ನು ನಾಳೆ ಮಾಡೋಣ" ಎಂದುಕೊಂಡು ಅವನನ್ನು ಅಲ್ಲಿಯೇ ಬಿಟ್ಟುಕೊಟ್ಟು ಹೋದರು. ಆದರೆ ಮರುದಿನ ಬೆಳಿಗ್ಗೆ ಅವರು ಅಲ್ಲಿ ಹೋದಾಗ ಅಲ್ಲಿ ಅವನು ಇರಲೇ ಇಲ್ಲ! (ನಗುತ್ತ) ಅವನು ಹೋಗಿ ಬಿಟ್ಟಿದ್ದನು. ಆದರೆ ಅದಷ್ಟೇ ಅಲ್ಲ; ಮೂವತ್ತು ವರ್ಷಗಳ ನಂತರ ಅವನು ಮರಳಿ ಬಂದ (ಅವನೊಬ್ಬ ರಾಜನಾಗಿದ್ದ): ಅವನನ್ನು ಸನ್ಯಾಸಿಗಳು ಎತ್ತಿಕೊಂಡು ಹೋಗಿದ್ದರು, ಏಕಾಂತದಲ್ಲಿರಿಸಲು ಒಯ್ದಿದ್ದರು ಅವನೂ ಸನ್ಯಾಸಿಯಾಗಿಬಿಟ್ಟಿದ್ದ. ಯಾವ ಕಾರಣಕ್ಕಾಗಿಯೇನೋ ದೇವರಿಗೆ ಗೊತ್ತು, ತಾನು ಮೊದಲಿದ್ದಲ್ಲಿಗೆ ಹೋಗಿ ತನ್ನ ಸಂಪತ್ತಿನ ಮೇಲೆ ಹಕ್ಕು ಸಾಧಿಸಬೇಕೆಂದು ಯೋಚಿಸಿದ. ಹೀಗೆ ಅವನು ನಿಜವಾಗಿ ಅದೇ ಮನುಷ್ಯನಾಗಿದ್ದೆ ಎಂದು ತೋರಿಸಲು ಪ್ರಮಾಣಗಳ ಜೊತೆಗೆ ಮರಳಿ ಹೋದ.

ಆ ಬಗೆಯ ಲೆಕ್ಕಕ್ಕಿಡಲಾರದಷ್ಟು ಕತೆಗಳನ್ನು ನಾನು ಕೇಳಿದ್ದೇನೆ, ಅವು ಜನರ ದೃಷ್ಟಿಕೋನವನ್ನು ತೋರಿಸುತ್ತವೆ, ಅವರು ಮೃತರಾದವರನ್ನು ತೊಡೆದು ಹಾಕಲು ಬಯಸುತ್ತಾರೆ, ಅಲ್ಲವೆ! ತೀವ್ರಗತಿಯಲ್ಲಾದಷ್ಟು ಹೆಚ್ಚು ಒಳ್ಳೆಯದು.

ಮೃತರಾದವರನ್ನು ಕುರಿತು ಜೀವಂತವಿದ್ದವರ ಮನೋಭಾವ, ಮನುಕುಲದ ಸ್ವಾರ್ಥದಿಂದ ಕೂಡಿದ, ಅಜ್ಞಾನದಿಂದ ಉಂಟಾಗುವ ಅತ್ಯಂತ ಜುಗುಪ್ಸೆ ತರಿಸುವ ವಿಷಯಗಳಲ್ಲೊಂದು. ಅದು ಸಂಪೂರ್ಣವಾಗಿ "ನಾನು ಕಡಿಮೆ ಕಾಳಜಿ ವಹಿಸಲಿಲ್ಲ" ಎಂಬ ಮನೋಭಾವ ಇಲ್ಲವೆ "ಓಹ್ ಅದನ್ನು ತೊಡೆದು ಹಾಕಲು ಏನಾದರೂ ಇದ್ದರೆ ಸಾಕು" ಎನ್ನುವ ಮನೋಭಾವ. ಇಲ್ಲಿ ಕೆಲವು ಮಕ್ಕಳಿದ್ದಾರೆ (ಈಗ ಅವರು ದೊಡ್ಡವರಾಗಿದ್ದಾರೆ) ಅವರು ತಮ್ಮ ತಂದೆ–ತಾಯಿಗಳೊಂದಿಗೆ (ಅವರಿಗೆ ಬಹಳ ವಯಸ್ಸಾಗಿಲ್ಲ) ಜೀವಿಸುತ್ತಾರೆ ಮತ್ತು ಅವರಲ್ಲಿ ಕೆಲವರು ತಮ್ಮ ಕನಸುಗಳನ್ನು ಕುರಿತು ಹೇಳಿದರು, ಆ ಕನಸುಗಳಲ್ಲಿ ತಮ್ಮ ತಂದೆ–ತಾಯಿಗಳು ಮೃತರಾಗಿರುವುದನ್ನು ಮತ್ತು ಅವರು ತಮ್ಮ ಮಕ್ಕಳೆಡೆಗೆ ಬರುತ್ತಿದ್ದನ್ನು ನೋಡಿದ್ದರು, ಆ ಮಕ್ಕಳು ಅವರನ್ನು ಹಿಂಸಾತ್ಮಕ ರೀತಿಯಲ್ಲಿ ಮರಳಿ

ಹೋಗುವಂತೆ ಮಾಡಿದರು. ಆಗ ಅವರಿಗೆ ಹೇಳಿದ್ದು ಹೀಗಿದೆ: "ನೀವು ಮೃತರಾಗಿದ್ದೀರಿ, ನೀವು ಇಲ್ಲಿಗೆ ಬಂದು ನಮಗೆ ತೊಂದರೆ ಕೊಡುವುದಕ್ಕೆ ನಿಮಗೆ ಹಕ್ಕಿಲ್ಲ!"

ಅದಿರುವುದು ಹಾಗೆ. ಹಾಗೆ ಹೇಳಲು ಸಾಕಷ್ಟು ಮುಗ್ಧರಾಗಿರುವ ಜನರು ಬಹಳ ಕಡಿಮೆ ಸಂಖ್ಯೆಯಲ್ಲಿರುತ್ತಾರೆ, ಆದರೆ ಅದು ಬಹಳ ವಿಸ್ತಾರವಾಗಿ ಹರಡಿಕೊಂಡಿದೆ.

ಸತ್ಯ ಸ್ವಲ್ಪಮಟ್ಟಿಗಾದರೂ ಪ್ರಕಟವಾಗುವುದಕ್ಕೆ ಬಹಳಷ್ಟು ವಿಷಯಗಳು ಬದಲಾಗಬೇಕಾಗುತ್ತದೆ– ಎಂಬುದನ್ನು ಮಾತ್ರ ನಾನು ಹೇಳಬಲ್ಲೆ.

**ಅನುಯಾಯಿಯೊಂದಿಗೆ ಮಾತುಕತೆ: ಅಗಸ್ಟ 10, 1963** **- ಶ್ರೀಮಾತೆ**

*

**ದಹನಕ್ರಿಯೆಗಾಗಿ ಗಡಿಬಿಡಿ ಮಾಡುವುದು ಬೇಡ**

ಮೃತರಾದವರನ್ನು ದಹನ ಮಾಡಲು ಜನರು ಬಹಳ ಅವಸರಪಡಿಸಿದಾಗ ಕೆಲವೊಮ್ಮೆ ಜೀವಂತವಾಗಿರುವವರನ್ನೇ ದಹನ ಮಾಡಿಬಿಡುತ್ತಾರೆ. ಅವರು ಕಾದುಕೊಂಡಿರಬೇಕು.

ಏಕೆಂದರೆ ರೂಪದ ಪ್ರಜ್ಞೆಯೊಂದಲ್ಲಿದೆ, ಆ ರೂಪದ ಜೀವನವಿದೆ. ಜೀವಕೋಶಗಳಿಂದ ಧಾರಣ ಮಾಡಿದ ರೂಪದಲ್ಲಿ ಒಂದು ಪ್ರಜ್ಞೆಯಿದೆ. ಅದು ಹೊರಗೆ ಬರಲು ಏಳು ದಿನಗಳು ಬೇಕಾಗುತ್ತವೆ. ಹಾಗಾಗಿ ಕೆಲವೊಮ್ಮೆ ದೇಹ ಸುಡುತ್ತಿರುವಾಗ ಥಟ್ಟನೆಯ ಚಲನೆಯನ್ನು ಮಾಡುತ್ತದೆ– ಅದು ಯಾಂತ್ರಿಕ–ವಾದದ್ದು ಎಂದು ಜನರು ಹೇಳುತ್ತಾರೆ. ಅದು ಯಾಂತ್ರಿಕವಾದದ್ದಲ್ಲ ಎಂಬುದು ನನಗೆ ತಿಳಿದಿದೆ.

ನನಗೆ ಅದು ತಿಳಿದಿದೆ. ಈ ರೂಪದ ಪ್ರಜ್ಞೆ ಅಸ್ತಿತ್ವದಲ್ಲಿದೆ, ಏಕೆಂದರೆ– ನಾನು ನಿಜವಾಗಿ ಅದರ ಹೊರಗೆ ಹೊರಟುಹೋಗಿದ್ದೆ. ಒಮ್ಮೆ, ಬಹಳ ದಿನಗಳ ಹಿಂದೆ ನಾನು ಮೂರ್ಛೆಯ ರೋಗ ಎಂದು ಕರೆಯಲಾದದ್ದರಲ್ಲಿದ್ದೆ, ನಂತರ ಸ್ವಲ್ಪ ಕಾಲ ಕಳೆದ ಮೇಲೆ ಈ ಸ್ಥಿತಿಯಲ್ಲಿದ್ದಾಗ ದೇಹ ಮತ್ತೆ ಜೀವಿಸುವುದನ್ನು ಪ್ರಾರಂಭಿಸಿತು. ಎಂದರೆ ಅದು ಮಾತನಾಡಲು, ಚಲಿಸಲೂ ಕೂಡ ಸಮರ್ಥವಾಗಿತ್ತು. (ಥಿಯೋನ್ ನನಗೆ ಈ ತರಬೇತು ನೀಡಿದ್ದ.) ದೇಹ ಮೇಲಕ್ಕೆದ್ದು ಚಲಿಸುವುದನ್ನು

ನಿರ್ವಹಿಸುತ್ತಿತ್ತು ಮತ್ತು ಆದಾಗ್ಯೂ ಅದರೊಳಗಿದ್ದ ಪ್ರತಿಯೊಂದೂ ಹೊರಟು ಹೋಗಿತ್ತು.

ಒಮ್ಮೆ ದೇಹದಿಂದ ಎಲ್ಲವೂ ಹೊರಟು ಹೋದಾಗ, ಅದು ಸ್ವಾಭಾವಿಕವಾಗಿ ತಣ್ಣಗಾಗತೊಡಗಿತು, ಆದರೆ ದೈಹಿಕ ಪ್ರಜ್ಞೆ ಗಾಳಿಯಿಂದ ಮತ್ತು ಅದರಿಂದ, ಇದರಿಂದ ಸ್ವಲ್ಪ ಚೈತನ್ಯವನ್ನು ಎಳೆದುಕೊಳ್ಳುತ್ತದೆ. ನಾನು ಈ ಸ್ಥಿತಿಯಲ್ಲಿದ್ದಾಗ ಮಾತನಾಡಿದೆ– ಸರಿಯಾಗಿಯೇ ಮಾತನಾಡಿದೆ ಅಲ್ಲದೆ ಬೇರೆಡೆ ಎಲ್ಲೆಲ್ಲಿಯೂ ಇರುವುದನ್ನು ಕುರಿತು ವಿವರಿಸಿ ಹೇಳಿದೆ.

ಹಾಗಾಗಿ ಜನರ ದೇಹಗಳನ್ನು ಸುಡುವುದು ನನಗೆ ಇಷ್ಟವಾಗುವುದಿಲ್ಲ. ಇಲ್ಲಿ ಭಾರತದಲ್ಲಿ (ಗಲೀಜಾದ ರೋಗಗಳಿಂದ ಮೃತರಾದ ಜನರ ಸಂದರ್ಭಗಳನ್ನು ಹೊರತುಪಡಿಸಿ ಇಡಿಯಾಗಿ ಆರೋಗ್ಯಕ್ಕೆ ಸಂಬಂಧಿಸಿದ ಆಲೋಚನೆಯಿಂದ) ಅದನ್ನು ಕೈಕೊಳ್ಳುತ್ತಾರೆ, ಮುಖ್ಯವಾಗಿ ಏಕೆಂದರೆ ಆಸೆಗಳಿಂದ, ಪ್ರಚೋದನೆಗಳಿಂದ ಬರುವ ಚಿಕ್ಕ ಅಸ್ತಿತ್ವಗಳ ಬಗ್ಗೆ ಭಯಪಡುತ್ತಾರೆ... ಆ ವಿಷಯಗಳನ್ನು ಗಾಳಿಯಲ್ಲಿ ಚೆದುರಿಸಲಾಗಿರುತ್ತದೆ ಮತ್ತು ಅವು ಎಲ್ಲ ವಿಷಯಗಳೊಡನೆ ಕೂಡಿಕೊಂಡು ಭೂತಗಳನ್ನುಂಟು ಮಾಡುತ್ತವೆ. ಎಲ್ಲ ಆಸೆಗಳು, ಆಸಕ್ತಿಗಳು ಮುರಿದುಹೋಗುವ ತುಂಡುಗಳ ಹಾಗಿರುತ್ತವೆ. (ಪ್ರತಿಯೊಂದೂ ತನ್ನ ಮಾರ್ಗದಲ್ಲಿ ಹೊರಟು ಹೋಗುತ್ತದೆ) ನಂತರ ಆ ತುಂಡುಗಳು ಬಲವನ್ನು ಗಳಿಸುತ್ತವೆ ಮತ್ತು ಯಾರೊಬ್ಬರೊಡನೆ ತಮ್ಮನ್ನು ಭದ್ರಪಡಿಸಿಕೊಂಡಾಗ ಅವು ಅವನನ್ನು ರಕ್ತಪಿಶಾಚಿ (vampire)ಯನ್ನಾಗಿ ಮಾಡುತ್ತವೆ. ಮತ್ತು ಅವು ತಮ್ಮ ಆಸೆಗಳಿಗೆ ತೃಪ್ತಿ ನೀಡಲು ಪ್ರಯತ್ನಿಸುತ್ತ ಹೋಗುತ್ತವೆ.

ಈ ಜಗತ್ತು, ಪೃಥ್ವಿಯ ಮೇಲಿನ ವಾತಾವರಣ ಕೊಳೆಯಿಂದ ತುಂಬಿಕೊಂಡಿವೆ.

ಮತ್ತು ಇಲ್ಲಿಯ ಜನರು ಯುರೋಪನಲ್ಲಿ ಇರುವವರಿಗಿಂತ ಹೆಚ್ಚು ಸೂಕ್ಷ್ಮಸಂವೇದಿಗಳಾಗಿರುತ್ತಾರೆ, ಏಕೆಂದರೆ ಅವರು ಹೆಚ್ಚಿನ ಪ್ರಮಾಣದಲ್ಲಿ ಆತ್ಮದೊಡನೆದ ಸಂಬಂಧ ಕಲ್ಪಿಸಿಕೊಂಡಿರುತ್ತಾರೆ. ಹಾಗಾಗಿ ಅವರು ಈ ಚಿಕ್ಕ ಅಸ್ತಿತ್ವಗಳ ಬಗ್ಗೆ ಪ್ರಜ್ಞೆಯುಳ್ಳವರಾಗಿರುತ್ತಾರೆ ಮತ್ತು ಸ್ವಾಭಾವಿಕವಾಗಿ ಭಯಪಡುತ್ತಾರೆ ಮತ್ತು ಅವರು ಹೆಚ್ಚು ಭಯಪಟ್ಟುಕೊಂಡರೆ, ಅವರನ್ನು ಹೆಚ್ಚಿನ ಪ್ರಮಾಣದಲ್ಲಿ ರಕ್ತಪಿಶಾಚೀಕರಣಗೊಳಿಸಲಾಗುತ್ತದೆ!

ಬೆಂಕಿಯಿಂದ ಈ ಅಸ್ತಿತ್ವಗಳಲ್ಲಿ ಬಹಳಷ್ಟನ್ನು ಚೆದುರಿಸಲಾಗುತ್ತದೆ– ಅದು ಭಾರೀ ಅವ್ಯವಸ್ಥೆಯನ್ನು ಉಂಟುಮಾಡುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ: ಮೇ 28, 1960** **- ಶ್ರೀಮಾತೆ**

*

ಸತ್ಯ ಹೇಳುವುದಾದರೆ ಮೃತರಾದವರನ್ನು ಆ ರೀತಿಯಲ್ಲಿ ಸುಡುತ್ತಾರೆ, ಅದು ಪ್ರಾಣಿಕವನ್ನು ನಾಶ ಮಾಡುವದಕ್ಕಿರುತ್ತದೆ. ಅದರ ಬಗ್ಗೆ ನನಗೆ ನಿಶ್ಚಿತತೆ ಇದೆ. ಭೂತಗಳನ್ನು ಹೊಂದಿರಬಾರದು ಎಂಬ ವಿಚಾರದಿಂದ ಅದನ್ನು ಕೈಕೊಳ್ಳಲಾಗುತ್ತದೆ.

*

**ಮೃತರಾದವರನ್ನು ಗೌರವ ಹಾಗೂ ಕಾಳಜಿಯಿಂದ ನಡೆಸಿಕೊಳ್ಳಬೇಕು**

ಮಾನವ ಸತ್ತೆಗಳು ಮೃತ್ಯು ಹೊಂದುವಿಕೆಯನ್ನು ದಿಗಿಲುಗೊಳಿಸುವ ದುರಂತವನ್ನಾಗಿ ಮಾಡಿದ್ದಾರೆ. ಇತ್ತೀಚಿನ ನನ್ನ ಅನುಭವಗಳಿಂದ ಎಷ್ಟೊಂದು ಬಡ ಜನರನ್ನು (ಅವರು ಹೆಚ್ಚಿನ ರೀತಿಯಲ್ಲಿ ಪ್ರೀತಿಸಿದ ಜನರಿಂದಲೇ) ನಾಶಮಾಡಲಾಯಿತು ಎಂಬುದನ್ನು ನೋಡಿದ್ದೇನೆ. ಅವರು ಮೃತರಾಗಿದ್ದಾರೆ ಎಂಬ ನೆಪದಿಂದ.

ಜನರು ಅವರಿಗೆ ಬಹಳ ಕೆಟ್ಟ ಸಮಯ ತಂದುಕೊಡುತ್ತಾರೆ.

**ಪ್ರಶ್ನೆ:** *ನಾಶಮಾಡಲಾಯಿತೆ?*

**ಶ್ರೀಮಾತೆ:** ಹೌದು, ಸುಡಲಾಯಿತು. ಇಲ್ಲವೆ ಪೂರ್ತಿ ಪ್ರಜ್ಞೆಯಿದ್ದವರನ್ನು ಗಾಳಿ, ಬೆಳಕು ಇರದ ಪೆಟ್ಟಿಗೆಯಲ್ಲಿ ಭದ್ರಪಡಿಸಿ ಇಡಲಾಗುತ್ತಿತ್ತು. ಮತ್ತು ಅದಕ್ಕೆ ಕೇವಲ ಕಾರಣ ಅವರು ಇನ್ನುಮುಂದೆ ತಮ್ಮನ್ನು ಅಭಿವ್ಯಕ್ತಪಡಿಸಲಾಗದಂತಹರಾಗಿದ್ದರು. ಜನರು ಅಂತಹರನ್ನು ಮೃತರಾದವರು ಎಂದು ಹೇಳುತ್ತಾರೆ. ಅವರು ಮೃತರಾಗಿದ್ದಾರೆ ಎಂದು ಹೇಳುವುದರಲ್ಲಿ ಜನರು ವೇಳೆಯನ್ನು ಹಾಳುಮಾಡುವುದಿಲ್ಲ. ಅವರು ಪ್ರಜ್ಞೆಯುಳ್ಳವರಾಗಿರುತ್ತಾರೆ. ಚಲಿಸಲಾಗದ, ಮಾತನಾಡಲಾಗದ ಯಾರೊಬ್ಬರನ್ನು ಕಲ್ಪನೆ ಮಾಡಿಕೊಳ್ಳಿರಿ– ಮಾನವ ನಿಯಮಗಳ ಪ್ರಕಾರ ಅವನು ಮೃತನಾಗಿರುತ್ತಾನೆ. ಅವನು ಮೃತನಾಗಿರುತ್ತಾನೆ, ಆದರೂ ಪ್ರಜ್ಞೆಯಿದ್ದವನಾಗಿರುತ್ತಾನೆ. ಅವನು

ಪ್ರಜ್ಞೆಯಿದ್ದವನಾದ್ದರಿಂದ ತನ್ನ ಸುತ್ತಲಿರುವ ಜನರನ್ನು ನೋಡುತ್ತಾನೆ, ಕೆಲವರು ಅಳುತ್ತಿರುತ್ತಾರೆ, ಅವನಲ್ಲಿ ಸ್ವಲ್ಪಮಟ್ಟಿಗೆ ಅತೀಂದ್ರಿಯ ಶಕ್ತಿ ಇದ್ದುದಾದರೆ ಅಲ್ಲಿ ಕೆಲವರು ಸಂತೋಷಪಡುತ್ತಿರುವುದನ್ನೂ ನೋಡುತ್ತಾನೆ. ನಂತರ ತನ್ನನ್ನು ಒಂದು ಪೆಟ್ಟಿಗೆಯಲ್ಲಿ ಇರಿಸಲಾಗಿದೆ ಎಂಬುದನ್ನು ನೋಡುತ್ತಾನೆ, ಮುಚ್ಚಳಕ್ಕೆ ಮೊಳೆಗಳನ್ನು ಹೊಡೆದದ್ದನ್ನು ನೋಡುತ್ತಾನೆ: "ಅಹಾ, ಈಗ ಎಲ್ಲವೂ ಮುಗಿದು ಹೋಯಿತು, ಅವರು ನನ್ನನ್ನು ಮಣ್ಣಿನಲ್ಲಿ ಮುಚ್ಚಿಡಲಿದ್ದಾರೆ!" ಇಲ್ಲವೆ ಅವನನ್ನು ಶವಸಂಸ್ಕಾರ ಮಾಡುವ ಸ್ಥಳಕ್ಕೆ ಕರೆದೊಯ್ಯುತ್ತಾರೆ, ಆಗ ಅಲ್ಲಿ ಬಾಯಲ್ಲಿ ಬೆಂಕಿ– ಪೂರ್ತಿ ಪ್ರಜ್ಞೆಯಿದ್ದಾಗ.

ಇತ್ತೀಚೆಗೆ ನಾನು ಇದರೊಡನೆ ಜೀವಿಸಿದ್ದೇನೆ, ನಾನದನ್ನು ನೋಡಿದ್ದೇನೆ. ಕಳೆದ ರಾತ್ರಿ ಇಲ್ಲವೆ ಮೊನ್ನೆ ರಾತ್ರಿ ಸೂಕ್ಷ್ಮಭೌತಿಕ ಜಗತ್ತಿನಲ್ಲಿ ಕನಿಷ್ಠಪಕ್ಷ ಎರಡು ಗಂಟೆಗಳ ಕಾಲ ಇದ್ದೆ– ಅಲ್ಲಿ ಜೀವಂತವಿದ್ದವರು ಮೃತರಾದವರೊಂದಿಗೆ ಜೊತೆಗೂಡುತ್ತಾರೆ, ಯಾವ ವ್ಯತ್ಯಾಸವನ್ನೂ ಕಂಡುಕೊಳ್ಳುವುದಿಲ್ಲ. ಅದು ಸಂಪೂರ್ಣವಾಗಿ ಯಾವ ವ್ಯತ್ಯಾಸವನ್ನೂ ಉಂಟುಮಾಡುವುದಿಲ್ಲ. ಉದಾಹರಣೆಗೆ M ತನ್ನ ದೇಹದಲ್ಲಿದ್ದಾಗ ಅವಳನ್ನು ರಾತ್ರಿ ಕಾಲದಲ್ಲಿ ವರ್ಷಕ್ಕೊಮ್ಮೆ ನೋಡುತ್ತಿದ್ದೆ (ಬಹುಶಃ ಅಷ್ಟರಮಟ್ಟಿಗೂ ಇರಲಿಕ್ಕಿಲ್ಲ). ಹಲವಾರು ವರ್ಷಗಳ ಕಾಲ ಅವಳು ನನ್ನ ಪ್ರಜ್ಞೆಯಲ್ಲಿ ಅಸ್ತಿತ್ವದಲ್ಲಿರಲಿಲ್ಲ... ಆದರೆ ಅವಳು ದೇಹವನ್ನು ತ್ಯಜಿಸಿದ ನಂತರ ನಾನು ಅವಳನ್ನು ಬಹುಮಟ್ಟಿಗೆ ಪ್ರತಿದಿನ ರಾತ್ರಿ ನೋಡುತ್ತೇನೆ. ಅವಳು ಮೊದಲಿದ್ದ ಹಾಗೆ (ಸ್ಥೂಲಕಾಯವಿದ್ದುದರ ಸಂಜ್ಞೆ) ಅಲ್ಲಿದ್ದಾಳೆ, ಆದರೆ ಅಲ್ಲಿ ಯಾವ ತೊಂದರೆಯೂ ಇರುವುದಿಲ್ಲ, ಅಷ್ಟೇ ನಾವು "ಜೀವಿಸಿರುವವರು" ಎಂದು ಕರೆಯುವ ಹಾಗೂ "ಮೃತರಾದವರೆಂದು" ಎಂದು ಕರೆಯುವ ಎರಡೂ ಬಗೆಯ ಜನರಲ್ಲಿದ್ದರು... ಅವರು ಒಟ್ಟಿಗಿರುತ್ತಿದ್ದರು. ಒಟ್ಟಿಗೆ ಊಟ ಮಾಡುತ್ತಿದ್ದರು, ಒಟ್ಟಿಗೆ ತಿರುಗಾಡುತ್ತಿದ್ದರು, ಸುತ್ತಲೂ ಒಟ್ಟಿಗೆ ಚಲಿಸುತ್ತಿದ್ದರು, ಒಟ್ಟಿಗೆ ಮೋಜು ಮಾಡುತ್ತಿದ್ದರು, ಅದೆಲ್ಲವನ್ನೂ ಅವರು ಪ್ರಶಾಂತ ಬೆಳಕಿನಲ್ಲಿ ಕೈಕೊಳ್ಳುತ್ತಿದ್ದರು– ಅದು ಬಹಳ ಹರ್ಷದಾಯಕವಾಗಿತ್ತು. "ಈಗ ಅವನು ಮೃತನಾದ" ಎಂದು ಹೇಳುತ್ತ ಮಾನವರು ಒಂದು ಸೂಕ್ಷ್ಮಗೆರೆಯನ್ನೆಳೆದಿದ್ದಾರೆ. ಯಾವುದು ಎಲ್ಲವನ್ನೂ ಮೀರಿಸುತ್ತದೆಯೆಂದರೆ ಅವರು ದೇಹವನ್ನು ಒಂದು ಪ್ರಜ್ಞೆಯಿರದ ವಸ್ತು ಎಂದು ನಡೆಸಿಕೊಳ್ಳುವುದಾಗಿದೆ, ಮತ್ತು ಅದು ಇನ್ನೂ ಪ್ರಜ್ಞೆಯಿಂದಿರುತ್ತದೆ!

ಅದನ್ನು ಒಂದು ವಸ್ತುವಿನ ಹಾಗೆ ನಡೆಸಿಕೊಳ್ಳುತ್ತಾರೆ: "ಈಗ ಇದನ್ನು ಸಾಧ್ಯವಿದ್ದಷ್ಟು ತೀವ್ರಗತಿಯಲ್ಲಿ ತೊಡೆದುಹಾಕಿ ಬಿಡೋಣ, ಅದೊಂದು ಅನಿಷ್ಟ ಮತ್ತು ಅದು ದಾರಿಯಲ್ಲಿ ಅಡ್ಡ ಬರುತ್ತದೆ." ಅತ್ಯಂತ ದುಃಖದ ಭಾವನೆ ತಂದುಕೊಂಡವರೂ ಕೂಡ ಅದನ್ನು ನೋಡಲು ಬಯಸುವುದಿಲ್ಲ; ಅದು ಅವರಿಗೆ ಬಹಳ ನೋವು ತಂದುಕೊಡುವಂತಹದಾಗಿರುತ್ತದೆ.

**ಅನುಯಾಯಿಯೊಡನೆ ಮಾತುಕತೆ: ಅಕ್ಟೋಬರ 12, 1962** **- ಶ್ರೀಮಾತೆ**

*

**ಮೃತರಾದವರಿಗೆ ಸಹಾಯ ಮಾಡುವುದು**

**ಪ್ರಶ್ನೆ:** *ಮೃತ್ಯುವಿನ ಸಮಯದಲ್ಲಿ, ಪ್ರಾಣಿಕದ ಮೇಲೆ ಪ್ರಾಣಿಕ ಲೋಕದಲ್ಲಿ, ವಿರೋಧೀ ಶಕ್ತಿಗಳು ಆಕ್ರಮಣ ಮಾಡಿದರೆ ಅದು ಆಸರೆಗಾಗಿ ಬೇರೆ ಎಲ್ಲಿಯೋ ಒಂದೆಡೆಯನ್ನು ನೋಡುತ್ತದೆಯೆ?*

**ಶ್ರೀಮಾತೆ:** ಹೌದು, ಮತ್ತು ಈ ಕಾರಣಕ್ಕಾಗಿಯೆ ಎಲ್ಲ ದೇಶಗಳಲ್ಲಿ, ಎಲ್ಲ ಮತಧರ್ಮಗಳಲ್ಲಿ ಸಲಹೆ ನೀಡಿದ್ದು ಹೀಗಿದೆ: ಯಾರೊಬ್ಬರು ಮೃತರಾದಾಗ ಕನಿಷ್ಠಪಕ್ಷ ಏಳುದಿನಗಳ ಕಾಲ ಅವನ ಬಳಿ ಇದ್ದ ಜನರು ಒಟ್ಟುಗೂಡಬೇಕು ಮತ್ತು ಅವನನ್ನು ಕುರಿತು ಯೋಚಿಸಬೇಕು. ಏಕೆಂದರೆ ಅವನನ್ನು ಮಮತೆಯಿಂದ (ಯಾವುದೇ ಆಂತರಿಕ ಅಸ್ತವ್ಯಸ್ತತೆಯಿಲ್ಲದೆ, ರೋದನ ಮಾಡದೆ, ತಳಮಳಗೊಂಡ ಭಾವೋದ್ರೇಕಗಳಲ್ಲಿ ಯಾವುದನ್ನೂ ಇರಿಸಿಕೊಳ್ಳದೆ) ಯೋಚಿಸಿದಾಗ, ನೀವು ಸ್ಥಿರರಾಗಿ ಉಳಿದುಕೊಂಡರೆ, ನಿಮ್ಮ ವಾತಾವರಣ ಅವನಿಗೆ ದಾರಿತೋರುವ ಸಂಜ್ಞೆಯಾಗುತ್ತದೆ, ಮತ್ತು ಅವನು ವಿರೋಧೀ ಶಕ್ತಿಗಳ ಆಕ್ರಮಣಕ್ಕೊಳಗಾದಾಗ (ನಾನು ಸಹಜವಾಗಿ ಪ್ರಾಣಿಕ ಸತ್ತೆ ಕುರಿತು ಹೇಳುತ್ತಿದ್ದೇನೆ, ಚೈತ್ಯಸತ್ತೆ ಕುರಿತಾಗಿಯಲ್ಲ, ಅದು ವಿಶ್ರಾಂತಿಪಡೆಯಲು ಹೋಗಿರುತ್ತದೆ) ಕಳೆದುಹೋದ ಭಾವನೆ ತಂದುಕೊಳ್ಳಬಹುದು, ಏನನ್ನು ಕೈಕೊಳ್ಳಬೇಕು ಎಂಬುದು ಅವನಿಗೆ ತಿಳಿಯದೆ ಹೋಗಬಹುದು, ಮತ್ತು ಅವನು ತನ್ನನ್ನು ತೀವ್ರಯಾತನೆಯಲ್ಲಿ ಕಂಡುಕೊಳ್ಳಬಹುದು; ಆಗ ಅವನು ನೆಂಟಸ್ತಿಕೆಯ ಮೂಲಕ ತನ್ನನ್ನು ಮಮತೆಯಿಂದ ಯೋಚಿಸುತ್ತಿರುವವರ ಪ್ರಕಾಶವನ್ನು ನೋಡುತ್ತಾನೆ ಮತ್ತು ಅಲ್ಲಿಗೆ ಧಾವಿಸಿ ಹೋಗುತ್ತಾನೆ. ಪ್ರಾಣಿಕ ರೂಪತಾಳುವಿಕೆ ಮೃತನಾದವನ ಒಂದು ಭಾಗವೆಂದಾಗಿ (ಇಲ್ಲವೆ ಕೆಲವೊಮ್ಮೆ ಇಡೀ ಪ್ರಾಣಿಕ ಅದು ಸರಿಯಾಗಿ

ಸಂಘಟಿತವಾಗಿದ್ದರೆ) ಬಹುಮಟ್ಟಿಗೆ ಸತತ ನಡೆಯುತ್ತಿರುತ್ತದೆ, ಅದು ಅವನನ್ನು ಪ್ರೀತಿಸಿದ ಜನರ ಪ್ರಭಾಮಂಡಲದಲ್ಲಿ, ವಾತಾವರಣದಲ್ಲಿ ಆಸರೆ ಪಡೆಯುತ್ತದೆ. ಕೆಲವು ಜನರಿದ್ದಾರೆ, ಅವರು ಮೃತನಾದವನ ಪ್ರಾಣಿಕದ ಒಂದು ಭಾಗವನ್ನು ತಮ್ಮೊಡನೆ, ಯಾವಾಗಲೂ, ಕೊಂಡೊಯ್ಯುತ್ತಾರೆ. ಅದು ಸಮಾರಂಭಗಳು ಎಂದು ಕರೆಯಲಾದವುಗಳ ನಿಜವಾದ ಉಪಯುಕ್ತತೆ, ಹಾಗಿರದಿದ್ದರೆ ಅವುಗಳಿಗೆ ಯಾವ ಅರ್ಥವೂ ಇರುತ್ತಿರಲಿಲ್ಲ. ಸಮಾರಂಭಗಳಿಲ್ಲದೆ ಅದನ್ನು ಕೈಕೊಳ್ಳುವುದನ್ನು ಅರಿಸಿಕೊಳ್ಳುವುದು ಹೆಚ್ಚು ಯೋಗ್ಯವಾದದ್ದು. ನೀವು ಸಮಾರಂಭವೊಂದರಲ್ಲಿ ಕಾರ್ಯನಿರತರಾದಾಗ ಯಾವ ಮೃತ ವ್ಯಕ್ತಿಯನ್ನು ಕುರಿತು ಅದಿರುತ್ತದೆಯೋ ಅವನನ್ನು ಕುರಿತು ಯೋಚಿಸುವುದಕ್ಕಿಂತ ಹೆಚ್ಚಾಗಿ ಸಮಾರಂಭದ ಬಗ್ಗೆ ಯೋಚಿಸುತ್ತೀರಿ. ಇಂತಹ ಒಂದು ವೃತಾಚರಣೆಯನ್ನು ಅನುಸರಿಸುತ್ತ ಅದಕ್ಕೆ ಸಂಬಂಧಿಸಿದ ಸಂಜ್ಞೆಗಳು, ಚಲನೆಗಳು ಇವುಗಳೊಡನೆ, ಮೃತನಾದ ವ್ಯಕ್ತಿಯನ್ನು ಕುರಿತು ಯೋಚಿಸುವುದಕ್ಕಿಂತ ಹೆಚ್ಚಾಗಿ ಕಾರ್ಯನಿರತರಾಗಿರುತ್ತೀರಿ.

**CWM, 4/204-05** **- ಶ್ರೀಮಾತೆ**

*

ಮೃತ್ಯುವಿನ ಅರ್ಥ ಇನ್ನೊಂದು ದೇಶಕ್ಕೆ ಸಾಗಿ ಹೋಗುವುದಾಗಿದೆ, ಅದನ್ನು ಕುರಿತು ಸಂಕಟಪಡುವ ಆವಶ್ಯಕತೆ ಇಲ್ಲ.– ನೀವು ನಿದ್ರೆ ಮಾಡುತ್ತಿರುವಾಗ ಬಹಳಷ್ಟು ಸಲ ಅಲ್ಲಿಗೆ ಹೋಗಿ ಬಂದಿರುತ್ತೀರಿ.

ಮನುಷ್ಯನಲ್ಲಿ ಆಸಕ್ತಿಗಳಿರುವವರೆಗೆ ಅದು ಹಾಗಿರುತ್ತದೆ– ಮತ್ತು ಅದನ್ನು ಆ ರೀತಿ ನೋಡಬೇಕು. ಆದರೆ ಗತಕಾಲದ ಎಲ್ಲ ಬಂಧನಗಳಿಗೆ ಇರುವ ಆಸಕ್ತಿಯ ಮೇಲೆ ಜಯಸಾಧಿಸಬೇಕು.

*

ಸಹಜವಾಗಿ ಅದೇ ನಿಜವಾದ ವಾಸ್ತವ ಸಂಗತಿ– ಮೃತ್ಯು ಕೇವಲ ದೇಹವನ್ನು ಬಿಟ್ಟುಕೊಡುವುದಾಗಿರುತ್ತದೆ. ವ್ಯಕ್ತಿಗತ ಅಸ್ತಿತ್ವ ನಿಂತು ಹೋಗುವುದಿಲ್ಲ. ಮನುಷ್ಯನೊಬ್ಬ ಬೇರೆ ದೇಶಕ್ಕೆ ಹೋಗಿ ಅಲ್ಲಿ ತನ್ನ ಅರಿವೆಗಳನ್ನು ಅಲ್ಲಿಯ ಹವಾಮಾನಕ್ಕೆ ತಕ್ಕಂತೆ ಬದಲು ಮಾಡಿದರೆ ಅವನು ಮೃತನಾಗಿರುವುದಿಲ್ಲ.

**CWSA, 28/529** **- ಶ್ರೀ ಅರವಿಂದರು**

*

ಸಂಭವಿಸಿದ್ದನ್ನು ದೈವ ಸಂಕಲ್ಪವೆಂದು ಮತ್ತು ಜೀವನದಿಂದ ಇನ್ನೊಂದು ಜೀವನಕ್ಕೆ ಸಾಗಿ ಹೋಗುವುದು ಆತ್ಮದ ಪ್ರಗತಿಗೆ ಅತ್ಯಂತ ಒಳ್ಳೆಯದೆಂದು ಸ್ಥಿರತೆಯಿಂದ ಒಪ್ಪಿಕೊಳ್ಳಬೇಕು, ಆದಾಗ್ಯೂ ಕೇವಲ ಪ್ರಸ್ತುತ ಹಾಗೂ ಬಾಹ್ಯ ತೋರಿಕೆಯತ್ತ ನೋಡುವ ಮಾನವ ಕಣ್ಣುಗಳಿಗೆ ಅದು ಅತ್ಯಂತ ಒಳ್ಳೆಯದಾಗಿರುವುದಿಲ್ಲ, ಆಧ್ಯಾತ್ಮಿಕ ಜೀವನವನ್ನು ಅರಸುವವನಿಗೆ ಮೃತ್ಯು ಕೇವಲ ಒಂದು ರೀತಿಯ ಜೀವನದಿಂದ ಇನ್ನೊಂದು ರೀತಿಯ ಜೀವನದತ್ತ ಸಾಗಿ ಹೋಗುವುದಾಗಿದೆ ಮತ್ತು ಯಾರೂ ಮೃತರಾಗಿರುವುದಿಲ್ಲ, ಆದರೆ ಕೇವಲ ಹೊರಟುಹೋಗಿರುತ್ತಾರೆ. ಅದನ್ನು ಆ ರೀತಿಯದೆಂದು ನೋಡು ಮತ್ತು ನಿನ್ನಿಂದ ಎಲ್ಲ ಪ್ರಾಣಿಕ ದುಃಖದ ಪ್ರತಿಕ್ರಿಯೆಗಳನ್ನು ಅಲುಗಾಡಿಸಿಬಿಡು, ಅವು ಅವನ ಪ್ರಯಾಣದಲ್ಲಿ ಅವನಿಗೆ ಸಹಾಯಕವಾಗುವುದಿಲ್ಲ. ಭಗವಂತನತ್ತ ಸಾಗುವ ಮಾರ್ಗವನ್ನು ದೃಢವಾಗಿ ಬೆಂಬತ್ತುತ್ತಿರು.

ಮೃತ್ಯುವಿನ ನಂತರ ಒಂದು ಅವಧಿ ಇರುತ್ತದೆ, ಅದರಲ್ಲಿ ಮನುಷ್ಯ ಪ್ರಾಣಿಕಲೋಕದಲ್ಲಿಂದ ಸಾಗಿ ಹೋಗುತ್ತಾನೆ, ಮತ್ತು ಸ್ವಲ್ಪ ಕಾಲ ಅಲ್ಲಿ ಉಳಿದು–ಕೊಂಡಿರುತ್ತಾನೆ, ಈ ಸಂಕ್ರಮಣದ ಮೊದಲ ಭಾಗ ಅಪಾಯಕಾರಿಯಾಗಿರುತ್ತದೆ ಇಲ್ಲವೆ ನೋವಿನಿಂದ ಕೂಡಿರುತ್ತದೆ. ಉಳಿದವುಗಳಲ್ಲಿ ಮನುಷ್ಯ ದೇಹದಲ್ಲಿ ಹಿಡಿದಿಟ್ಟುಕೊಂಡಿದ್ದ ಉಳಿದ ಅಲ್ಪಸ್ವಲ್ಪ ಪ್ರಾಣಿಕ ಆಸೆಗಳು ಹಾಗೂ ಹುಟ್ಟುಗುಣಗಳು ಇವುಗಳೊಡನೆ ಕೆಲವೊಂದು ಸುತ್ತುವರಿದಿರುವವುಗಳ ಅಡಿಯಲ್ಲಿ ಕಾರ್ಯಕೈಕೊಳ್ಳುತ್ತಾನೆ. ಇವುಗಳಿಂದ ದಣಿದುಕೊಂಡಾಗ ಮತ್ತು ಇವುಗಳಿಂದಾಚೆಗೆ ಹೋಗಲು ಶಕ್ತನಾದ ಕೂಡಲೆ ಪ್ರಾಣಿಕ ಕೋಶ (sheath) ಕಳಚಿ ಹೋಗುತ್ತದೆ ಮತ್ತು ಆತ್ಮ ಮಾನಸಿಕ ಅವಶೇಷಗಳನ್ನು ತೊಡೆದು ಹಾಕುವುದಕ್ಕೆ ಅವಶ್ಯವಾದ ಸಮಯವನ್ನು ಕಳೆದ ನಂತರ ಚೈತ್ಯಸತ್ತೆಯ ಜಗತ್ತಿನಲ್ಲಿ ವಿಶ್ರಾಂತಿ ಇರುವ ಸ್ಥಳಕ್ಕೆ ಹೋಗುತ್ತದೆ, ಮತ್ತು ಅಲ್ಲಿ ಪೃಥ್ವಿಯ ಮೇಲೆ ಮುಂದಿನ ಜನ್ಮ ಬರುವವರೆಗೆ ಉಳಿದುಕೊಳ್ಳುತ್ತದೆ.

ಮೃತ್ಯುವಿಗೀಡಾದ ಆತ್ಮಕ್ಕೆ ಮನುಷ್ಯ ತನ್ನ ಸದಿಚ್ಛೆಯಿಂದ ಇಲ್ಲವೆ ಅವನಿಗೆ ರಹಸ್ಯ ಸಾಧನದ ವಿದ್ಯೆ ತಿಳಿದಿದ್ದರೆ ಅದರ ಮೂಲಕ ಸಹಾಯ ಸಲ್ಲಿಸಬಲ್ಲನು. ಮಾಡಬಾರದ ಕಾರ್ಯವೊಂದು ಹೀಗಿದೆ:– ಮೃತರಾದವರನ್ನು ಕುರಿತು ಅವರಿಗಾಗಿ ದುಃಖಪಡುವುದರ ಮೂಲಕ, ಹಂಬಲಿಸುವುದರ ಇಲ್ಲವೆ ಇನ್ನಾವುದರ

ಮೂಲಕ ಅವರು ಹಿಂದುಳಿದುಕೊಳ್ಳುವಂತೆ ಮಾಡಬಾರದು ಅದು ಪೃಥ್ವಿಯೆಡೆಗೆ ಎಳೆತಕ್ಕೊಳಗಾಗುವಂತೆ ಮಾಡುತ್ತದೆ ಇಲ್ಲವೆ ವಿಶ್ರಾಂತಿ ಸ್ಥಾನಕ್ಕೆ ತಲುಪುವ ಅವರ ಪ್ರಯಾಣವನ್ನು ನಿಧಾನಗೊಳಿಸುತ್ತದೆ.

**CWSA, 28/529-30** **- ಶ್ರೀ ಅರವಿಂದರು**

*

ಕವಿಗಳು ಮೃತ್ಯುವನ್ನು ಹಾಗೂ ಬಾಹ್ಯ ಕಡುಸಂಕಟಗಳನ್ನು ಬಹಳ ದೊಡ್ಡ ವಿಷಯಗಳೆಂಬಂತೆ ಮಾಡುತ್ತಾರೆ. ಆದರೆ ಇರುವ ಕೇವಲ ದುರಂತಗಳೆಂದರೆ ಆತ್ಮಗಳ ವಿಫಲತೆಯಾಗಿರುತ್ತದೆ ಮತ್ತು ಕೇವಲ ಇರುವ ಮಹಾಕಾವ್ಯ ಎಂದರೆ ಮನುಷ್ಯ ದೈವತ್ವದತ್ತ ಪರಮೋತ್ಸಾಹದ ಆರೋಹಣ ಮಾಡುವ ವಿಷಯವನ್ನೊಳಗೊಂಡದ್ದಾಗಿರುತ್ತದೆ.

*

ಓ, ಅಮರ ಆತ್ಮವೇ ನಿನ್ನನ್ನು ಕೊಲ್ಲಬಲ್ಲವರಾರು? ಎಂದೆಂದಿಗೂ ಸಂತೋಷದಿಂದಿರುವ ಓ, ದೇವನೆ ನಿನ್ನನ್ನು ಪೀಡಿಸಬಲ್ಲವರಾರು?

**CWSA, 12/463, 461** **- ಶ್ರೀ ಅರವಿಂದರು**

*

ಮಹಾದುರಂತದಿಂದಾದ ನಿನ್ನ ಪತ್ನಿಯ ಮರಣದಿಂದ ನಿನಗಾಗಿರ–ಬಹುದಾದ ಆಘಾತವನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಆದರೆ ಈಗ ನೀನು ಆಧ್ಯಾತ್ಮಿಕ ಜೀವನವನ್ನು ಅರಸುತ್ತಿರುವಿ, ದೈವೀಸತ್ಯ ಕುರಿತು ಸಾಧನೆ ಮಾಡುತ್ತಿರುವಿ ಮತ್ತು ಹಾಗಾಗಿ ನಿನ್ನ ಮನಸ್ಸನ್ನು ಮಾನವ ಸತ್ತೆಯ ಸಾಮಾನ್ಯ ಪ್ರತಿಕ್ರಿಯೆಗಳ ಮೇಲ್ಗಡೆಗಿರಿಸಬೇಕು ಮತ್ತು ವಿಷಯಗಳನ್ನು ಹೆಚ್ಚು ಭವ್ಯವಾದ ಶ್ರೇಷ್ಠತರ ಪ್ರಕಾಶದಲ್ಲಿ ನೋಡಬೇಕು. ಕಳೆದುಕೊಂಡ ನಿನ್ನ ಪತ್ನಿಯನ್ನು ಅದೃಷ್ಟದ ಹೆಚ್ಚು ಕಡಿಮೆಗಳಿರುವ ಅವಿದ್ಯೆಯ ಮೂಲಕ ಪ್ರಗತಿ ಸಾಧಿಸುತ್ತಿದ್ದ ಆತ್ಮವೆಂದು ಭಾವಿಸು– ಇಲ್ಲಿರುವ ಇನ್ನಿತರರಿಗೆ ಆಗುವ ಹಾಗೆ– ಆ ಪ್ರಗತಿಯಲ್ಲಿ ಮಾನವ ಮನಸ್ಸಿಗೆ ದುರ್ದೈವದ್ದೆಂದು ತೋರಿಬರುವ ವಿಷಯಗಳು ಸಂಭವಿಸುತ್ತವೆ ಮತ್ತು ನಾವು ಜೀವನವೆಂದು ಕರೆಯುವ ಪೃಥ್ವಿಯ ಮೇಲಿನ ಅನುಭವದ ಸ್ವಲ್ಪಕಾಲವನ್ನು ಅತಿ ಮುಂಚೆ ಕಡಿದು ಹಾಕಿ ಕಡಿಮೆ ಮಾಡುವ, ಹಠಾತ್ತನೆ ಸಂಭವಿಸುವ

ಅಪಘಾತದಿಂದಾಗುವ ಮರಣ ಇಲ್ಲವೆ ದುರ್ಮರಣ ಮಾನವ ಮನಸ್ಸಿಗೆ ವಿಶೇಷವಾಗಿ ನೋವನ್ನುಂಟು ಮಾಡುತ್ತದೆ ಮತ್ತು ದುರ್ದೈವದ್ದಾಗಿರುತ್ತದೆ. ಆದರೆ ಬಾಹ್ಯ ದೃಷ್ಟಿಯಿಂದ ಹಿಂದೆ ಸರಿದು ನೋಡುವ ಮನುಷ್ಯ ಆತ್ಮದ ಪ್ರಗತಿಯಲ್ಲಿ ಸಂಭವಿಸುವುದೆಲ್ಲದಕ್ಕೆ ಅದರ ಅರ್ಥವಿದೆ, ಅದರ ಆವಶ್ಯಕತೆ ಇದೆ, ಅನುಭವಗಳ ಸರಣಿಯಲ್ಲಿ ಅದರ ಸ್ಥಾನವಿದೆ ಎಂಬುದನ್ನು ತಿಳಿದಿರುತ್ತಾನೆ, ಆ ಅನುಭವಗಳು ಅದರ ನಿರ್ಣಾಯಕ ಘಟ್ಟದತ್ತ ಕರೆದೊಯ್ಯುತ್ತವೆ, ಆ ಘಟ್ಟದಲ್ಲಿ ಮನುಷ್ಯ ಅವಿದ್ಯೆಯಲ್ಲಿಂದ ದೈವೀ ಪ್ರಕಾಶದತ್ತ ಸಾಗಿ ಹೋಗಬಲ್ಲನು. ಭಗವಂತನ ದೈವಾನುಗ್ರಹದಲ್ಲಿ ಸಂಭವಿಸುವುದು ಏನೇ ಇರಲಿ, ಅದು ಅತ್ಯಂತ ಒಳ್ಳೆಯದಾಗಿರುತ್ತದೆ, ಆದಾಗ್ಯೂ ಮನಸ್ಸಿಗೆ ಅದು ಬೇರೆ ಏನೋ ಎನ್ನುವಂತೆ ತೋರಿಬರಬಹುದು. ನಿನ್ನ ಪತ್ನಿಯನ್ನು ಅಸ್ತಿತ್ವದ ಎರಡು ಸ್ಥಿತಿಗಳ ನಡುವಿರುವ ತಡೆಗಟ್ಟನ್ನು ದಾಟಿ ಹೋದ ಆತ್ಮವೆಂದು ಭಾವಿಸು. ಸ್ಥಿರಗೊಂಡ ಯೋಚನೆಗಳ ಮೂಲಕ ಹಾಗೂ ಅವಳಿಗೆ ಸಹಾಯ ಮಾಡೆಂದು ಭಗವಂತನಿಗೆ ಕರೆಕೊಡುವುದರ ಮೂಲಕ ಅವಳು ತನ್ನ ವಿಶ್ರಾಂತಿ ಸ್ಥಾನಕ್ಕೆ ಕೈಕೊಳ್ಳುತ್ತಿರುವ ಪ್ರಯಾಣಕ್ಕೆ ಸಹಾಯಮಾಡು. ದೀರ್ಘಕಾಲ ಮುಂದುವರಿದುಕೊಂಡು ಬಂದ ದುಃಖ ಸಹಾಯ ಮಾಡುವುದಿಲ್ಲ, ಆದರೆ ಮೃತರಾದವರ ಆತ್ಮದ ಪ್ರಯಾಣವನ್ನು ನಿಧಾನಗೊಳಿಸುತ್ತದೆ. ಕಳೆದು ಹೋದದ್ದನ್ನು ಕುರಿತು ಚಿಂತಾಕುಲನಾಗಬೇಡ, ಆದರೆ ಅವಳ ಆಧ್ಯಾತ್ಮಿಕ ಯೋಗಕ್ಷೇಮವನ್ನು ಕುರಿತು ಚಿಂತನೆ ಮಾಡು.

**CWSA, 28/528** **- ಶ್ರೀ ಅರವಿಂದರು**

*

## ಮೃತ್ಯುವಿನ ನಂತರ ಏನು ಸಂಭವಿಸುತ್ತದೆ?

### ದೇಹ ನಿಮ್ಮ ಕೋಟೆ ಮತ್ತು ಆಶ್ರಯ

ಮಾನವ ಸತ್ತೆ ಭೌತಿಕ ದೇಹದಲ್ಲಿ ತನ್ನ ಮನೆಯಲ್ಲಿರುತ್ತದೆ, ಸುರಕ್ಷಿತ–ವಾಗಿರುತ್ತದೆ, ದೇಹ ಅದರ ರಕ್ಷಣೆಯಾಗಿರುತ್ತದೆ, ಕೆಲವರಿರುತ್ತಾರೆ, ಅವರಿಗೆ ತಮ್ಮ ದೇಹಗಳ ಬಗ್ಗೆ ಅಸಡ್ಡೆಯಿರುತ್ತದೆ, ಮೃತ್ಯುವಿನ ನಂತರ ಅವುಗಳಿಲ್ಲದೆ ವಿಷಯಗಳು ಬಹಳ ಒಳ್ಳೆಯವಾಗುತ್ತವೆ ಎಂದು ಯೋಚಿಸುತ್ತಾರೆ. ಆದರೆ

ವಾಸ್ತವದಲ್ಲಿ ದೇಹ ನಿಮ್ಮ ಕೋಟೆಯಾಗಿದೆ, ಆಶ್ರಯ ಸ್ಥಾನವಾಗಿದೆ. ನೀವು ಅದರಲ್ಲಿ ವಾಸ ಮಾಡುತ್ತಿರುವಾಗ ವಿರೋಧೀ ಜಗತ್ತಿನ ಶಕ್ತಿಗಳು ಯಾವುದೇ ಬಗೆಯ ನೇರ ಹಿಡಿತವನ್ನು ನಿಮ್ಮ ಮೇಲೆ ಸಾಧಿಸುವುದು ಕಷ್ಟವಾದದ್ದೆಂದು ಕಂಡುಕೊಳ್ಳುತ್ತವೆ. ದುಃಸ್ವಪ್ನಗಳೆಂದರೇನು? ಇವು ಪ್ರಾಣಿಕ ಲೋಕದಲ್ಲಿ ನಿಮ್ಮ ಮೇಲೆ ಹೊರದಾಳಿ (sorties)ಗಳಾಗಿರುತ್ತವೆ. ನೀವು ದುಃಸ್ವಪ್ನದ ಹಿಡಿತದಲ್ಲಿದ್ದಾಗ ನೀವು ಯಾವುದನ್ನು ಮೊದಲು ಪ್ರಯತ್ನಿಸುತ್ತೀರಿ? ನೀವು ರಭಸದಿಂದ ದೇಹದತ್ತ ಬರುತ್ತೀರಿ ಮತ್ತು ನಿಮ್ಮ ಸಾಮಾನ್ಯ ಭೌತಿಕ ಪ್ರಜ್ಞೆಯಲ್ಲಿ ಬರಲು ನಿಮ್ಮನ್ನು ಅಲುಗಾಡಿಸುತ್ತೀರಿ. ಆದರೆ ಪ್ರಾಣಿಕ ಶಕ್ತಿಗಳ ಲೋಕದಲ್ಲಿ ನೀವು ಪರಕೀಯರಾಗಿರುತ್ತೀರಿ; ಅದು ನಕ್ಷೆ ಗುರುತಿಸಿರದ ಸಮುದ್ರದ ಹಾಗಿರುತ್ತದೆ, ಅಲ್ಲಿ ನಿಮ್ಮ ಬಳಿ ಚುಕ್ಕಾಣಿ ಹಲಗೆ ಇರುವುದಿಲ್ಲ, ದಿಕ್ಸೂಚಿ (compass) ಇರುವುದಿಲ್ಲ. ಹೇಗೆ ಹೋಗಬೇಕೆಂಬುದು ನಿಮಗೆ ತಿಳಿದಿರುವುದಿಲ್ಲ, ಎಲ್ಲಿಗೆ ಹೋಗಬೇಕೆಂದು ನಿಮಗೆ ತಿಳಿದಿರುವುದಿಲ್ಲ ಮತ್ತು ಪ್ರತಿಯೊಂದು ಹೆಜ್ಜೆಯಲ್ಲಿ ಯಾವುದನ್ನು ಕೈಕೊಳ್ಳಬಾರದೋ ಅದನ್ನೇ ಮಾಡುತ್ತೀರಿ. ಈ ಜಗತ್ತಿನ ಯಾವುದೇ ಪ್ರಾಂತವನ್ನು ನೇರವಾಗಿ ಪ್ರವೇಶಿಸಿರಿ, ಅಲ್ಲಿಯ ಸತ್ತೆಗಳು ನಿಮ್ಮ ಸುತ್ತ ಒಟ್ಟುಗೂಡುತ್ತವೆ ಮತ್ತು ನಿಮ್ಮನ್ನು ಸುತ್ತುಗಟ್ಟಲು ಬಯಸುತ್ತವೆ, ನಿಮ್ಮಲ್ಲಿರುವುದನ್ನೆಲ್ಲ ದೊರಕಿಸಲು ಪ್ರಯತ್ನಿಸುತ್ತವೆ, ಮತ್ತು ಎಳೆದುಕೊಳ್ಳಲು ಶಕ್ಯವಾದದ್ದನ್ನು ಎಳೆದುಕೊಳ್ಳುತ್ತವೆ, ಮತ್ತು ಅದನ್ನು ಆಹಾರವನ್ನಾಗಿ, ಬೇಟೆಯನ್ನಾಗಿ ಮಾಡುತ್ತವೆ. ನಿಮ್ಮಲ್ಲಿ ನಿಮ್ಮಂತರಂಗದಿಂದ ಹೊರಸೂಸುವ ಯಾವ ಬಲವಾದ ಪ್ರಕಾಶವಿರದಿದ್ದರೆ, ಮತ್ತು ಶಕ್ತಿಯಿರದಿದ್ದರೆ, ನಿಮ್ಮ ದೇಹವಿಲ್ಲದೆ ಅಲ್ಲಿ ಚಲಿಸುತ್ತೀರಿ, ನಿಮ್ಮನ್ನು ಚಳಿಯಿಂದ ಕೊರೆಯುವ ವಾತಾವರಣದ ವಿರುದ್ಧ ರಕ್ಷಿಸಲು ನಿಮ್ಮ ಬಳಿ ಕೋಟೆಯಿರುವುದಿಲ್ಲ, ನಿಮ್ಮನ್ನು ಕಾಪಾಡಲು ಮನೆ ಇರುವುದಿಲ್ಲ, ನಿಮ್ಮನ್ನು ಹೊದಿಸಲು ಚರ್ಮವಿರುವುದಿಲ್ಲ, ನಿಮ್ಮ ನರಗಳು ತೆರೆದಿಟ್ಟುಕೊಂಡಿರುತ್ತವೆ, ನಗ್ನವಾಗಿರುತ್ತವೆ. “ಈ ದೇಹದಲ್ಲಿ ನಾನು ಅದೆಷ್ಟು ಅಸಂತುಷ್ಟನಾಗಿದ್ದೇನೆ” ಎಂದು ಹೇಳುವ ಜನರಿರುತ್ತಾರೆ ಮತ್ತು ಮೃತ್ಯು ಒಂದು ಪಾರಾಗಿ ಹೋಗುವಿಕೆ ಎಂದು ಯೋಚಿಸುತ್ತಾರೆ! ಆದರೆ ಮೃತ್ಯುವಿನ ನಂತರ ಅದೇ ಪ್ರಾಣಿಕದ ಪರಿಸರವಿರುತ್ತದೆ, ನಿಮ್ಮ ಈ ಜೀವನದಲ್ಲಿ ನಿಮ್ಮ ದುಃಖಕ್ಕೆ ಕಾರಣವಾಗಿದ್ದ ಅವೇ ಶಕ್ತಿಗಳಿಂದ ಅಪಾಯಕ್ಕೊಳಗಾಗುವ ಸನ್ನಿವೇಶದಲ್ಲಿರುತ್ತೀರಿ. ದೇಹದ ವಿಘಟನೆ ಪ್ರಾಣಿಕ ಲೋಕದ ತೆರೆದಿಟ್ಟ ಸ್ಥಳಾವಕಾಶಗಳಲ್ಲಿರಲು ಒತ್ತಾಯ

ತರುತ್ತದೆ. ನಿಮಗೆ ಇನ್ನು ಮುಂದೆ ರಕ್ಷಣೆ ಇರುವುದಿಲ್ಲ, ಅಲ್ಲಿ ರಕ್ಷಣೆಗಾಗಿ ರಭಸದಿಂದ ಹಿಂದಿರುಗಿ ಬರಲು ಭೌತಿಕ ದೇಹವಿರುವುದಿಲ್ಲ.

**CWM, 3/47** **- ಶ್ರೀಮಾತೆ**

*

**ಮೃತ್ಯುವಿನ ಪ್ರಾಂತ**

ಸರ್ವಸಾಧಾರಣವಾಗಿ "ಮೃತ್ಯುವಿನ ಪ್ರಾಂತ" ಎಂಬ ಹೆಸರನ್ನು ಅತ್ಯಂತ ಭೌತಿಕ ಪ್ರಾಣಿಕದ ಒಂದು ಪ್ರದೇಶಕ್ಕೆ ಕೊಡಲಾಗಿರುತ್ತದೆ, ಮನುಷ್ಯ ದೇಹವನ್ನು ತ್ಯಜಿಸುವ ಕ್ಷಣದಲ್ಲಿ ಅವನನ್ನು ಅದರಲ್ಲಿ ಪ್ರಕ್ಷೇಪಿಸಲಾಗುತ್ತದೆ. ಸಾಮಾನ್ಯವಾಗಿ ಮನುಷ್ಯನ ಜೀವನದ ಅತ್ಯಂತ ಪ್ರಜ್ಞಾಪೂರ್ಣ ಭಾಗವನ್ನು ಅದರಲ್ಲಿ, ದೇಹವನ್ನು ತ್ಯಜಿಸುವ ಸಮಯದಲ್ಲಿ, ಪ್ರಕ್ಷೇಪಿಸಲಾಗುತ್ತದೆ ಸರಿ, ಆ ಪ್ರದೇಶ ಪ್ರಾಣಿಕದ್ದಾಗಿದ್ದು, ಅಂಧಕಾರದಿಂದ ಕೂಡಿಕೊಂಡಿರುತ್ತದೆ, ಅದು ವಿರೋಧೀ ರೂಪತಾಳುವಿಕೆಗಳಿಂದ ತುಂಬಿಕೊಂಡಿರುತ್ತದೆ, ಅವುಗಳ ಕೇಂದ್ರದಲ್ಲಿ ಆಸೆಗಳಿರುತ್ತವೆ, ವಿರೋಧೀ ಸಂಕಲ್ಪಗಳು ಕೂಡ ಇರುತ್ತವೆ, ಅವು ಬಹಳ ಪ್ರಕೃತಿಸದೃಶ ಅಸ್ತಿತ್ವಗಳಾಗಿರುತ್ತವೆ, ಅವುಗಳಿಗೆ ಚೂರುಪಾರಾದ ಜೀವನವಿರುತ್ತದೆ, ಅವು ರಕ್ತಪಿಶಾಚಿಗಳ ಹಾಗಿರುತ್ತವೆ. ಯಾವ ಅರ್ಥದಲ್ಲಿ ಎಂದರೆ ಮಾನವ ಸತ್ತೆಗಳು ಹೊರಗೆ ಚೆಲ್ಲಿಕೊಟ್ಟದ್ದೆಲ್ಲವನ್ನು ತಿನ್ನುತ್ತವೆ ಮತ್ತು ಹಾಗಾಗಿ ಮೃತ್ಯುವಿನ ಆಘಾತದ ಆ ಕ್ಷಣದಲ್ಲಿ– ಏಕೆಂದರೆ ಬಹಳ ಕಡಿಮೆ ಜನರು ಆಘಾತವಿಲ್ಲದೆ ಮರಣ ಹೊಂದುತ್ತಾರೆ, ಪ್ರಜ್ಞಾಪೂರ್ಣರಾಗಿ ಹೊರಗೆ ಹೋಗುತ್ತಾರೆ, ಆ ವಿಷಯದ ಬಗ್ಗೆ ಪೂರ್ತಿ ಜ್ಞಾನವಿದ್ದವರಾಗಿರುತ್ತಾರೆ, ಅಂತಹರು ಇರುವುದು ಬಹಳ ಕಡಿಮೆ– ಸಾಮಾನ್ಯವಾಗಿ ಅದೊಂದು ಅಪಘಾತ: ಕೊನೆಯ ಅಪಘಾತ; ಸರಿ ಆ ಅಪಘಾತದ ಸಮಯದಲ್ಲಿ ಆ ಅಸ್ತಿತ್ವಗಳು ಇದರ ಮೇಲೆ, ಹೊರಗೆ ಹೋಗುತ್ತಿರುವ ಜೀವಶಕ್ತಿಯ ಮೇಲೆ ರಭಸದಿಂದ ಬರುತ್ತವೆ ಮತ್ತು ಅದನ್ನು ತಿಂದುಬಿಡುತ್ತವೆ. ವ್ಯಕ್ತಿ ಜೀವಂತವಾಗಿರುವವರೆಗೆ ಅವು ಅವನನ್ನು ಸ್ಪರ್ಶಿಸಲಾಗುವುದಿಲ್ಲ. ನಿಮ್ಮೆಲ್ಲರಿಗೂ ದುಃಸ್ವಪ್ನ ಕಂಡಿರುವ ಅನುಭವವಿದೆ, ಅದರಲ್ಲಿ ಸನ್ನಿವೇಶ ನಿಜವಾಗಿ ಬಹಳ ಅಪಾಯಕಾರಿಯಾದಾಗ ಹಠಾತ್ತನೆ ಎಚ್ಚತ್ತುಕೊಳ್ಳುತ್ತೀರಿ– ನೀವು ನಿಮ್ಮ ದೇಹದಲ್ಲಿ ಮರಳಿ ಬರುತ್ತೀರಿ, ಏಕೆಂದರೆ ದೇಹ ನಿಮ್ಮ ರಕ್ಷಣೆಯಾಗಿರುತ್ತದೆ. ಭೌತಿಕ ದೇಹದಲ್ಲಿ ಅವು ಏನನ್ನೂ

ಮಾಡಲಾರವು, ಆದರೆ ನೀವು ಸಂಪೂರ್ಣವಾಗಿ ಭೌತಿಕ ದೇಹದ ಹೊರಗಿದ್ದಾಗ (ನಾನು ಹೇಳಿದ ಈ ಕೊಂಡಿ ನೀವು ಹೊರಗೆ ಹೊರಟು ಹೋದಾಗ ಸ್ವಲ್ಪ ಮಟ್ಟಿಗೆ ರಕ್ಷಣೆ ಕೊಡುವ ಸೇವೆ ಸಲ್ಲಿಸುತ್ತದೆ), ಆದರೆ ಕೊಂಡಿಗಳು ಮುರಿದು ಹೋದಾಗ, ನೀವು ಇಡಿಯಾಗಿ ದೇಹವಿಲ್ಲದವರಾಗಿರುತ್ತೀರಿ, ಆಗ ವಿಶಿಷ್ಟ ಪರಿಸ್ಥಿತಿಗಳ ಅನುಕೂಲತೆ ಪಡೆಯಬೇಕು... ಉದಾಹರಣೆಗೆ ಇನ್ನೂ ಜೀವಂತರಾಗಿರುವ ಜನರ ಪ್ರೀತಿಗೆ ಮೃತನಾದವನು ಪಾತ್ರನಾಗಿದ್ದರೆ, ಮತ್ತು ಮೃತ್ಯುವಿನ ಆ ಕ್ಷಣದಲ್ಲಿ ಅವನನ್ನು ಪ್ರೀತಿಸಿದ ಈ ಜನರು ತಮ್ಮ ಯೋಚನೆಯನ್ನು, ಪ್ರೀತಿಯನ್ನು ಮೃತನಾದವನ ಮೇಲೆ ಏಕಾಗ್ರಗೊಳಿಸಿದರೆ, ಅವನು ಅಲ್ಲಿ ರಕ್ಷಣಾ ಸ್ಥಾನವನ್ನು ಕಂಡುಕೊಳ್ಳುತ್ತಾನೆ ಮತ್ತು ಇದು ಈ ಅಸ್ತಿತ್ವಗಳ ವಿರುದ್ಧ ಅವನನ್ನು ರಕ್ಷಿಸುತ್ತದೆ. ಮೃತನಾದವನ ಸುತ್ತಲೂ ಅವನಿಂದ ಹಿಂಸೆಗೊಳಗಾಗಿ ಅವನನ್ನು ಪ್ರೀತಿಸದ ಜನರಿದ್ದರೆ ಇಲ್ಲವೆ ಭಯಾನಕ ರೀತಿಯಲ್ಲಿ ಅಪ್ರಜ್ಞೆಯಲ್ಲಿರುವ ಜನರಿದ್ದರೆ ಅವನು ಈ ಶಕ್ತಿಗಳಿಗೆ ತನ್ನನ್ನು ಒಂದು ಬೇಟೆಯ ರೂಪದಲ್ಲಿ ಒಪ್ಪಿಸಿಕೊಟ್ಟ ಹಾಗಿರುತ್ತದೆ. ಮತ್ತು ಅದು ನಿಜವಾಗಿ ತಾಳಿಕೊಳ್ಳಲು ಅತ್ಯಂತ ಕಠಿಣವಾದ ಅನುಭವ.

ಇದು ಸಹಜವಾಗಿ ಸರ್ವಸಾಧಾರಣ ನಿಯಮ. ಅಲ್ಲಿ ಸೇತುವೆಗಳಿದ್ದ ಹಾಗೆ "ರಕ್ಷಿಸಲಾದ ಹಾದು ಹೋಗುವ ಮಾರ್ಗಗಳು" ಇರುತ್ತವೆ, ಅವುಗಳನ್ನು ಪ್ರಾಣಿಕ ಜಗತ್ತಿನಲ್ಲಿ ನಿರ್ಮಾಣ ಮಾಡಲಾಗಿರುತ್ತದೆ, ಅವುಗಳ ಮೂಲಕ ಎಲ್ಲ ಅಪಾಯಗಳನ್ನು ದಾಟಿಕೊಂಡು ಹೋಗಬಹುದು. ದೇಹ ತ್ಯಜಿಸಿ ಹೋಗುವವರನ್ನು ಆದರದಿಂದ ಬರಮಾಡಿಕೊಳ್ಳಲು, ಅವರಿಗೆ ಆಶ್ರಯ ಹಾಗೂ ರಕ್ಷಣೆ ನೀಡಲು ವಾತಾವರಣಗಳಲ್ಲಿರುತ್ತವೆ. ಅಲ್ಲಿ ಎಲ್ಲ ಬಗೆಯ ಇತರ ಸ್ಥಿತಿಗಳಿರುತ್ತವೆ, ನಾನು ಇದೀಗ ಹೇಳಿದ್ದು ಮೃತರಾಗುವವರ ಸಾಮಾನ್ಯ ಸ್ಥಿತಿ, ಅದು ಸರ್ವಸಾಧಾರಣ ಮಾನವ ಸತ್ತೆಗಳನ್ನು ಕುರಿತಾದದ್ದು, ಆದರೆ ಸ್ವಲ್ಪ ಉಚ್ಚತರ ಮನುಕುಲದ ಬಳಿ ಬಂದಾಗ ಈ ಎಲ್ಲ ಪರಿಸ್ಥಿತಿಗಳು ಬದಲಾಗುತ್ತವೆ. ಸತ್ತೆಯ ಅಂತರಂಗದಲ್ಲಿ ವಿಶೇಷ ರೀತಿಯ ಉಚ್ಚತರ ಅಭಿವೃದ್ಧಿಯಾಗದೆ ಹೋದರೆ ಸರ್ವಸಾಧಾರಣ ನಿಯಮ ಉಳಿದುಕೊಳ್ಳುತ್ತದೆ.

**CWM, 6/55-56** **- ಶ್ರೀಮಾತೆ**

*

**ಮೃತ್ಯುವಿನ ನಂತರ ನಮ್ಮ ಸತ್ತೆಯ ಪರಿಸ್ಥಿತಿ**

ಮೃತ್ಯುವಿನ ನಂತರ ನಿಮ್ಮ ಸತ್ತೆಯ ಪರಿಸ್ಥಿತಿ ಇಲ್ಲಿ ಪ್ರಾಣಿಕ ಪರಿವರ್ತನೆ ಹೊಂದಿದೆಯೋ ಇಲ್ಲವೋ ಎಂಬುದರ ಮೇಲೆ ಅವಲಂಬಿಸಿರುತ್ತದೆ. ನೀವು ಕೇವಲ ಸಂಘಟಿಸಿರಲಾಗದ ಪ್ರಚೋದನೆಗಳ ಕಲಬೆರಕೆ ಹೊಂದಿದವರಾಗಿದ್ದರೆ, ಆಗ ಮೃತ್ಯುವಿನ ಸಮಯದಲ್ಲಿ, ಪ್ರಜ್ಞೆ ಹಿಂಭಾಗಕ್ಕೆ ಸರಿದು ಹೋದಾಗ, ನಿಮ್ಮಲ್ಲಿರುವ ಭಿನ್ನ ವ್ಯಕ್ತಿತ್ವಗಳು ತುಸು ದೂರದಲ್ಲಿ ಬೀಳುತ್ತವೆ, ತಮಗೆ ಯೋಗ್ಯವಾದ ಆವರಣಗಳನ್ನು ಹುಡುಕಲು ಅತ್ತಿಂದಿತ್ತ ರಭಸದಿಂದ ಚಲಿಸುತ್ತವೆ. ಒಂದು ಭಾಗ ಅದಕ್ಕೆ ನೆಂಟಸ್ತಿಕೆಯುಳ್ಳ ಇನ್ನೊಬ್ಬ ವ್ಯಕ್ತಿಯಲ್ಲಿ ಪ್ರವೇಶಿಸಬಹುದು, ಇನ್ನೊಂದು ಭಾಗ ಪಶುವಿನಲ್ಲೂ ಕೂಡ ಪ್ರವೇಶಿಸಬಹುದು. ಆದರೆ ದೈವೀ ಸಾನ್ನಿಧ್ಯಕ್ಕೆ ಜೀವಂತವಿದ್ದ ಭಾಗ ಕೇಂದ್ರ ಚೈತ್ಯಸತ್ತೆಗೆ ಅಂಟಿಕೊಂಡು ಉಳಿದುಕೊಳ್ಳಬಹುದು. ನೀವು ಪೂರ್ತಿಯಾಗಿ ಸಂಘಟಿತರಾಗಿದ್ದರೆ ಮತ್ತು ಏಕೈಕ ವ್ಯಕ್ತಿಯಾಗಿ ಪರಿವರ್ತನೆ ಹೊಂದಿದ್ದರೆ, ನಿಮ್ಮಲ್ಲಿ ಉತ್ಕ್ರಾಂತಿಯ ಗುರಿಯನ್ನು ತಲುಪುವ ಬಲವಿದ್ದರೆ ಆಗ ಮೃತ್ಯುವಿನ ನಂತರ ಪ್ರಜ್ಞೆಯುಳ್ಳವರಾಗಿರುತ್ತೀರಿ ಮತ್ತು ಮುಂದುವರಿದುಕೊಂಡು ಹೋಗುವುದನ್ನು ರಕ್ಷಿಸುತ್ತೀರಿ.

ತಮ್ಮ ದೇಹಗಳು ವಿಘಟನೆಗೊಳಗಾದ ನಂತರ ಎಲ್ಲ ಜನರು ತಮ್ಮ ಅನನ್ಯತೆಗಳನ್ನು ಉಳಿಸಿಕೊಂಡಿರುತ್ತಾರೆಯೋ ಎಂಬುದನ್ನು ನೀವು ತಿಳಿದುಕೊಳ್ಳಲು ಬಯಸುತ್ತೀರಿ. ಸರ್ವಸಾಧಾರಣ ಜನರ ಮೊತ್ತದಲ್ಲಿರುವವರು ತಮ್ಮನ್ನು ತಮ್ಮ ದೇಹಗಳೊಂದಿಗೆ ಎಷ್ಟೊಂದು ಹತ್ತಿರದಿಂದ ಗುರುತಿಸಿಕೊಂಡಿರುತ್ತಾರೆ ಎಂದರೆ ಅವರ ಭೌತಿಕ ದೇಹಗಳು ವಿಘಟನೆ ಹೊಂದಿದ ನಂತರ ಅವುಗಳಲ್ಲಿದ್ದ ಯಾವುದೂ ಬದುಕಿ ಉಳಿಯುವುದಿಲ್ಲ. ಪರಿಪೂರ್ಣವಾಗಿ ಯಾವುದೂ ಉಳಿಯುವುದಿಲ್ಲ ಎಂದಲ್ಲ.– ಪ್ರಾಣಿಕ ಹಾಗೂ ಮಾನಸಿಕಗಳ ಮೂಲದ್ರವ್ಯ ಯಾವಾಗಲೂ ಉಳಿದುಕೊಳ್ಳುತ್ತದೆ, ಅದರೆ ಅದು ಭೌತಿಕ ವ್ಯಕ್ತಿತ್ವಕ್ಕೆ ಸರಿಸಮವಾಗಿರುವುದಿಲ್ಲ. ಉಳಿದುಕೊಳ್ಳುವ ಭಾಗಕ್ಕೆ ಬಾಹ್ಯ ವ್ಯಕ್ತಿತ್ವದ ಸ್ಪಷ್ಟವಾದ ಗುರುತಿರುವುದಿಲ್ಲ, ಏಕೆಂದರೆ ಬಾಹ್ಯ ವ್ಯಕ್ತಿತ್ವ ಪ್ರಚೋದನೆಗಳ ಹಾಗೂ ಆಸೆಗಳ ಕಲಬೆರಕೆಯಾಗಿ ಉಳಿದುಕೊಳ್ಳುವುದರಲ್ಲಿ ತೃಪ್ತಿಕಂಡುಕೊಂಡಿತ್ತು, ಅದು ತಾತ್ಕಾಲಿಕ ಅಂಗಾಂಗಳ ಏಕತೆಯಾಗಿತ್ತು, ಆ ಏಕತೆಯ ರಚನೆ ದೈಹಿಕ ಕಾರ್ಯ ವಿಧಾನಗಳ ಅಂಟಿಕೆ ಮತ್ತು ಕ್ರಮಜೋಡಣೆಗಳಿಂದಾಗಿತ್ತು. ಈ ಕಾರ್ಯ–

ವಿಧಾನಗಳು ನಿಂತುಹೋದಾಗ ಸ್ವಾಭಾವಿಕವಾಗಿ ಅವುಗಳ ಕೃತಕ ಏಕತೆ ಕೂಡ ಕೊನೆಗೊಳ್ಳುವತ್ತ ಬರುತ್ತದೆ. ಭಿನ್ನ ಭಾಗಗಳ ಮೇಲೆ ಹೇರಲಾದ ಮಾನಸಿಕ ಶಿಸ್ತುಪಾಲನೆಯಿದ್ದಾಗ ಮತ್ತು ಅವುಗಳನ್ನು ಸರ್ವಸಮಾನ ಮಾನಸಿಕ ಆದರ್ಶಕ್ಕೆ ಸಾಧನಗಳಾಗುವಂತೆ ಮಾಡಿದಾಗ ಅಲ್ಲಿ ಒಂದು ಬಗೆಯ ಯಥಾರ್ಥ ವ್ಯಕ್ತಿತ್ವ ಇರುವುದು ಸಾಧ್ಯವಾಗುತ್ತದೆ, ಅದು ಪೃಥ್ವಿಯ ಮೇಲಿನ ತನ್ನ ಜೀವನದ ನೆನಪನ್ನು ಉಳಿಸಿಕೊಳ್ಳುತ್ತದೆ, ಹಾಗಾಗಿ ಪ್ರಜ್ಞಾಪೂರ್ವಕವಾಗಿ ಅಸ್ತಿತ್ವದಲ್ಲಿರುತ್ತದೆ. ಕಲಾವಿದ, ತತ್ವಜ್ಞಾನಿ, ಇತರ ಅಭಿವೃದ್ಧಿ ಹೊಂದಿದ ಜನರು– ಎಂದರೆ ತಮ್ಮನ್ನು ಸಂಘಟಿಸಿಕೊಂಡವರು, ವ್ಯಕ್ತೀಕರಣ ಹೊಂದಿದವರು, ಸ್ವಲ್ಪ ಮಟ್ಟಿಗೆ ಪ್ರಾಣಿಕವನ್ನು ಪರಿವರ್ತನೆಗೆ ಒಳಪಡಿಸಿದವರು– ಉಳಿದುಕೊಳ್ಳುತ್ತಾರೆ ಎಂದು ಹೇಳಬಹುದು, ಏಕೆಂದರೆ ಅವರು ತಮ್ಮ ಬಾಹ್ಯ ಪ್ರಜ್ಞೆಯಲ್ಲಿ ಚೈತ್ಯ ಅಸ್ತಿತ್ವದ ಸ್ವಲ್ಪ ಮಟ್ಟಿಗಿನ ಛಾಯೆಯನ್ನು ತಂದಿರುತ್ತಾರೆ. ಚೈತ್ಯ ಸತ್ತೆ ಸ್ವಭಾವತಃ ಅಮರವಾದದ್ದು, ಅದರ ಗುರಿ ಕೇಂದ್ರ ದೈವೀ ಸಂಕಲ್ಪದ ಸುತ್ತ ಸತ್ತೆಯನ್ನು ಪ್ರಗತಿಪರವಾಗಿ ನಿರ್ಮಾಣ ಮಾಡುವುದಾಗಿರುತ್ತದೆ.

**CWM, 31/144-46** **- ಶ್ರೀಮಾತೆ**

*

**ಮರಣದ ನಂತರ ಪ್ರಾಣಿಕ ಸತ್ತೆಗೆ ಏನಾಗುತ್ತದೆ**

**ಪ್ರಶ್ನೆ:** *ಮರಣದ ನಂತರ ಪ್ರಾಣಿಕ ಸತ್ತೆಗೆ ಏನಾಗುತ್ತದೆ ?*

**ಶ್ರೀಮಾತೆ:** ಅದನ್ನು ವಿಘಟಿಸಲಾಗುತ್ತದೆ. ಬೇರೆ ರೀತಿಯಲ್ಲಿ ಅಪರೂಪಕ್ಕೆ ಸಂಭವಿಸುತ್ತದೆ.

ನಿಮ್ಮಲ್ಲಿ ಬಹಳ ಬಲವಾದ ಪ್ರಚೋದನೆಗಳನ್ನು ಹೊಂದಿದ್ದರೆ, ಸ್ಥಿರಗೊಂಡ ಪ್ರಚೋದನೆಗಳಿಂದ ನೀವು ವಿಭಜನೆಗೊಳಗಾಗಿದ್ದರೆ ಪ್ರಾಣಿಕ ಸತ್ತೆ ಸಣ್ಣ ತುಂಡುಗಳ ರೂಪದಲ್ಲಿ ಮುರಿದು ಹೋಗುತ್ತದೆ; ಉಗಿಯಾಗಿ ಇಲ್ಲವೆ ದ್ರವರೂಪದಲ್ಲಿ ಹೋಗುವುದರ ಬದಲಾಗಿ ಚಿಕ್ಕ ಚೂರುಗಳ ರೂಪದಲ್ಲಿ ಹೋಗುತ್ತದೆ. ಪ್ರಾಣಿಕ ದ್ರವ್ಯದ ಈ ತುಂಡುಗಳಲ್ಲಿ ಪ್ರತಿಯೊಂದು ಕೇಂದ್ರ ಪ್ರಚೋದನೆಯ ಸುತ್ತ, ಕೇಂದ್ರ ಆಸೆಯ ಸುತ್ತ, ಆ ತುಂಡಿನ ಕೇಂದ್ರ ಭಾವೋದ್ರೇಕದ ಸುತ್ತ ಒಟ್ಟುಗೂಡಿರುತ್ತದೆ, ಈ ರೀತಿಯಲ್ಲಿ ಮಾನವ ರೂಪ

ಹೊಂದಿರದ ಚಿಕ್ಕ ಅಸ್ತಿತ್ವಗಳನ್ನು ಸೃಷ್ಟಿಸಲಾಗುತ್ತದೆ, ಅವುಗಳಿಗೆ ಮಾನವ ರೂಪವೊಂದು ಇರುವುದಿಲ್ಲ, ಆದರೆ ಕೆಲವೊಮ್ಮೆ ಅನಿಶ್ಚಿತ ರೂಪ ತಾಳುತ್ತವೆ. ಕೆಲವೊಮ್ಮೆ ಆ ತುಂಡುಗಳು ಯಾರಿಗೆ ಸೇರಿರುತ್ತವೆಯೋ ಆ ಮನುಷ್ಯನನ್ನು ಹೋಲುವ ರೂಪ ತಾಳುತ್ತವೆ; ಇನ್ನು ಬೇರೆ ಸಮಯಗಳಲ್ಲಿ ಅವು ಪ್ರತಿನಿಧಿಸುವ ಆಸೆಯನ್ನು ಅಭಿವ್ಯಕ್ತಪಡಿಸುವ ರೂಪವನ್ನು ತಾಳುತ್ತವೆ. ಮತ್ತು ಸ್ವಾಭಾವಿಕವಾಗಿ ಅವುಗಳ ಏಕಮಾತ್ರ ಸಂಬಂಧ ತಮ್ಮ ಆಸೆಯನ್ನು ಇಲ್ಲವೆ ಭಾವೋದ್ರೇಕವನ್ನು ತೃಪ್ತಿಪಡಿಸುವುದಾಗಿರುತ್ತದೆ ಮತ್ತು ಅವು ಎಲ್ಲೆಡೆಯಲ್ಲಿ ಸ್ವ-ತೃಪ್ತಿಗೊಳಿಸಿಕೊಳ್ಳುವ ಸಾಧನಗಳನ್ನು ಶೋಧಿಸುತ್ತವೆ.

ಉದಾಹರಣೆಗೆ ಜಿಪುಣನೊಬ್ಬ ತನ್ನ ಸಂಪತ್ತನ್ನು ಕುರಿತು ಹೊಂದಿರುವ ಭಾವೋದ್ರೇಕವನ್ನು ಗಮನಿಸೋಣ. ಅವನು ಮರಣ ಹೊಂದುತ್ತಾನೆ. ಅವನ ಪ್ರಾಣಿಕ ಸತ್ತೆಯನ್ನು ವಿಘಟಿಸಲಾಗಿರುತ್ತದೆ, ಆದರೆ ತನ್ನ ಹಣಕ್ಕಾಗಿರುವ ಅವನ ಭಾವೋದ್ರೇಕ ಜೀವಂತವಾಗಿ ಉಳಿದುಕೊಂಡಿರುತ್ತದೆ. ಅದು ಪ್ರಾಣಿಕ ಲೋಕದಲ್ಲಿ ಜೀವಂತವಿರುವ ಮತ್ತು ಪ್ರಜ್ಞೆಯಿಂದಿರುವ ಅಸ್ತಿತ್ವವನ್ನು ರೂಪಿಸಲು ತನ್ನ ಸುತ್ತ ಕೆಲವೊಂದು ಸಂಖ್ಯೆಯಲ್ಲಿರುವ ಅಂಶಗಳನ್ನು ಒಟ್ಟುಗೂಡಿಸುತ್ತದೆ. ಈ ಮನುಷ್ಯ ತನ್ನ ಜೀವಿತ ಕಾಲದಲ್ಲಿ ಸಂಪತ್ತೊಂದನ್ನು ಎಲ್ಲಿಯಾದರೂ ಬಚ್ಚಿಟ್ಟಿದ್ದರೆ ಆ ಅಸ್ತಿತ್ವ ಅಲ್ಲಿಗೆ ಹೋಗುತ್ತದೆ ಮತ್ತು ಆ ಸಂಪತ್ತಿರುವ ಸ್ಥಳದ ಮೇಲೆ ತನ್ನನ್ನು ಪ್ರತಿಷ್ಠಾಪಿಸುತ್ತದೆ, ಅದು ಆ ಸಂಪತ್ತನ್ನು ರಕ್ಷಿಸುವುದಕ್ಕಾಗಿ ಹಾಗೂ ಜನರು ಅದರ ಹತ್ತಿರ ಬರುವುದನ್ನು ತಡೆಯುವುದಕ್ಕಾಗಿ ಇರುತ್ತದೆ. ಹಾಗೆಯೇ ಅಲ್ಲಿ ಬಹಳ ಜುಗುಪ್ಸೆ ತರಿಸುವ ಅನೇಕ ಚಿಕ್ಕ ಅಸ್ತಿತ್ವಗಳಿವೆ, ಅವು ಅಸಂಖ್ಯಾತವಾಗಿವೆ, ಅವು ದರಿದ್ರ ಲೈಂಗಿಕ ಆಸೆಯಿಂದ ಹುಟ್ಟುತ್ತವೆ. ಈ ಆಸೆ (ಅದಕ್ಕೆ ಅನುಗುಣವಾದ ಅಸ್ತಿತ್ವಗಳೊಂದಿಗೆ) ಮೃತ್ಯುವಿನ ಸಮಯದಲ್ಲಿ ವಿಘಟಿತವಾಗದಿದ್ದರೆ ಈ ಅಸ್ತಿತ್ವಗಳು ಅಸ್ತಿತ್ವದಲ್ಲಿರುವುದನ್ನು ಮುಂದುವರಿಸಿಕೊಂಡು ಹೋಗುವವು ಮತ್ತು ಅವು ಬರುತ್ತವೆ, ಸೂಕ್ಷ್ಮ ಸಂವೇದನೆಯುಳ್ಳ ವ್ಯಕ್ತಿಗಳ ವಾತಾವರಣದಲ್ಲಿ ನೆಲೆಸುತ್ತವೆ, ಅವರನ್ನು ಉದ್ರೇಕಗೊಳಿಸುತ್ತವೆ, ಉತ್ತೇಜನ ನೀಡುತ್ತವೆ. ಈ ಅಸ್ತಿತ್ವಗಳು ಲೈಂಗಿಕ ಕ್ರಿಯೆ ನಡೆದ ಸಮಯದಲ್ಲಿ ಹೊರಹೊಮ್ಮುವ ಪ್ರಾಣಿಕ ಶಕ್ತಿಯನ್ನು ತಮ್ಮ ಆಹಾರವನ್ನಾಗಿ ಮಾಡಿಕೊಂಡಿರುತ್ತವೆ, ಮತ್ತು ಸ್ವಾಭಾವಿಕವಾಗಿ ಅವುಗಳ ಏಕೈಕ ಆಸೆಯೆಂದರೆ ಆ ಆಹಾರದಿಂದ ಸಾಧ್ಯವಿದ್ದಷ್ಟು ಪೋಷಣೆ ಪಡೆಯುವುದಾಗಿರುತ್ತದೆ.

ಡರ್ಝಿನ್‌ಗಟ್ಟಲೆ ಇರುವ ಈ ಸತ್ತೆಗಳನ್ನು ಉಂಗುರಿನಾಕಾರದಲ್ಲಿ ಧರಿಸಿರುವ ಜನರನ್ನು ನಾನು ನೋಡಿದ್ದೇನೆ. ಅದು ಬಹಳ ಮೂರ್ತ ಸ್ವರೂಪದ್ದು.

**CWM, 4/191-92** **- ಶ್ರೀಮಾತೆ**

*

**ಅಸಾಧಾರಣ ದೃಷ್ಟಾಂತಗಳು**

ಮನುಷ್ಯ ತನ್ನ ಇಡೀ ಜೀವನದಾದ್ಯಂತ ಯೋಗಾಚರಣೆಯನ್ನು ಅನುಸರಿಸುತ್ತಿದ್ದರೆ, ವ್ಯಕ್ತೀಕರಣ ಹೊಂದಲು, ಪ್ರಾಣಿಕವಾದದ್ದನ್ನು ಹಾಗೂ ಮಾನಸಿಕವಾದದ್ದನ್ನು ಚೈತ್ಯ ಸತ್ತೆಯ ಸುತ್ತ ಕೇಂದ್ರಿಕರಿಸಲು ಬಹಳ ಕಾಳಜಿ ವಹಿಸಿದ್ದರೆ ಅವು ಉಳಿದುಕೊಳ್ಳುತ್ತವೆ – ಅಂತಹದು ಹತ್ತು ಲಕ್ಷ ದೃಷ್ಟಾಂತಗಳಲ್ಲಿ ಒಮ್ಮೆ ಸಂಭವಿಸುತ್ತದೆ, ಅದು ಬಹಳ ಅಸಾಧಾರಣವಾದದ್ದು. ತತ್ವಜ್ಞಾನಿಯ ಇಲ್ಲವೆ ಲೇಖಕನ ದೃಷ್ಟಾಂತವನ್ನು ತೆಗೆದುಕೊಳ್ಳೋಣ, ಅವನು ತನ್ನ ಮಿದುಳಿನಲ್ಲಿ ಗಮನಾರ್ಹ ಕಾರ್ಯ ಕೈಕೊಂಡಿರುತ್ತಾನೆ, ಅದನ್ನು ಸಂಘಟಿಸಲು ಪ್ರಯತ್ನಿಸುತ್ತಾನೆ, ಅದು ಆಗ ಪಟ್ಟುಹಿಡಿದು ಉಳಿದುಕೊಳ್ಳುತ್ತದೆ, ಆದರೆ ಆಗ ಅದು ಯೋಚಿಸುವ ಕ್ಷಮತೆಯೆಂದಾಗಿ, ಬೇರೇನೂ ಇಲ್ಲ. ಮೃತ್ಯುವಿನ ನಂತರ ಪಟ್ಟುಹಿಡಿದು ಉಳಿದುಕೊಳ್ಳುವ ಈ ಕ್ಷಮತೆಗಳಿವೆ ಮತ್ತು ಅವು, ಸ್ವಾಭಾವಿಕವಾಗಿ, ಪ್ರಕಟವಾಗಲು ಬೇರೊಂದು ಭೌತಿಕ ಮಿದುಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತವೆ. ಈ ರೀತಿಯಲ್ಲಿ ಶ್ರೇಷ್ಠ ಚಿಂತಕನ ಮನಸ್ಸು ತನ್ನನ್ನು ಇನ್ನೊಂದು ಮನಸ್ಸಿನ ಜೊತೆಗೆ ಗುರುತಿಸಿಕೊಳ್ಳಬಹುದು ಮತ್ತು ತನ್ನನ್ನು ಅಭಿವ್ಯಕ್ತಗೊಳಿಸಲು ಶಕ್ತವಾಗಬಹುದು. ಪ್ರಾಣಿಕ ದೃಷ್ಟಿಕೋನದಿಂದ ಶ್ರೇಷ್ಠ ಸಂಗೀತಕಾರನ ದೃಷ್ಟಾಂತವನ್ನು ತೆಗೆದು– ಕೊಳ್ಳೋಣ, ಅವನು ತನ್ನ ಬಾಹ್ಯ ಸತ್ತೆಯನ್ನು ಸಂಗೀತಕ್ಕೆ ಒಳ್ಳೆಯ ಉಪಕರಣವನ್ನಾಗಿ ಮಾಡಲು ಇಡೀ ಜೀವನದುದ್ದಕ್ಕೂ ಕಾರ್ಯ ಕೈಕೊಂಡಿರಬಹುದು. ಸಂಗೀತವನ್ನು ನುಡಿಸಲು ಅವನು ತನ್ನ ದೇಹದಲ್ಲಿ ಈ ಪ್ರಾಣಿಕ ಸಾಮರ್ಥ್ಯವನ್ನು ಸಂಘಟಿಸಿರಬಹುದು. ಸರಿ, ಆಗ, ಉದಾಹರಣೆಗೆ, ಅವನ ಕೈಗಳು ಸಂಗೀತ ನುಡಿಸುವ ಸಾಮರ್ಥ್ಯದಲ್ಲಿ ಎಷ್ಟೊಂದು ವ್ಯಕ್ತೀಕರಣಗೊಂಡಿರುತ್ತವೆಯೆಂದರೆ ಅವು ಅವನ ಮರಣದ ನಂತರವೂ ಸೂಕ್ಷ್ಮ ರೂಪದಲ್ಲಿ ಪಟ್ಟುಹಿಡಿದು ಉಳಿದುಕೊಳ್ಳಬಲ್ಲವು, ಅಲ್ಲಿ ಅವುಗಳ ರೂಪವಿರುತ್ತದೆ,

ಆ ರೂಪ ಹಳೆಯ ಭೌತಿಕ ರೂಪವನ್ನು ಹೋಲುವಂತಹದಿರುತ್ತದೆ. ಅವು ಪ್ರಾಣಿಕ ಜಗತ್ತಿನಲ್ಲಿ ತೇಲಾಡುತ್ತಿರುತ್ತವೆ, ಅದೇ ಬಗೆಯ ಕ್ಷಮತೆಗಳುಳ್ಳ ಜನರ ಆಕರ್ಷಣೆಗೆ ಒಳಗಾಗುತ್ತವೆ; ಮತ್ತು ಅವರೊಡನೆ ತಮ್ಮನ್ನು ಗುರುತಿಸಿಕೊಳ್ಳುತ್ತವೆ. ಸಾಕಷ್ಟು ಸೂಕ್ಷ್ಮ ಸಂವೇದನೆಯುಳ್ಳ ಹಾಗೂ ಸಾಕಷ್ಟು ಗ್ರಹಣಶೀಲನಾದ ಮನುಷ್ಯ ಈ ಕೈಗಳೊಡನೆ ಗುರುತಿಸಿಕೊಳ್ಳಬಲ್ಲನು ಮತ್ತು ಅದ್ಭುತ ಕಾರ್ಯಗಳನ್ನು ನಿರ್ವಹಿಸಬಲ್ಲನು, ಈ ಕೈಗಳ ಗತ ಜೀವನದ ಎಲ್ಲ ವ್ಯಕ್ತೀಕರಣದ ಲಾಭ ಪಡೆಯಬಲ್ಲನು.

**CWM, 4/195-96** **- ಶ್ರೀಮಾತೆ**

*

**ಪ್ರತಿಯೊಂದು ಭಾಗ ತನ್ನದೇ ಜಗತ್ತಿನಲ್ಲಿ ಚೆಲ್ಲಿಕೊಂಡಿರುತ್ತದೆ**

ನೀವು ಆಸೆಯ, ಭಾವೋದ್ರೇಕದ ಹಾಗೂ ಪ್ರಚೋದನೆಯ ಜೀವನವನ್ನು ಜೀವಿಸುತ್ತಿದ್ದೀರಿ ಎಂದು ಭಾವಿಸಿರಿ, ಆಗ ಪ್ರಾಣಿಕ ಸತ್ತೆ ಪ್ರಬಲವಾಗಿರುವುದರೊಂದಿಗೆ ಜೀವಿಸುತ್ತೀರಿ; ಆದರೆ ಆಧ್ಯಾತ್ಮಿಕ ಪ್ರಯತ್ನದೊಂದಿಗೆ, ಶ್ರೇಷ್ಠ ಸದ್ಭಾವನೆಯೊಂದಿಗೆ ಜೀವಿಸುತ್ತಿದ್ದರೆ ಕಾರ್ಯಗಳನ್ನು ಚೆನ್ನಾಗಿ ಕೈಕೊಳ್ಳಲು ಹಾಗೂ ಅವುಗಳನ್ನು ಸ್ವಾರ್ಥರಹಿತವಾಗಿ ಮಾಡಲು ಬಯಸುತ್ತಿದ್ದರೆ, ಪ್ರಗತಿಗಾಗಿ ಸಂಕಲ್ಪವಿದ್ದರೆ ನಿಮ್ಮಲ್ಲಿ ಚೈತ್ಯಸತ್ತೆ ಪ್ರಬಲವಾಗಿರುವುದರೊಂದಿಗೆ ಜೀವಿಸುತ್ತೀರಿ ಮತ್ತು ಆಗ ನಿಮ್ಮ ದೇಹವನ್ನು ತ್ಯಜಿಸುವ ಸಮಯ ಬಂದಾಗ ಈ ಎಲ್ಲ ಸತ್ತೆಗಳು ಚೆದುರತೊಡಗುತ್ತವೆ. ನೀವು ಮುನ್ನಡೆ ಸಾಧಿಸಿದ ಯೋಗಿಯಾಗಿದ್ದರೆ ಮತ್ತು ದೈವೀಕೇಂದ್ರದ ಸುತ್ತ ಏಕತ್ರಗೊಳ್ಳಲು ಶಕ್ತರಾಗಿದ್ದರೆ ಈ ಎಲ್ಲ ವಿಷಯಗಳು ಒಟ್ಟಿಗೆ ಕೂಡಿಕೊಂಡು ಉಳಿಯುತ್ತವೆ. ನಿಮ್ಮನ್ನು ಹೇಗೆ ಏಕತ್ರಗೊಳಿಸಿಕೊಳ್ಳಬೇಕು ಎಂಬುದು ನಿಮಗೆ ತಿಳಿದಿರದಿದ್ದರೆ, ಆಗ ದೇಹತ್ಯಾಗದ ಸಮಯದಲ್ಲಿ ಅದೆಲ್ಲವೂ ಚದುರಿ ಹೋಗುತ್ತದೆ, ಪ್ರತಿಯೊಂದು ಅದರ ಪ್ರಾಂತಕ್ಕೆ ಹೋಗುತ್ತದೆ. ಉದಾಹರಣೆಗೆ ಪ್ರಾಣಿಕ ಸತ್ತೆಯನ್ನು ಕುರಿತು ಹೇಳುವುದಾದರೆ ನಿಮ್ಮ ಎಲ್ಲ ಭಿನ್ನ ಆಸೆಗಳು ಪ್ರತ್ಯೇಕಗೊಳ್ಳುತ್ತವೆ ಮತ್ತು ಪ್ರತಿಯೊಂದು ತನ್ನ ಸಿದ್ಧಿಯತ್ತ ಪೂರ್ತಿ ಸ್ವತಂತ್ರವಾಗಿ ಓಡಿ ಹೋಗುತ್ತದೆ, ಏಕೆಂದರೆ ಅವುಗಳನ್ನು ಹಿಡಿದಿಟ್ಟುಕೊಳ್ಳಲು ಭೌತಿಕ ಸತ್ತೆ ಅಲ್ಲಿರುವುದಿಲ್ಲ. ಆದರೆ ನಿಮ್ಮ ಪ್ರಜ್ಞೆಯನ್ನು ಚೈತ್ಯ ಪ್ರಜ್ಞೆಯ ಜೊತೆಗೆ

ಏಕತ್ರಗೊಳಿಸಿದ್ದರೆ ನೀವು ಮರಣ ಹೊಂದುತ್ತಿದ್ದಾಗ ನಿಮ್ಮ ಚೈತ್ಯಸತ್ತೆಯ ಬಗ್ಗೆ ಪ್ರಜ್ಞೆಯುಳ್ಳವರಾಗಿ ಉಳಿದುಕೊಳ್ಳುತ್ತೀರಿ ಮತ್ತು ಚೈತ್ಯಸತ್ತೆ ಚೈತ್ಯಸತ್ತೆಯ ಜಗತ್ತಿನತ್ತ ಮರಳಿ ಹೋಗುತ್ತದೆ. ಅದು ಪರಮಾನಂದದ, ಹರ್ಷೋತ್ಕರ್ಷದ, ಶಾಂತಿ ಹಾಗೂ ಪ್ರಶಾಂತತೆಗಳಿರುವ, ಬೆಳೆಯುತ್ತಿರುವ ಜ್ಞಾನವಿರುವ ಜಗತ್ತಾಗಿದೆ. ನಿಮಗೆ ಇಷ್ಟವಾದರೆ ಅದನ್ನು ಸ್ವರ್ಗ ಎಂದು ಕರೆಯಬಹುದು, ಅದು ಸರಿಯಾಗಿರುತ್ತದೆ; ಏಕೆಂದರೆ ವಾಸ್ತವದಲ್ಲಿ ನಿಮ್ಮ ಚೈತ್ಯಸತ್ತೆಯೊಡನೆ ನಿಮ್ಮನ್ನು ಗುರುತಿಸಿಕೊಂಡಿರುವ ಮಟ್ಟಿಗೆ ನೀವು ಅದರ ಬಗ್ಗೆ ಪ್ರಜ್ಞೆಯಿದ್ದವರಾಗಿ ಉಳಿದುಕೊಳ್ಳುತ್ತೀರಿ, ಅದರೊಡನೆ ಏಕವಾಗುತ್ತೀರಿ, ಮತ್ತು ಅದು ಅಮರವಾದದ್ದು ಮತ್ತು ಪರಿಪೂರ್ಣವಾಗಿ ಸಂತೋಷಕರ ಜೀವನ ನಡೆಸಲು ಇಲ್ಲವೆ ವಿಶ್ರಾಂತಿ ಪಡೆಯಲು ಅದರ ಅಮರ ಪ್ರಾಂತಕ್ಕೆ ಹೋಗುತ್ತದೆ. ನೀವು ಅದನ್ನು ಸ್ವರ್ಗವೆಂದು ಕರೆಯಲು ಇಷ್ಟಪಟ್ಟರೆ ಹಾಗೆ ಕರೆಯಬಹುದು. ನೀವು ಒಳ್ಳೆಯವರಾಗಿದ್ದರೆ, ನಿಮ್ಮ ಚೈತ್ಯ ಸತ್ತೆಯ ಬಗ್ಗೆ ಪ್ರಜ್ಞೆಯುಳ್ಳವರಾಗಿದ್ದರೆ ಮತ್ತು ಅದರಲ್ಲಿ ಜೀವಿಸುತ್ತಿದ್ದರೆ, ಸರಿ, ನಿಮ್ಮ ದೇಹ ಮರಣ ಹೊಂದಿದಾಗ ಚೈತ್ಯ ಜಗತ್ತಿನಲ್ಲಿ ವಿಶ್ರಾಂತಿ ಪಡೆಯಲು ಪರಮಾನಂದದ ಸ್ಥಿತಿಯಲ್ಲಿರಲು ನಿಮ್ಮ ಚೈತ್ಯಸತ್ತೆಯೊಡನೆ ಹೋಗುತ್ತೀರಿ. ಆದರೆ ಪ್ರಾಣಿಕ ಜಗತ್ತಿನಲ್ಲಿ ಅದರ ಎಲ್ಲ ಪ್ರಚೋದನೆಗಳೊಂದಿಗೆ ಜೀವಿಸಿದ್ದರೆ ಪ್ರತಿಯೊಂದು ಪ್ರಚೋದನೆ ಅಲ್ಲಿ, ಇಲ್ಲಿ ತನ್ನಿಷ್ಟವನ್ನು ನೆರವೇರಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತದೆ. ಅಲ್ಲಿ ರೂಪದ ಒಂದು ಜೀವ (spirit)ವಿರುತ್ತದೆ, ಅದು ನಿಮ್ಮ ಮರಣದ ನಂತರ ಏಳುದಿನಗಳ ಕಾಲ ಪಟ್ಟುಹಿಡಿದು ಉಳಿದುಕೊಳ್ಳುತ್ತದೆ. ವೈದ್ಯರು ನೀವು ಮೃತರಾಗಿರುತ್ತೀರಿ ಎಂದು ಸಾರಿ ಹೇಳುತ್ತಾರೆ, ಆದರೆ ನಿಮ್ಮ ರೂಪದ ಜೀವ ಜೀವಿಸುತ್ತದೆ, ಜೀವಿಸುತ್ತದೆಯಷ್ಟೇ ಅಲ್ಲ, ಆದರೆ ಬಹಳಷ್ಟು ಸಂದರ್ಭಗಳಲ್ಲಿ ಪ್ರಜ್ಞೆಯುಳ್ಳದ್ದಾಗಿರುತ್ತದೆ. ಆದರೆ ಅದು ಏಳೆಂಟು ದಿನಗಳ ಕಾಲ ಉಳಿದುಕೊಳ್ಳುತ್ತದೆ, ನಂತರ ವಿಘಟನೆ ಹೊಂದುತ್ತದೆ. ನಾನು ಯೋಗಿಗಳನ್ನು ಕುರಿತು ಮಾತನಾಡುತ್ತಿಲ್ಲ, ಸರ್ವಸಾಧಾರಣ ಜನರನ್ನು ಕುರಿತು ಮಾತನಾಡುತ್ತಿದ್ದೇನೆ. ಯೋಗಿಗಳಿಗೆ ಯಾವ ನಿಯಮವೂ ಇರುವುದಿಲ್ಲ, ಅದು ಭಿನ್ನವಾಗಿರುತ್ತದೆ, ಅವರಿಗೆ ಜಗತ್ತು ಭಿನ್ನವಾಗಿರುತ್ತದೆ. ಸರ್ವಸಾಧಾರಣ ಜೀವನವನ್ನು ನಡೆಸುತ್ತಿರುವ ಸರ್ವಸಾಧಾರಣ ಜನರನ್ನು ಕುರಿತು ನಿಮ್ಮ ಬಳಿ ಮಾತನಾಡುತ್ತಿದ್ದೇನೆ, ಅವರಿಗೆ ಅದು ಆ ರೀತಿಯದಾಗಿದೆ.

*

ಭವಿಷ್ಯತ್ತಿನಲ್ಲಿ ನಮಗರ್ಪಿತವಾಗಲಿರುವ ಮೃತ್ಯುವನ್ನು ಹಾಗೆಯೇ ಅದು ನೀಡುತ್ತಿರುವ ಜೀವನವನ್ನು ನಾವು ಎದುರಿಸಲೇಬೇಕು, ಮತ್ತು ಅದು ನಮ್ಮನ್ನು ಭೀತಿಗೊಳಪಡಿಸುವ ಆವಶ್ಯಕತೆಯಿಲ್ಲ, ಏಕೆಂದರೆ ನಮ್ಮ ದೇಹಗಳು ಹಾಗೂ ರೂಪಗಳು ಸತತ ಮರಣಹೊಂದುವುದರ ಮೂಲಕ ನಾವು ಶ್ರೇಷ್ಠತರ ಹಾಗೂ ಹೊಸದಾದ ರೂಪಗಳಲ್ಲಿ ಹಾಗೂ ಹೆಸರುಗಳಲ್ಲಿ ಅತ್ಯಗತ್ಯವಾಗಿ ಜೀವಿಸುತ್ತೇವೆ.

**CWSA, 12/129** **- ಶ್ರೀ ಅರವಿಂದರು**

*

**ಮರಣದ ನಂತರ ಮಂತ್ರವಾದಿಗಳ ಹಾಗೂ ರಹಸ್ಯವಾದಿಗಳ ಸ್ಥಿತಿ**

**ಪ್ರಶ್ನೆ:** *ಮಧುರ ಮಾತೆಯವರೆ, ತಮ್ಮ ಕಾರ್ಯಕ್ಕಾಗಿ ರಹಸ್ಯ ಸಾಮರ್ಥ್ಯಗಳನ್ನು ಉಪಯೋಗಿಸುವ ಮಂತ್ರವಾದಿಗಳು ಮರಣದ ನಂತರ ಬಹಳಷ್ಟು ವೇದನೆಗೊಳಗಾಗುತ್ತಾರೆ ಎಂದು ಕೇಳಿದ್ದೇನೆ, ಅದು ಸತ್ಯವಾದದ್ದೆ?*

**ಶ್ರೀಮಾತೆ:** ಮರಣದ ನಂತರ ಅವರು ವೇದನೆಗೊಳಗಾಗುತ್ತಾರೋ ಇಲ್ಲವೆ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾರೋ ಎಂಬುದು ನನಗೆ ತಿಳಿದಿಲ್ಲ, ಆದರೆ, ಸಂದರ್ಭ ಯಾವುದೇ ಇರಲಿ, ಶಾಂತಿ ಹಾಗೂ ಸಂತೋಷಗಳಿರುವ ಯಾವ ಸ್ಥಿತಿಯಲ್ಲೂ ಇರುವುದಿಲ್ಲ, ಅದು ಪರಿಪೂರ್ಣವಾಗಿ ನಿಶ್ಚಿತವಾದದ್ದು. ಆಂತರಿಕ ಶಿಸ್ತುಪಾಲನೆಯ ಮೂಲಕ ಹಾಗೂ ಭಗವಂತನಿಗೆ ಮುಡಿಪಾಗಿರಿಸಿಕೊಳ್ಳುವಿಕೆಯ ಮೂಲಕ ಸಾಮರ್ಥ್ಯಗಳು ನಿಮ್ಮೆಡೆಗೆ ಬರುತ್ತವೆ ಎಂಬುದು ಆಧ್ಯಾತ್ಮಿಕ ದೃಷ್ಟಿಕೋನದಿಂದ ಆದ ಒಂದು ಬಗೆಯ ಪರಿಪೂರ್ಣ ನಿಯಮ. ಆದರೆ ನಿಮ್ಮ ಅಭೀಪ್ಸೆ, ಶಿಸ್ತುಪಾಲನೆ ಹಾಗೂ ಮುಡುಪಾಗಿರಿಸಿಕೊಳ್ಳುವಿಕೆ ಇವುಗಳೊಡನೆ ಸಾಮರ್ಥ್ಯಗಳನ್ನು ದೊರಕಿಸುವ ಒಂದು ಉದ್ದೇಶ ಮಿಶ್ರಣಗೊಂಡರೆ, ಆಗ ಆ ಸಾಮರ್ಥ್ಯಗಳು ಬಂದರೆ ಅದು ಬಹುಮಟ್ಟಿಗೆ ಒಂದು ಶಾಪವಿದ್ದ ಹಾಗಿರುತ್ತದೆ. ಸಾಮಾನ್ಯವಾಗಿ ಅವು ನಿಮ್ಮೆಡೆಗೆ ಬರುವುದಿಲ್ಲ, ಆದರೆ ಅವುಗಳನ್ನು ಅನುಕರಿಸಲು ಪ್ರಯತ್ನಿಸುವ ಪ್ರಾಣಿಕದ ಏನೋ ಒಂದು, ವಿರೋಧಿ ಪ್ರಭಾವಗಳೊಂದಿಗೆ ನಿಮ್ಮೆಡೆಗೆ ಬರುತ್ತದೆ, ಆ ವಿರೋಧಿ ಪ್ರಭಾವಗಳು ನಿಮ್ಮನ್ನು ಕೆಲವು ಸತ್ತೆಗಳ ಪ್ರಾಬಲ್ಯದಡಿಯಲ್ಲಿ ಇಡಿಯಾಗಿ ಇರಿಸುತ್ತವೆ, ಆ ಸತ್ತೆಗಳು ನಿಮಗೆ ಸಾಮರ್ಥ್ಯಗಳನ್ನು ಕೊಡುತ್ತವೆ, ಅದರ ಉದ್ದೇಶ ನಿಮ್ಮ ಉಪಯೋಗ

ಮಾಡುವುದಿರುತ್ತದೆ, ಅವು ಕೈಕೊಳ್ಳಬೇಕೆಂಬ ಉದ್ದೇಶವಿರುವುದನ್ನು ಕೈಕೊಳ್ಳಲು ನಿಮ್ಮನ್ನು ಉಪಯೋಗಿಸುವುದಿರುತ್ತದೆ, ಮತ್ತು ಅವು ಸೃಷ್ಟಿಸಬೇಕೆಂದು ಬಯಸುವ ಅವ್ಯವಸ್ಥೆಯನ್ನು ಸೃಷ್ಟಿಸುವುದಿರುತ್ತದೆ. ನೀವು ಅವುಗಳಿಗೆ ಸಾಕಷ್ಟು ಸೇವೆ ಸಲ್ಲಿಸಿದ್ದೀರಿ, ಇನ್ನು ಮುಂದೆ ನೀವು ಯಾವ ಉಪಯೋಗಕ್ಕೆ ಬರುವುದಿಲ್ಲ ಎಂಬುದನ್ನು ಅವು ಕಂಡುಕೊಂಡಾಗ ನಿಮ್ಮನ್ನು ನಾಶಮಾಡಿಬಿಡುತ್ತವೆ. ಅವು ನಿಮ್ಮನ್ನು ಭೌತಿಕವಾಗಿ ನಾಶಮಾಡಲು ಶಕ್ತವಾಗುವುದಿಲ್ಲ, ಆದರೆ ನಿಮ್ಮನ್ನು ಮಾನಸಿಕವಾಗಿ, ಪ್ರಾಣಿಕವಾಗಿ, ಪ್ರಜ್ಞೆಯನ್ನು ಕಳಕೊಳ್ಳುವಂತೆ ನಾಶಮಾಡುತ್ತವೆ, ಅದರ ನಂತರ ನೀವು ಮರಣಕ್ಕಿಂತ ಮೊದಲು ಯಾವ ಉಪಯೋಗಕ್ಕೂ ಬರುವುದಿಲ್ಲ. ಮರಣದ ನಂತರ ನೀವು ಇಡಿಯಾಗಿ ಅವುಗಳ ಪ್ರಭಾವದಡಿ-ಯಲ್ಲಿರುತ್ತೀರಿ, ಆಗ ಅವು ಕೈಕೊಳ್ಳುವ ಮೊದಲ ಕಾರ್ಯವೆಂದರೆ ನಿಮ್ಮನ್ನು ನುಂಗಿಬಿಡುವುದಾಗಿರುತ್ತದೆ. ಏಕೆಂದರೆ ಇದು ಜನರನ್ನು ಉಪಯೋಗ ಮಾಡುವ ಅವುಗಳ ರೀತಿಯಾಗಿರುತ್ತದೆ– ಅದು ಅವರನ್ನು ನುಂಗಿಬಿಡುವುದಾಗಿರುತ್ತದೆ. ಹಾಗಾಗಿ ಅದು ಬಹಳ ಹರ್ಷದಾಯಕ ಅನುಭವವಾಗಿರುವುದಿಲ್ಲ. ಅದು ಅತ್ಯಂತ ಅಪಾಯಕಾರಿಯಾದ ಆಟ.

ಆದರೆ ಎಲ್ಲೆಡೆಯಲ್ಲಿ, ಎಲ್ಲ ಬೋಧನೆಗಳಲ್ಲಿ, ಎಲ್ಲ ಶಿಸ್ತು-ಪಾಲನೆಗಳಲ್ಲಿ, ಎಲ್ಲ ಯುಗಗಳಲ್ಲಿ ಅದೇ ವಿಷಯವನ್ನು ಪುನರಾವರ್ತಿಸಿ ಹೇಳಲಾಗಿದೆ: ಮನುಷ್ಯ ಮಹತ್ವಾಕಾಂಕ್ಷೆಯನ್ನು ಹಾಗೂ ವೈಯುಕ್ತಿಕ ಆಸಕ್ತಿಯನ್ನು ಸಾಧನೆಯೊಂದಿಗೆ ಎಂದಿಗೂ ಪರಸ್ಪರ ಬೆರಕೆ ಮಾಡಬಾರದು, ಹಾಗಿರದಿದ್ದರೆ ಅವನು ತೊಂದರೆಯನ್ನು ಆಹ್ವಾನಿಸುತ್ತಾನೆ. ಹಾಗಾಗಿ ಅದು ಒಂದು ವಿಶಿಷ್ಟ ದೃಷ್ಟಾಂತವಷ್ಟೇ ಅಲ್ಲ, ಮಾರಕ ಪರಿಣಾಮಗಳಿರುವ ಎಲ್ಲ ಬಗೆಯ ಉದಾಹರಣೆಗಳಿಗಾಗಿ ಇದೆ.

**CWM, 7/260-61** **- ಶ್ರೀಮಾತೆ**

*

**ಸ್ವರ್ಗ ಹಾಗೂ ನರಕ**

ಸ್ವರ್ಗ ಹಾಗೂ ನರಕ ಇವು ಒಮ್ಮೆಗೆ ನಿಜವಾದವುಗಳು ಹಾಗೂ ನಿಜವಾದವುಗಳಲ್ಲ, ಅವೆರಡೂ ಅಸ್ತಿತ್ವದಲ್ಲಿವೆ ಹಾಗೂ ಅಸ್ತಿತ್ವದಲ್ಲಿಲ್ಲ. ಮಾನವ ಯೋಚನೆ ಸೃಷ್ಟ್ಯಾತ್ಮಕವಾದದ್ದು. ಅದು ಮಾನಸಿಕ, ಪ್ರಾಣಿಕ, ಸೂಕ್ಷ್ಮಭೌತಿಕವಾದ

ದ್ರವ್ಯಕ್ಕೆ ಹೆಚ್ಚು ಕಡಿಮೆ ಉಳಿದುಕೊಳ್ಳುವ ರೂಪಗಳನ್ನು ಕೊಡುತ್ತದೆ. ಈ ರೂಪಗಳು ನೈಜವಾಗಿರುವುದಕ್ಕಿಂತ ಹೆಚ್ಚಾಗಿ ತೋರಿಕೆಗಳಾಗಿವೆ, ಆದರೆ ಅವು ಯಾರ ಯೋಚನೆಗಳಿಂದಾಗಿದ್ದವೋ ಅವರಿಗೆ ಇವೆ, ಇನ್ನೂ ಹೆಚ್ಚಾಗಿ ಅವುಗಳನ್ನು ನಂಬುವವರಿಗಾಗಿ ಇವೆ, ಅವುಗಳಿಗೆ ಸಾಕಷ್ಟು ಮೂರ್ತರೂಪದ ಅಸ್ತಿತ್ವವಿದೆ, ಅದು ಅವರಿಗೆ ನೈಜತೆಯ ಭ್ರಮೆಯನ್ನುಂಟು ಮಾಡುತ್ತದೆ. ನರಕ, ಸ್ವರ್ಗ ಇಲ್ಲವೆ ಅನೇಕ ದೇವಲೋಕಗಳು ಇವುಗಳ ಅಸ್ತಿತ್ವವನ್ನು ದೃಢೀಕರಿಸುವ ಧರ್ಮಗಳನ್ನು ನಂಬುವವರಿಗೆ ಈ ಸ್ಥಳಗಳು ವಸ್ತುನಿಷ್ಠವಾಗಿ ಅಸ್ತಿತ್ವದಲ್ಲಿವೆ, ಅವರು ಮರಣದ ನಂತರ ಅಲ್ಲಿಗೆ ದೀರ್ಘಕಾಲದ ಇಲ್ಲವೆ ಅಲ್ಪಕಾಲದ ಅವಧಿಯವರೆಗೆ ಇರಲು ಹೋಗಬಲ್ಲರು. ಆದಾಗ್ಯೂ ಈ ವಿಷಯಗಳು ಕೇವಲ ಅಶಾಶ್ವತ ಮಾನಸಿಕ ರೂಪ ತಾಳುವಿಕೆಗಳಾಗಿರುತ್ತವೆ, ಅವು ತಮ್ಮಲ್ಲಿ ಶಾಶ್ವತ ಸತ್ಯವನ್ನು ಕೊಂಡೊಯ್ಯುವುದಿಲ್ಲ. ಕೆಲವು ಜನರು ಮರಣದ ನಂತರ ಹೋದ ದೇವಲೋಕಗಳನ್ನು ಹಾಗೂ ನರಕಗಳನ್ನು ನಾನು ನೋಡಿದ್ದೇನೆ, ಅವುಗಳಲ್ಲಿ ಯಾವ ಸತ್ಯವೂ ಇಲ್ಲ ಎಂದು ಅವರು ತಿಳಿದುಕೊಳ್ಳುವಂತೆ ಮಾಡುವುದು ತುಂಬಾ ಕಠಿಣವಾದದ್ದು. ನರಕ ಎಂದು ಕರೆಯಲಾದದ್ದು ನರಕವಲ್ಲ ಎಂದು ಯಾರೋ ಒಬ್ಬನಿಗೆ ಮನವರಿಕೆ ಮಾಡಿಕೊಡಲು ಹಾಗೂ ಅವನನ್ನು ಅದರಿಂದ ಹೊರಗೆ ತೆಗೆಯಲು ಒಮ್ಮೆ ನನಗೆ ಒಂದು ವರ್ಷಕ್ಕಿಂತ ಹೆಚ್ಚು ಸಮಯ ಬೇಕಾಯಿತು.

ನಿಮ್ಮ ಅಂತರಂಗದಲ್ಲಿ ಭಗವಂತನೊಡನೆ ದಿವ್ಯಾನಂದದ ಆಧ್ಯಾತ್ಮಿಕ ಸಂಸರ್ಗವೊಂದನ್ನು ಕೊಂಡೊಯ್ಯುತ್ತಿರುವ ಹಾಗೆ ನೀವು ನಿಮ್ಮ ಸ್ವಭಾವದಲ್ಲಿಯ ಆಸುರೀ ಪ್ರವೃತ್ತಿಗಳ ಮೇಲೆ ಪ್ರಭುತ್ವ ಪಡೆಯದೆ ಹೋದರೆ ನಿಮ್ಮ ಪ್ರಜ್ಞೆಯಲ್ಲಿ ದುಃಖದ ಹಾಗೂ ಬರಡುಸ್ಥಿತಿಯ ಒಂದು ನರಕವನ್ನು ಕೂಡ ಕೊಂಡೊಯ್ಯ-ಬೇಕಾಗುತ್ತದೆ.

**CWM, 10/64-65** **- ಶ್ರೀಮಾತೆ**

*

**ಸ್ವರ್ಗ ಹಾಗೂ ಶುದ್ಧಿಲೋಕ**

**ಪ್ರಶ್ನೆ:** *(ಮಗು) ಮರಣದ ನಂತರ ಜನರು ಪ್ರಾಣಿಕ ಜಗತ್ತಿನಲ್ಲಿ ಪ್ರವೇಶಿಸುತ್ತಾರೆ, ಆದರೆ ಒಳ್ಳೆಯ ಕಾರ್ಯಗಳನ್ನು ಕೈಕೊಂಡವರು ಸ್ವರ್ಗಕ್ಕೆ ಹೋಗುತ್ತಾರೆಯೆ?*

**ಶ್ರೀಮಾತೆ:** ಸರ್ವಸಾಧಾರಣವಾಗಿ ಧಾರ್ಮಿಕ ಪುರೋಹಿತರು ವಿಶ್ವಾಸವಿದ್ದವರಿಗೆ ಹೇಳುವ ವಿಷಯ ಅದು, ಅವರು ಒಳ್ಳೆಯದನ್ನು ಕೈಕೊಳ್ಳಲಿ ಎಂದು ಹುರಿದುಂಬಿಸುವುದಕ್ಕಾಗಿ ಅದಿರುತ್ತದೆ. ಜೀವನ ದುಷ್ಟರಿಗಾಗಿ ಇರುವಷ್ಟು ಒಳ್ಳೆಯ ಜನರಿಗೆ ಸುಲಭವಾಗಿರುವುದಿಲ್ಲ, ಸಾಮಾನ್ಯವಾಗಿ ಅದು ತದ್ವಿರುದ್ಧವಾಗಿರುತ್ತದೆ: ದುಷ್ಟರು ಒಳ್ಳೆಯವರಿಗಿಂತ ಹೆಚ್ಚಿನ ಯಶಸ್ಸನ್ನು ಗಳಿಸುತ್ತಾರೆ! ಹಾಗಾಗಿ ಆಧ್ಯಾತ್ಮಿಕ ಜೀವನದತ್ತ ಒಲವಿರದ ಜನರು ತಮಗೆ ತಾವೇ ಹೇಳುತ್ತಾರೆ: "ಒಳ್ಳೆಯವನಾಗಿರಲು ನಾನು ತೊಂದರೆ ಏಕೆ ತೆಗೆದುಕೊಳ್ಳಬೇಕು, ದುಷ್ಟನಾಗಿರುವುದು ಹಾಗೂ ಸುಲಭವಾದ ಜೀವನ ನಡೆಸುವುದು ಹೆಚ್ಚು ಒಳ್ಳೆಯದು." ಒಳ್ಳೆಯವಾದವುಗಳು ಬಹಳಷ್ಟು ರೀತಿಯವಾಗಿವೆ, ಕೆಲವೊಮ್ಮೆ ಬಹುಶಃ ಒಳ್ಳೆಯವನಾಗುವುದಕ್ಕೆ ಪ್ರಯತ್ನ ಮಾಡುವ ತೊಂದರೆ ತೆಗೆದುಕೊಳ್ಳುವುದು ಯೋಗ್ಯವಾಗಿರುತ್ತದೆ. ಇದನ್ನು ಅತ್ಯಂತ ಕನಿಷ್ಠ ಬುದ್ಧಿಮತ್ತೆ ಇದ್ದವರಿಗೆ ತಿಳಿಯುವಂತೆ ಮಾಡಲು ಅವರಿಗೆ ಹೇಳುವುದು ಹೀಗಿದೆ: "ಅಲ್ಲಿ ಅದು ಬಹಳ ಸರಳವಾಗಿದೆ, ನೀನು ಹೆಚ್ಚು ವಿಧೇಯನಾಗಿದ್ದಾಗ, ಹೆಚ್ಚು ಸೂಕ್ಷ್ಮಾಭಿರುಚಿ ಇದ್ದವನಾದಾಗ, ಬಹಳ ನಿಸ್ವಾರ್ಥಿಯಾಗಿದ್ದಾಗ, ಯಾವಾಗಲೂ ನೀನು ಒಳ್ಳೆಯ ಕಾರ್ಯಗಳನ್ನು ಕೈಕೊಳ್ಳುತ್ತಿದ್ದಾಗ ನಾವು ಬೋಧಿಸುವ ಮತ ತತ್ವಗಳನ್ನು ನೀನು ನಂಬಿದಾಗ, ಸರಿ, ನೀನು ಮರಣ ಹೊಂದಿದಾಗ ದೇವರು ನಿನ್ನನ್ನು ಸ್ವರ್ಗಕ್ಕೆ ಕಳಿಸಿಕೊಡುವನು. ನಿನ್ನಲ್ಲಿ ಕೆಲವೊಮ್ಮೆ ಸದ್ಭಾವನೆಯಿದ್ದರೆ, ಕೆಲವೊಮ್ಮೆ ದುಷ್ಟ ಭಾವನೆಯಿದ್ದರೆ, ಕೆಲವೊಮ್ಮೆ ಒಳ್ಳೆಯ ಕಾರ್ಯ ಮಾಡುತ್ತಿದ್ದರೆ ಕೆಲವೊಮ್ಮೆ ಅವುಗಳನ್ನು ಮಾಡದಿದ್ದರೆ, ನೀನು ಕೇವಲ ನಿನ್ನ ಬಗ್ಗೆ ಯೋಚಿಸುತ್ತಿದ್ದರೆ, ಇತರರ ಬಗ್ಗೆ ಬಹಳ ಕಡಿಮೆ ಯೋಚಿಸಿದರೆ 'ಆಗ' ನೀವು ಮರಣ ಹೊಂದಿದ ನಂತರ ನಿನ್ನನ್ನು ಇನ್ನೊಂದು ಅನುಭವಕ್ಕಾಗಿ ಶುದ್ಧಿಲೋಕಕ್ಕೆ ಕಳಿಸಿಕೊಡಲಾಗುತ್ತದೆ. ನೀನು ಆಮೂಲಾಗ್ರವಾಗಿ ದುಷ್ಟನಾಗಿದ್ದರೆ, ಯಾವಾಗಲೂ ನೀನು ಎಲ್ಲ ಬಗೆಯ ಕಾರ್ಯಗಳನ್ನು ಕೈಕೊಳ್ಳುತ್ತ ಇತರರಿಗೆ ಹಾನಿಯನ್ನುಂಟು ಮಾಡುತ್ತಿದ್ದರೆ, ಮತ್ತು ಯಾರ ಒಳ್ಳೆಯದಕ್ಕಾಗಿ ನೀನು ಕಾಳಜಿ ವಹಿಸದಿದ್ದರೆ ಹಾಗೂ ವಿಶೇಷವಾಗಿ ನಾವು ಬೋಧಿಸುವ ಮತತತ್ವವನ್ನು ನಂಬದಿದ್ದರೆ, ಆಗ ನೀನು ನೇರವಾಗಿ ನರಕಕ್ಕೆ ಹೋಗುವಿ, ಅಲ್ಲಿ ಶಾಶ್ವತವಾಗಿ ಇರುವಿ."

ನಾನು ಕೇಳಿದ ಶೋಧನೆಗಳಲ್ಲಿ ಇದು ಅತ್ಯಂತ ಸೊಗಸಾದ ಶೋಧನೆ:

ಅವರು ಶಾಶ್ವತವಾಗಿರುವ ನರಕವನ್ನು ಶೋಧಿಸಿದ್ದಾರೆ, ಎಂದರೆ ಒಮ್ಮೆ ಅಲ್ಲಿ, ಆ ನರಕದಲ್ಲಿದ್ದರೆ, ಶಾಶ್ವತವಾಗಿ ಅಲ್ಲಿಯೇ ಉಳಿದುಕೊಳ್ಳುವಿರಿ.

**CWM, 8/217-18** **- ಶ್ರೀಮಾತೆ**

*

ಸನಾತನನ ದ್ವಾರದಲ್ಲಿ ಮದುವೆಯ ಉಡುಪು ಧರಿಸಿ ಕಾದುಕೊಂಡಿರುವುದಕ್ಕೆ ನಮ್ಮ ನಿಲುವಂಗಿಗಳನ್ನು ಬದಲು ಮಾಡುವುದೇ ಮರಣವಾಗಿದೆ.

**CWSA, 2/219** **- ಶ್ರೀ ಅರವಿಂದರು**

*

## ಮೃತ್ಯುವಿನ ನಂತರ ಏನು ಪಟ್ಟುಹಿಡಿದು ಉಳಿದುಕೊಳ್ಳುತ್ತದೆ?

### ಮೃತ್ಯುವಿನ ನಂತರ ಚೈತ್ಯಸತ್ತೆ ಪಟ್ಟುಹಿಡಿದು ಉಳಿದುಕೊಳ್ಳುತ್ತದೆ

ಮೃತ್ಯುವಿನ ನಂತರ ಚೈತ್ಯಸತ್ತೆ ಪಟ್ಟುಹಿಡಿದು ಉಳಿದುಕೊಳ್ಳುತ್ತದೆ, ಏಕೆಂದರೆ ಅದು ನಿಮ್ಮ ಶಾಶ್ವತ ಆತ್ಮ; ಇದೇ ಜೀವನದಿಂದ ಜೀವನಕ್ಕೆ ಪ್ರಜ್ಞೆಯನ್ನು ಮುನ್ನಡೆಯತ್ತ ಕೊಂಡೊಯ್ಯುತ್ತದೆ.

ಚೈತ್ಯಸತ್ತೆ ನಿಮ್ಮ ಅಂತರಂಗದಲ್ಲಿರುವ ನಿಜವಾದ ಹಾಗೂ ದೈವಿಕವಾದ ವ್ಯಕ್ತಿಯ ನಿಜವಾದ ವ್ಯಕ್ತಿತ್ವವಾಗಿರುತ್ತದೆ. ಏಕೆಂದರೆ ನಿಮ್ಮ ವ್ಯಕ್ತಿತ್ವದ ಅರ್ಥ ನಿಮ್ಮ ವಿಶಿಷ್ಟ ರೀತಿಯ ಅಭಿವ್ಯಕ್ತಿ ಮತ್ತು ನಿಮ್ಮ ಚೈತ್ಯಸತ್ತೆ ಏಕೈಕ ದೈವೀಪ್ರಜ್ಞೆಯ ಒಂದು ವಿಶಿಷ್ಟ ಮುಖ, ಅದು ನಿಮ್ಮಲ್ಲಿ ಆಕಾರ ಪಡೆದಿರುತ್ತದೆ. ಆದರೆ ಚೈತ್ಯಾತ್ಮಿಕ ಪ್ರಜ್ಞೆಯಲ್ಲಿ ವ್ಯಕ್ತಿ ಹಾಗೂ ವಿಶ್ವಂಭರ ಪ್ರಜ್ಞೆ ಇವುಗಳ ನಡುವೆ ಆ ಅರ್ಥದಲ್ಲಿ ವಿಭಜನೆ ಇರುವುದಿಲ್ಲ, ಆ ವಿಭಜನೆ ನಿಮ್ಮ ಸ್ವಭಾವದ ಇತರ ಭಾಗಗಳ ಮೇಲೆ ನೆಲೆಸುತ್ತದೆ. ಅಲ್ಲಿ ನೀವು ನಿಮ್ಮ ವ್ಯಕ್ತಿತ್ವ ಅಭಿವ್ಯಕ್ತಿಯ ನಿಮ್ಮದೇ ದಾರಿ ಎಂಬುದರ ಬಗ್ಗೆ ಪ್ರಜ್ಞೆಯುಳ್ಳವರಾಗಿರುತ್ತೀರಿ, ಆದರೆ ಅದೇ ವೇಳೆಗೆ ಅದು ವಿಶ್ವಂಭರ ಪ್ರಜ್ಞೆಯನ್ನು ವಸ್ತುನಿಷ್ಠವಾಗಿಸುವ ಒಂದು ಅಭಿವ್ಯಕ್ತಿ ಎಂಬುದನ್ನೂ ತಿಳಿದಿರುತ್ತೀರಿ. ಅದು ನಿಮ್ಮೊಳಗಿಂದಲೇ ಒಂದು ಭಾಗವನ್ನು ನೀವು ಕೈಗೆತ್ತಿಕೊಂಡಿರುವ ಹಾಗೆ ಮತ್ತು ಅಲ್ಲಿ ಅವೆರಡರ ನಡುವೆ ಪರಸ್ಪರ ನೋಟ ಚಲನೆಗಳ ಲೀಲೆ ಇರುವ ಹಾಗಿರುತ್ತದೆ. ಈ ದ್ವಿತ್ವ ವಸ್ತುನಿಷ್ಠವಾಗಿರಿಸಿದ ಸಂಬಂಧವನ್ನು ಸ್ಥಾಪಿಸಲು ಹಾಗೂ

ಅದರ ಸಂತೋಷ ಪಡೆಯಲು ಅವಶ್ಯವಾಗಿತ್ತು. ಆದರೆ ನಿಮ್ಮ ಚೈತ್ಯಸತ್ತೆಯಲ್ಲಿ ದ್ವಿತ್ವವನ್ನು ಹರಿತಗೊಳಿಸುವ ಪ್ರತ್ಯೇಕತೆಯನ್ನು ಒಂದು ಭ್ರಮೆಯೆಂದು ನೋಡಲಾಗುತ್ತದೆ, ಒಂದು ತೋರಿಕೆಗಿಂತ ಹೆಚ್ಚಿನದೇನೂ ಆಗಿರುವುದಿಲ್ಲ.

**CWM, 3/63** **- ಶ್ರೀಮಾತೆ**

*

**ಕೇಂದ್ರಸತ್ತೆ ಹಾಗೂ ಚೈತ್ಯಸತ್ತೆ**

ಕೇಂದ್ರಸತ್ತೆ ಮತ್ತು ಚೈತ್ಯಸತ್ತೆ ಒಂದೇ ಆಗಿವೆ ಎಂದು ಹೇಳಿದ್ದೆವು. ಆದರೆ ಉಳಿದುಕೊಳ್ಳುವ ಹಾಗೂ ಭಗವಂತನಲ್ಲಿರುವ ಭಾಗ ಉಳಿದುಕೊಳ್ಳುತ್ತದೆ ಮತ್ತು ಭಗವಂತನಲ್ಲಿರುತ್ತದೆ. ಪೃಥ್ವಿಯ ಜೀವನದಲ್ಲಿ ಚೈತ್ಯ ಪೃಥ್ವಿಯ ಮೇಲಿನ ಬೆಳವಣಿಗಾಗಿ ಈ ಭಗವಂತನ ಪ್ರತಿನಿಧಿಯಾಗಿರುತ್ತದೆ. ಆದರೆ ಭಗವಂತನೊಡನೆ ಗುರುತಿಸಿಕೊಂಡ ಕೇಂದ್ರಸತ್ತೆಯ ಭಾಗ ಭಗವಂತನೊಡನೆ ಗುರುತಿಸಿಕೊಂಡು ಅವನೊಡನೆ ಉಳಿದುಕೊಳ್ಳುತ್ತದೆ ಮತ್ತು ಬದಲಾಗುವುದಿಲ್ಲ. ಜೀವನ ಕಾಲದಲ್ಲೂ ಕೂಡ ಅದು ಭಗವಂತನೊಡನೆ ಗುರುತಿಸಿಕೊಂಡಿರುತ್ತದೆ ಮತ್ತು ಮರಣದ ನಂತರ ಜೀವನ ಕಾಲದಲ್ಲಿದ್ದ ಹಾಗೆ ಉಳಿದುಕೊಳ್ಳುತ್ತದೆ, ಅದಕ್ಕೆ ಇದು ಯಾವ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. ಚೈತ್ಯಸತ್ತೆಗೆ ಅನುಭವ ಹಾಗೂ ಜೀರ್ಣಿಸಿಕೊಳ್ಳುವಿಕೆ ಇರುತ್ತವೆ. ಅನುಭವ ಹಾಗೂ ಜೀರ್ಣಿಸಿಕೊಳ್ಳುವಿಕೆ. ಆದರೆ ಜೀವಾತ್ಮನ್ ಭಗವಂತನಲ್ಲಿರುತ್ತದೆ ಮತ್ತು ಅಲ್ಲಿಯೇ ಉಳಿದುಕೊಳ್ಳುತ್ತದೆ, ಅಲ್ಲಿಂದ ಅದು ಚಲಿಸುವುದಿಲ್ಲ ಮತ್ತು ಅದು ಪ್ರಗತಿಪರವಾಗಿರುವುದಿಲ್ಲ. ಅದು ಭಗವಂತನಲ್ಲಿರುತ್ತದೆ, ಭಗವಂತನೊಂದಿಗೆ ಗುರುತಿಸಿಕೊಂಡಿರುತ್ತದೆ, ಅವನಿಂದ ಪ್ರತ್ಯೇಕವಾಗಿರುವುದಿಲ್ಲ. ಪೃಥ್ವಿಯ ಮೇಲಿನ ದೇಹ ಇದೆಯೋ ಇಲ್ಲವೋ ಎಂಬುದು ಅದಕ್ಕೆ ಯಾವ ವ್ಯತ್ಯಾಸವನ್ನುಂಟು ಮಾಡುವುದಿಲ್ಲ.

**ಪ್ರಶ್ನೆ:** *ಹಾಗಾದರೆ, ಮಧುರಮಾತೆಯವರೆ, ಪ್ರತಿಯೊಬ್ಬನ ಕೇಂದ್ರ ಸತ್ಯ ಒಂದೇ ಆಗಿರುತ್ತದೆಯೆ?*

**ಶ್ರೀಮಾತೆ:** ಇಲ್ಲ, ಏಕೆಂದರೆ ಅದನ್ನು ಬಹುಸಂಖ್ಯೆಯಲ್ಲಿ ಗುರುತಿಸಲಾಗುತ್ತದೆ ಎಂದು ಹೇಳಲಾಗಿದೆ. ಒಂದು ದೃಷ್ಟಿಕೋನದಿಂದ ಅವು ಒಂದೇ ಆಗಿರುತ್ತವೆ, ಇನ್ನೊಂದು ದೃಷ್ಟಿಕೋನದಿಂದ ಅವು ಬಹುಸಂಖ್ಯೆಯಲ್ಲಿರುತ್ತವೆ, ಏಕೆಂದರೆ

ಪ್ರತಿಯೊಂದು ಸತ್ತೆಯ ಸತ್ಯ ವ್ಯಕ್ತಿಗತ ಸತ್ಯವಾಗಿದೆ, ಆದರೆ ಅದು ಭಗವಂತನೊಡನೆ ಗುರುತಿಸಿಕೊಂಡಿರುತ್ತದೆ. ಅದು ಪ್ರಕಟಣೆಯ ಹೊರಗಿದೆ, ಆದರೆ ಅದು ಪ್ರಕಟಣೆಯ ಮೂಲವಾಗಿರುತ್ತದೆ. ಅದು ಏಕತೆಯಾಗಿದೆ, ಆ ಏಕತೆ ಒಂದೇ ಸಮನಾಗಿ ಇರುವುದಿಲ್ಲ.

**CWM, 7/223-24** **- ಶ್ರೀಮಾತೆ**

*

**ಪೂರ್ತಿ ಅಭಿವೃದ್ಧಿ ಹೊಂದಿದ ಚೈತ್ಯಸತ್ತೆಯ ಹೊರಹೊರಡುವಿಕೆ**

ತನ್ನಂತರಂಗದಲ್ಲಿ ದೈವೀಸಾನ್ನಿಧ್ಯದ ಸುತ್ತ ಸಂಪೂರ್ಣವಾಗಿ ಏಕೀಕೃತಗೊಂಡ ಮನುಷ್ಯನ ಅತ್ಯಂತ ಒಳ್ಳೆಯ ಉದಾಹರಣೆಯನ್ನು ಕೈಗೆತ್ತಿಕೊಳ್ಳೋಣ. ಅವನು ಈಗ ಏಕೈಕ ಸಂಕಲ್ಪವುಳ್ಳವನಾಗಿರುತ್ತಾನೆ, ಏಕೈಕ ಪ್ರಜ್ಞೆಯನ್ನು ಹೊಂದಿರುತ್ತಾನೆ. ಈ ವ್ಯಕ್ತಿ ಕೇಂದ್ರ ಚೈತ್ಯಸತ್ತೆಯ ಸುತ್ತ ಪೂರ್ತಿ ಅಭಿವೃದ್ಧಿ ಹೊಂದಿದ ಹಾಗೂ ಸಂಘಟಿತ ಮನಸ್ಸನ್ನು, ಪೂರ್ತಿ ಶರಣಾಗತವಾಗಿರುವ ಹಾಗೂ ಸಹಕರಿಸುವ ಪ್ರಾಣಿಕವನ್ನು ಹಾಗೂ ವಿಧೇಯವಾಗಿರುವ, ಸುಲಭವಾಗಿ ಹತೋಟಿಯಲ್ಲಿಡ–ಬಹುದಾದ, ನಮ್ಯ ಭೌತಿಕ ಸತ್ತೆಯನ್ನು ಗುಂಪುಗೂಡಿಸಿರುತ್ತಾನೆ. ಪೂರ್ತಿ ಅಭಿವೃದ್ಧಿ ಹೊಂದಿದ ಈ ಭೌತಿಕ ಸತ್ತೆಗೆ ಒಂದು ಸೂಕ್ಷ್ಮದೇಹವಿರುತ್ತದೆ– ಅದನ್ನು ಶ್ರೀ ಅರವಿಂದರು "ನಿಜವಾದ ಭೌತಿಕ" ಎಂದು ಕರೆದಿದ್ದಾರೆ– ಅದು ದೇಹದ ಮಿತಿಗಳನ್ನು ಅನಂತಪಟ್ಟು ಮೀರಿ ಹೋಗುತ್ತದೆ ಮತ್ತು ಅದಕ್ಕೆ ಸಾಕಷ್ಟು ನಮ್ಯತೆ ಹಾಗೂ ಸಮತೋಲನ ಇರುತ್ತವೆ, ಅದರಿಂದಾಗಿ ಅದು ಸತ್ತೆಯ ಆಂತರಿಕ ಭಾಗಗಳಿಗೆ ಅಂಟಿಕೊಂಡಿರಲು ಮತ್ತು ಆತ್ಮದ ಚಲನೆಯನ್ನು ಅನುಸರಿಸಲು ಶಕ್ತವಾಗುತ್ತದೆ. ಈ ಅನುಸರಿಸುವಿಕೆ ಆತ್ಮದ ಆರೋಹಣಕ್ಕಾಗಿ ಇರುತ್ತದೆ ಎಂದು ನಾನು ಹೇಳುವುದಿಲ್ಲ, ಆದರೆ ದೇಹದ ಹೊರಗೆ ಅದರ ತಿರುಗಾಟದಲ್ಲಿರುತ್ತದೆ. ಆತ್ಮ ಏನನ್ನು ಮಾಡಲಿದೆ, ಎಲ್ಲಿಗೆ ಅದು ಹೋಗಲಿದೆ– ಇದೆಲ್ಲವೂ ಅದು ದೇಹತ್ಯಾಗ ಮಾಡುವುದಕ್ಕಿಂತ ಮೊದಲು ಏನನ್ನು ನಿರ್ಧರಿಸಿದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ ಮತ್ತು ಅದರ ಭೌತಿಕ ಜೀವನದಲ್ಲಿ ತನ್ನ ಸುತ್ತ ಪೂರ್ತಿ ಸಂಘಟಿತವಾದ ಹಾಗೂ ಏಕೀಕೃತವಾದ ಸತ್ತೆಯನ್ನು ಕಾಪಾಡಿಕೊಂಡು ಬರುವ ಈ ಕ್ಷಮತೆ ಅದು ಕೈಕೊಳ್ಳಲು ಬಯಸಿದ್ದನ್ನು ಆಯ್ದುಕೊಳ್ಳಲು ಅನುವು ಮಾಡಿಕೊಡುತ್ತದೆ. ಮತ್ತು ಇದು ಕೂಡ ಭೌತಿಕ

ಜೀವನದಲ್ಲಿ ಭಿನ್ನ ಸಾಧ್ಯತೆಗಳ ಕ್ಷೇತ್ರವನ್ನು ಪ್ರತಿನಿಧಿಸುತ್ತದೆ. ಒಂದು ದೇಹದಿಂದ ಇನ್ನೊಂದು ದೇಹಕ್ಕೆ ನೇರವಾಗಿ ಸಾಗಿ ಹೋಗುವುದು– ಉದಾಹರಣೆಗಳಿವೆ, ಪೂರ್ತಿ ಪ್ರಜ್ಞೆಯುಳ್ಳ ಹಾಗೂ ಪೂರ್ತಿ ಅಭಿವೃದ್ಧಿ ಹೊಂದಿದ ಸತ್ತೆಗಳಲ್ಲಿ ಒಂದು ನಿಧಾನಗತಿಯಲ್ಲಿ ಇನ್ನೊಂದು ಸತ್ತೆಯನ್ನು ತಯಾರು ಮಾಡಿತು, ಹೀಗೆ ತಯಾರಾದ ಸತ್ತೆ ಅದನ್ನು ಸ್ವೀಕರಿಸುವ ಹಾಗೂ ಜೀರ್ಣಿಸಿಕೊಳ್ಳುವ ಕ್ಷಮತೆಯನ್ನು ಹೊಂದಿತ್ತು; ಮತ್ತು ದೇಹ ತ್ಯಜಿಸಿದಾಗ ಅದರ ಪ್ರಾಪಂಚಿಕ ಕಾರ್ಯ ನಿಂತುಹೋಗಬಾರದೆಂದು ಅದು ಇನ್ನೊಂದು ಚೈತ್ಯಸತ್ತೆಯ ಬಳಿ ಹೋಗಿ ಅದರಲ್ಲಿ ಮುಳುಗುತ್ತದೆ ಮತ್ತು ಅದರೊಂದಿಗೆ ಇನ್ನೊಂದು ದೇಹದಲ್ಲಿ ಕೂಡಿಕೊಳ್ಳುತ್ತದೆ. ಅದು ಒಂದು ಪರಾಕಾಷ್ಠೆಯ ದೃಷ್ಟಾಂತ, ಅತ್ಯಂತ ಅಪರೂಪವಾದದ್ದೂ ಕೂಡ, ಆದರೆ ಅದು ಒಟ್ಟಿನಲ್ಲಿ ಸಾಂಪ್ರದಾಯಿಕ ರಹಸ್ಯ ಜ್ಞಾನದ ಒಂದು ಭಾಗವನ್ನು ರೂಪಿಸುತ್ತದೆ; ಇನ್ನೊಂದು ತುದಿಯಲ್ಲಿರುವ ಉದಾಹರಣೆಯಿದೆ, ಆತ್ಮ ತನ್ನ ದೈಹಿಕ ಅನುಭವವನ್ನು ಮುಕ್ತಾಯಗೊಳಿಸಿದ ನಂತರ ವಿಶ್ರಾಂತಿ ಸ್ಥಿತಿಯಲ್ಲಿ ಅದನ್ನು ಜೀರ್ಣಿಸಿಕೊಳ್ಳಲು ಮತ್ತು ನಂತರ ಕೆಲವೊಮ್ಮೆ ಬಹಳ ಕಾಲದ ನಂತರ ಇನ್ನೊಂದು ಭೌತಿಕ ಅಸ್ತಿತ್ವವನ್ನು ತಯಾರು ಮಾಡಲು ಬಯಸುತ್ತದೆ. ಇತರ ಹಲವಾರು ಸಾಧ್ಯತೆಗಳ ಮಧ್ಯದಲ್ಲಿ ಸಂಭವಿಸುವುದು ಇದಾಗಿರುತ್ತದೆ: ಅದು ಪ್ರತಿಯೊಂದು ಪ್ರಾಂತದಲ್ಲಿ– ಸೂಕ್ಷ್ಮಭೌತಿಕದಲ್ಲಿ, ಪ್ರಾಣಿಕದಲ್ಲಿ, ಮಾನಸಿಕ ಪ್ರಾಂತದಲ್ಲಿ– ಅದಕ್ಕನುಗುಣವಾದ ಸತ್ತೆಗಳನ್ನು ಬಿಟ್ಟುಕೊಡುತ್ತದೆ; ಅವುಗಳ ನಡುವೆ ಒಂದು ಬಗೆಯ ಕೊಂಡಿಯನ್ನಿರಿಸಿ ಬಿಟ್ಟುಕೊಡುತ್ತದೆ, ಆದರೆ ಪ್ರತಿಯೊಂದು ತನ್ನ ಸ್ವತಂತ್ರ ಅಸ್ತಿತ್ವವನ್ನು ಕಾಪಾಡಿಕೊಂಡು ಬರುತ್ತದೆ, ತಾನೇ ಸ್ವತಃ ಸ್ವಂತದ, ನೈಜತೆಯ ವಲಯವಾದ ಚೈತ್ಯಸತ್ತೆಯ ಲೋಕಕ್ಕೆ ಹೋಗುತ್ತದೆ. ಜೀರ್ಣಿಸಿಕೊಳ್ಳುವುದಕ್ಕಾಗಿ ದಿವ್ಯಾನಂದವಿರುವ ವಿಶ್ರಾಂತಿ ಸ್ಥಿತಿಯಲ್ಲಿ ಪ್ರವೇಶಿಸುತ್ತದೆ, ಈ ಹಾಳೆಯಲ್ಲಿ ವರ್ಣಿಸಿದ ಹಾಗೆ ಅದು ತನ್ನ ಎಲ್ಲ ಒಳ್ಳೆಯ ಕಾರ್ಯಗಳನ್ನು ಜೀರ್ಣಿಸಿಕೊಳ್ಳುವವರೆಗೆ ಮತ್ತು ಹೊಸ ಅನುಭವವನ್ನು ಪ್ರಾರಂಭಿಸಲು ತಯಾರಾಗುವವರೆಗೆ ಆ ಸ್ಥಿತಿಯಲ್ಲಿ ಉಳಿದುಕೊಂಡಿರುತ್ತದೆ ಮತ್ತು ನಂತರ ಅದರ ಕಾರ್ಯವನ್ನು ಒಳ್ಳೆಯ ರೀತಿಯಲ್ಲಿ ಮಾಡಲಾಗಿದ್ದರೆ, ಭಿನ್ನ ಪ್ರಾಂತಗಳಲ್ಲಿ ಬಿಟ್ಟುಕೊಟ್ಟಿದ್ದ ಅದರ ಸತ್ತೆಯ ಭಾಗಗಳು ಇಲ್ಲವೆ ಕೋಶಗಳು ಕೈಕೊಳ್ಳಬೇಕಾಗಿದ್ದ ರೀತಿಯಲ್ಲಿ ಕಾರ್ಯಕೈಕೊಂಡಿದ್ದರೆ, ಅದು ಮತ್ತೊಮ್ಮೆ ಅವರೋಹಣ

ಮಾಡಿಬಂದಾಗ ಅದರ ಮೊದಲಿನ ಜೀವನದಲ್ಲಿ ಅದರೊಟ್ಟಿಗಿದ್ದ ಈ ಎಲ್ಲ ಭಾಗಗಳನ್ನು ಒಂದರ ನಂತರ ಒಂದರಂತೆ ಧಾರಣ ಮಾಡುತ್ತದೆ ಮತ್ತು ಜ್ಞಾನದ ಹಾಗೂ ಅನುಭವದ ಈ ಸಂಪತ್ತಿನೊಂದಿಗೆ ಅದು ಹೊಸ ದೇಹದಲ್ಲಿ ಪ್ರವೇಶಿಸುವುದಕ್ಕೆ ತಯಾರು ಮಾಡಿಕೊಳ್ಳುತ್ತದೆ.

**CWM, 8/333-338** **- ಶ್ರೀಮಾತೆ**

*

**ಭೂತ ಆತ್ಮವಲ್ಲ**

ಭೂತ ಎಂಬುದರ ಅರ್ಥವೇನು? ಜನಸಾಮಾನ್ಯರ ಮಾತಿನ ರೂಢಿಯಲ್ಲಿ ಭೂತ ಶಬ್ದ ಭವ್ಯ ಸಂಖ್ಯೆಯಲ್ಲಿರುವ ಗೋಚರ ಸಂಗತಿಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಒಂದಕ್ಕೆ ಇನ್ನೊಂದರ ಯಾವ ಸಂಬಂಧವೂ ಅವಶ್ಯವಾಗಿ ಇರುವುದಿಲ್ಲ. ಕೆಲವನ್ನು ಮಾತ್ರ ಇಲ್ಲಿ ಹೇಳಲಾಗಿದೆ.

1. ದೇಹತ್ಯಾಗ ಮಾಡಿದ ಮಾನವ ಸತ್ತೆಯ ಸೂಕ್ಷ್ಮ ದೇಹದಲ್ಲಿ ವಾಸ್ತವದಲ್ಲಿ ವಾಸಿಸುತ್ತಿರುವ ಆತ್ಮದ ಬಗ್ಗೆ ನಮ್ಮ ಸಂಪರ್ಕ ನಮಗೆ ಕಾಣಿಸಿಕೊಂಡ ಪ್ರತೀಕ ಇಲ್ಲವೆ ಕೇಳಿಸಿಕೊಂಡ ಒಂದು ಧ್ವನಿ ಇದರಿಂದ ಭಾವನೆಗೆ ಬಂದದ್ದು.
2. ಒಂದು ಸ್ಥಳದ ಇಲ್ಲವೆ ಅದರ ಸುತ್ತುಮುತ್ತಲಿನಲ್ಲಿರುವ ವಾತಾವರಣದ ಮೇಲೆ ದೇಹ ತ್ಯಾಗ ಮಾಡಿದ ಮಾನವ ಸತ್ತೆಯ ಯೋಚನೆಗಳು ಹಾಗೂ ಭಾವನೆಗಳು ಇವುಗಳ ಮೂಲಕ ಮುದ್ರೆ ಹೊಡೆದಂತಿರುವ ಮಾನಸಿಕ ರೂಪತಾಳುವಿಕೆಯಿರುತ್ತದೆ, ಅದು ತನ್ನನ್ನು ಬರಿದು ಮಾಡಿಕೊಳ್ಳುವವರೆಗೆ ಇಲ್ಲವೆ ಒಂದಿಲ್ಲೊಂದು ಸಾಧನದಿಂದ ಕರಗಿ ಹೋಗುವವರೆಗೆ ಆ ವಾತಾವರಣದಲ್ಲಿ ಅಲೆದಾಡುತ್ತದೆ, ಪುನರಾವರ್ತಿಸುತ್ತ ತೋರಿಸಿಕೊಳ್ಳುತ್ತದೆ. ದೆವ್ವ ಹಿಡಿದ ಮನೆಯಲ್ಲಿ ಕಂಡುಬರುವ ಇಂತಹ ಗೋಚರ ಸಂಗತಿಗೆ ಇದೇ ವಿವರಣೆ ನೀಡುತ್ತದೆ. ಕೊಲೆಯೊಂದು ನಡೆದ ಆ ಮನೆಯಲ್ಲಿ ಹಾಜರಿರುವ, ಸುತ್ತುವರಿದಿರುವ, ಮೊದಲು ಬಂದ ದೃಶ್ಯಗಳು ಮೇಲಿಂದ ಮೇಲೆ ಪುನರಾವರ್ತಿಸುತ್ತ ಬರುತ್ತವೆ.
3. ದೇಹತ್ಯಾಗ ಮಾಡಿದ ಮಾನವ ಸತ್ತೆ ವಿಸರ್ಜಿಸಿದ ಪ್ರಾಣಿಕ ಕೋಶವನ್ನು ಇಲ್ಲವೆ ಅವನ ಪ್ರಾಣಿಕದ ತುಂಡೊಂದನ್ನು ಧಾರಣ ಮಾಡಿದ ನಿಮ್ನತರ ಪ್ರಾಣಿಕ ಸ್ತರಗಳಲ್ಲಿರುವ ಒಂದು ಸತ್ತೆಯು ಆ ವ್ಯಕ್ತಿಯ ಮೇಲ್ಮೈ

ಯೋಚನೆಗಳು ಹಾಗೂ ನೆನಪುಗಳು ಇವುಗಳೊಡನೆ ಅವನ ರೂಪದಲ್ಲಿ ಕಾರ್ಯ ಮಾಡುತ್ತದೆ.

4. ನಿಮ್ನತರ ಪ್ರಾಣಿಕ ಸ್ತರದ ಸತ್ತೆಯೊಂದು ಜೀವಂತವಿರುವ ಮಾನವ ಸತ್ತೆಯ ಮಾಧ್ಯಮದ ಮೂಲಕ ಇಲ್ಲವೆ ಬೇರೆ ಇನ್ನಾವುದೋ ಸಾಧನದ ಇಲ್ಲವೆ ನಿಯೋಗಿಯ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಭೌತಿಕ ರೂಪ ತಾಳಬಹುದು, ಅದರಿಂದಾಗಿ ಅದು ಗೋಚರವಾಗುವ ರೀತಿಯಲ್ಲಿ ತೋರಿಬರಬಹುದು, ಕಾರ್ಯ ಕೈಕೊಳ್ಳಬಹುದು, ಇಲ್ಲವೆ ತೋರಿಬರ–ದಂತಿದ್ದು ಕೇಳಿಸಿಕೊಳ್ಳಬಹುದಾದ ರೀತಿಯಲ್ಲಿ ಮಾತನಾಡಬಹುದು, ಪೀಠೋಪಕರಣಗಳಂತಹ ಭೌತಿಕ ವಸ್ತುಗಳ ಸುತ್ತ ಸುಳಿದಾಡಬಹುದು, ವಿಷಯಗಳನ್ನು ವಸ್ತುರೂಪಕ್ಕಿಳಿಸಬಹುದು ಇಲ್ಲವೆ ಅವುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಎತ್ತಿಕೊಂಡು ಹೋಗಬಹುದು. ಇದು ಗಲಾಟೆ ಮಾಡುವ ಭೂತಗಳು, ಮರಗಳಲ್ಲಿ ವಾಸಿಸುವ ಭೂತಗಳು ಇವುಗಳಿಗೆ ಹಾಗೂ ಇನ್ನಿತರ ಇಂತಹ ಗೊತ್ತಿದ್ದ ವಿಷಯಗಳಿಗೆ ವಿವರಣೆ ನೀಡುತ್ತದೆ.

5. ಮನುಷ್ಯ ತನ್ನದೇ ಮನಸ್ಸಿನಿಂದ ರೂಪತಾಳುವಂತೆ ಮಾಡಿದ ಭೂತ, ಪ್ರೇತಗಳು, ಆದರೆ ಅವು ಇಂದ್ರಿಯಗಳಿಗೆ ವಸ್ತುನಿಷ್ಠ ತೋರಿಕೆಗಳನ್ನು ಗೋಚರಪಡಿಸುವವು.

6. ಪ್ರಾಣಿಕ ಸತ್ತೆಗಳು ಜನರನ್ನು ತಾತ್ಕಾಲಿಕವಾಗಿ ತಮ್ಮ ವಶದಲ್ಲಿಟ್ಟು–ಕೊಳ್ಳುವುದಿರುತ್ತದೆ, ಅವು ಕೆಲವೊಮ್ಮೆ ಮೃತರಾದ ಸಂಬಂಧಿಕರೆಂದು ನಟನೆ ಮಾಡುತ್ತವೆ.

7. ಬಹಳಷ್ಟು ಸಲ, ಜನರು ಮರಣ ಹೊಂದುವ ಸಮಯದಲ್ಲಿ ಪ್ರಕ್ಷೇಪಿಸಿದ ತಮ್ಮದೇ ಯೋಚನೆಯ ಪ್ರತೀಕಗಳು ಆ ಸಮಯದಲ್ಲಿ ಅವರ ಮಿತ್ರರಿಗೆ ಇಲ್ಲವೆ ಸಂಬಂಧಿಕರಿಗೆ ತೋರಿಬರುತ್ತವೆ.

ಈ ದೃಷ್ಟಾಂತಗಳಲ್ಲಿ ಒಂದರಲ್ಲಿ ಎಂದರೆ ಮೊದಲನೆಯದರಲ್ಲಿ ಆತ್ಮವನ್ನು ಇರಿಸಿದರೆ ಯಾವ ತೊಂದರೆಯೂ ಇರುವುದಿಲ್ಲ ಎಂಬುದನ್ನು ನೀವು ಕಂಡುಕೊಳ್ಳುತ್ತೀರಿ.

**CWSA, 28/569-70** **- ಶ್ರೀ ಅರವಿಂದರು**

*

ಸಹಜವಾಗಿ ಭೂತ ಆತ್ಮವಲ್ಲ. ಅದು ಮನುಷ್ಯ ತನ್ನ ಪ್ರಾಣಿಕದಲ್ಲಿ ತೋರಿಬರುವುದಾಗಿರುತ್ತದೆ ಇಲ್ಲವೆ ಅವನ ಪ್ರಾಣಿಕದ ತುಂಡೊಂದು ಯಾರದೋ ಪ್ರಾಣಿಕ ಶಕ್ತಿ ಇಲ್ಲವೆ ಸತ್ತೆಯ ಹಿಡಿತಕ್ಕೊಳಗಾಗಿ ತೋರಿಬರುವುದಾಗಿರುತ್ತದೆ. ದೇಹ ವಿಘಟನೆ ಹೊಂದಿದ ನಂತರ ಸ್ವಲ್ಪ ಕಾಲ, ಸಾಮಾನ್ಯವಾಗಿ, ನಮ್ಮ ಪ್ರಾಣಿಕ ಭಾಗ ಅಸ್ತಿತ್ವದಲ್ಲಿರುತ್ತದೆ ಮತ್ತು ಪ್ರಾಣಿಕ ಸ್ತರದಲ್ಲಿ ಸಾಗಿ ಹೋಗುತ್ತದೆ, ಅಲ್ಲಿ ಪ್ರಾಣಿಕ ಕೋಶ ಕರಗಿ ಹೋಗುವವರೆಗೆ ಉಳಿದುಕೊಂಡಿರುತ್ತದೆ. ಅದು ಮಾನಸಿಕವಾಗಿ ಉತ್ಕ್ರಾಂತಿ ಹೊಂದಿದ್ದರೆ ನಂತರ ಮಾನಸಿಕ ಕೋಶದಲ್ಲಿ ಯಾವುದೋ ಮಾನಸಿಕ ಜಗತ್ತಿಗೆ ಹೋಗುತ್ತದೆ ಮತ್ತು ಕೊನೆಗೆ ಚೈತ್ಯ ತನ್ನ ಮಾನಸಿಕ ಕೋಶವನ್ನು ಕೂಡ ಬಿಟ್ಟುಕೊಟ್ಟು ಅದರ ವಿಶ್ರಾಂತಿ ಸ್ಥಾನಕ್ಕೆ ಹೋಗುತ್ತದೆ. ಮಾನಸಿಕವಾದದ್ದು ದೃಢವಾದ ರೀತಿಯಲ್ಲಿ ಅಭಿವೃದ್ಧಿ ಹೊಂದಿದ್ದರೆ, ಆಗ ನಮ್ಮ ಮಾನಸಿಕ ಭಾಗ ಉಳಿದುಕೊಳ್ಳುವುದು, ಹಾಗೆಯೇ ಪ್ರಾಣಿಕವಾದದ್ದೂ ಉಳಿದುಕೊಳ್ಳುವುದು, ಆದರೆ ಅದಕ್ಕಾಗಿ ಅವು ನಿಜವಾದ ಚೈತ್ಯ ಸತ್ತೆಯ ಮೂಲಕ ಸಂಘಟಿತವಾಗಿರಬೇಕು ಮತ್ತು ಅದನ್ನು ಕೇಂದ್ರವನ್ನಾಗಿ ಮಾಡಿಕೊಂಡಿರಬೇಕು. ಹಾಗಿರದಿದ್ದರೆ ಚೈತ್ಯ ಮನಸ್ಸನ್ನು ಹಾಗೂ ಪ್ರಾಣವನ್ನು ತನ್ನೊಳಗೆ ಎಳೆದುಕೊಳ್ಳುತ್ತದೆ ಮತ್ತು ಜನ್ಮದ ಮಧ್ಯದಲ್ಲಿರುವ ನಿಶ್ಚಲತೆಯಲ್ಲಿ ಪ್ರವೇಶಿಸುತ್ತದೆ.

**CWSA, 28/117** **- ಶ್ರೀ ಅರವಿಂದರು**

*

ಪ್ರಾರಂಭದಿಂದ ದೈವೀ ಕಿಡಿಯಿರುತ್ತದೆ, ಅದು ಎಲ್ಲ ವಸ್ತುಗಳಲ್ಲಿರುವ ಆತ್ಮ, ಆದರೆ ನಾವು ಚೈತ್ಯ ಸತ್ತೆಯೆಂದು ಕರೆಯುವ ಪ್ರಕಟಗೊಂಡ ಸತ್ತೆಯ ಪ್ರಜ್ಞಾಪೂರ್ಣ ಅಭಿವ್ಯಕ್ತಿಯನ್ನು ಹಾಗೂ ರೂಪತಾಳುವಿಕೆಯನ್ನು ತಲುಪಲು ಅದು ದೀರ್ಘಕಾಲ ತೆಗೆದುಕೊಳ್ಳುತ್ತದೆ, ದೀರ್ಘಾವಧಿಯಲ್ಲಿ ಉತ್ಕ್ರಾಂತಿ ಹೊಂದಬೇಕಾಗಿರುತ್ತದೆ.

**CWSA, 28/177** **- ಶ್ರೀ ಅರವಿಂದರು**

*



ಪ್ರಕೃತಿ ಜೀವನಕ್ಕೆ ಸತತ ಕೇಳುತ್ತಿರುವ ಪ್ರಶ್ನೆ ಮೃತ್ಯು ಕುರಿತಾಗಿದೆ, ಹಾಗೂ ಅದು ಜೀವನ ತನ್ನನ್ನು ತಾನು ಇನ್ನೂ ಕಂಡುಕೊಂಡಿಲ್ಲ ಎಂಬ ನೆನಪನ್ನು ತಂದುಕೊಡುತ್ತದೆ. ಮೃತ್ಯುವಿನ ಕುರುಹುಗಳೇ ಇರದಿದ್ದರೆ ಜೀವಿ ಎಂದೆಂದಿಗೂ ಅಪರಿಪೂರ್ಣವಾಗಿ ಜೀವಿಸುವ ಅದರ ಅಪರಿಪೂರ್ಣ ದೇಹದ ಬಂಧನ–ಕ್ಕೊಳಗಾಗಿ ಉಳಿದುಕೊಳ್ಳಬೇಕಾಗುತ್ತದೆ. ಮೃತ್ಯುವಿನಿಂದ ಬೆಂಬತ್ತಿದವನಾಗಿ ಅವನು ಪರಿಪೂರ್ಣ ಜೀವನದ ವಿಚಾರ ಕುರಿತು ಎಚ್ಚತ್ತುಕೊಳ್ಳುತ್ತಾನೆ ಮತ್ತು ಅದಕ್ಕಾಗಿ ಸಾಧನಗಳನ್ನು ಹಾಗೂ ಸಾಧ್ಯತೆಯನ್ನು ಅರಸಿಕೊಂಡು ಹೋಗುತ್ತಾನೆ.

**CWSA, 13/205** **- ಶ್ರೀ ಅರವಿಂದರು**

*

# ಮೃತ್ಯುವಿನ ಅನೇಕ ಮುಖಗಳು

## ನೆಮ್ಮದಿಯ ಸಾವು: ಸಾವು ಬರುತ್ತದೆ ಎಂಬುದನ್ನು ತಿಳಿದುಕೊಳ್ಳದೆಯೆ ಸಾವನ್ನಪ್ಪುವುದು

N.S ದೇಹ ಬಿಟ್ಟದ್ದು ನಿನಗೆ ತಿಳಿದಿದೆ. ಅದು ಅಪಘಾತವೊಂದರ ಪರಿಣಾಮ. ಅಪಘಾತವಾದ ಮೇಲೆ ಅವನು ಬಂದ (ನಿಖರವಾದ ರೂಪದಲ್ಲಲ್ಲ. ಆದರೆ ಒಂದು ಬಗೆಯ ಪ್ರಜ್ಞೆಯ ಅವಸ್ಥೆಯಲ್ಲಿ ಬಂದ ಅವನನ್ನು ಕೂಡಲೆ ಗುರುತಿಸಿದೆ), ಅವನು ಅಲುಗಾಡದೆ ಇಲ್ಲಿಯೇ ಉಳಿದುಕೊಂಡ, ಅವನಲ್ಲಿ ಸಂಪೂರ್ಣ ವಿಶ್ವಾಸ ಹಾಗೂ ದಿವ್ಯಾನಂದದ ಶಾಂತಿ ಇದ್ದವು– ಸಂಪೂರ್ಣವಾಗಿ ಅವನ ಎಲ್ಲ ಸ್ಥಿತಿಗಳಲ್ಲಿದ್ದವು. (ಶರಣಾಗತವಾದದ್ದರ ಸಂಜ್ಞೆ), ಇಡಿಯಾದ ವಿಶ್ವಾಸ, ಏನಾಗಲಿದೆಯೋ ಅದಾಗುತ್ತದೆ, ಯಾವುದಿದೆಯೋ ಅದಿರುತ್ತದೆ. ಯಾವ ಪ್ರಶ್ನೆಗಳೂ ಇಲ್ಲ; ತಿಳಿದುಕೊಳ್ಳುವ ಆವಶ್ಯಕತೆಯೂ ಇಲ್ಲ. ಹಿತಕರವಾದ ಶಾಂತಿ... ಅತಿ ನಿರಮ್ಮಳ.

ಅವರು ಪ್ರಯತ್ನ ಮಾಡಿದರು, ಹೋರಾಡಿದರು, ಶಸ್ತ್ರಚಿಕಿತ್ಸೆ ಮಾಡಿದರು, ಯಾವುದೂ ಚಲಿಸಲಿಲ್ಲ. ನಂತರ ಒಂದು ದಿನ ಅವನು ಮರಣ ಹೊಂದಿದ್ದಾನೆ ಎಂದು ಸಾರಿ ಹೇಳಿದರು.

ಅವನು ನಿರ್ವಿಕಾರವಾಗಿ ಎಲ್ಲ ಸಮಯದಲ್ಲಿ ಇಲ್ಲಿಯೇ ಇದ್ದ. ನಂತರ ಹಠಾತ್ತನೆ ನನ್ನಲ್ಲಿ ಒಂದು ಬಗೆಯ ನಡುಕ ಪ್ರಾರಂಭವಾಯಿತು– ಅವನು ಹೋಗಿಬಿಟ್ಟಿದ್ದನು. ನಾನು ಕಾರ್ಯನಿರತಳಾಗಿದ್ದೆ, ಹಾಗಾಗಿ ಸಾವಿನ ವೇಳೆಯನ್ನು ನಿಖರವಾಗಿ ಗುರುತಿಸಲಿಕ್ಕಾಗಲಿಲ್ಲ, ಆದರೆ ಅದು ಅಪರಾಹ್ನ ಕಾಲದಲ್ಲಾಗಿತ್ತು, ನನಗೆ ಗೊತ್ತಿದ್ದುದು ಅದಷ್ಟೇ. ಅವನಿಗೆ ಶವಸಂಸ್ಕಾರ ಮಾಡಲಿದ್ದಾರೆ ಎಂಬುದು ನನಗೆ ತಿಳಿದು ಬಂದಿತು, ಆಗ ಹಾಗೆ ಮಾಡಿದ್ದರು ಕೂಡ.

ಅಪಘಾತದ ಭೀಕರತೆ ಅವನನ್ನು ನಿರ್ದಯವಾಗಿ ಬಾಹ್ಯ ರೂಪದಲ್ಲಿ–ರಿಸಿದ್ದಿತು, ಆದರೆ ಅದು ಸಂಭವಿಸಿದಾಗ ನನ್ನನ್ನು ಕುರಿತು ವಿಶ್ವಾಸದೊಂದಿಗೆ ಯೋಚಿಸುತ್ತಿರಬೇಕು, ಅವನು ನನ್ನ ಬಳಿ ಬಂದ, ಕದಲಲಿಲ್ಲ– ತನ್ನ ದೇಹಕ್ಕೆ ಏನಾಗುತ್ತಿದೆ ಎಂಬುದನ್ನು ಅವನು ಎಂದಿಗೂ ತಿಳಿದುಕೊಳ್ಳಲಿಲ್ಲ. ತಾನು ಮರಣ ಹೊಂದಿದ್ದೇನೆ ಎಂಬುದನ್ನು ಅವನು ತಿಳಿದುಕೊಳ್ಳಲಿಲ್ಲ.

ಆಗ ಅಲ್ಲಿಯೇ ನಾನು ನನಗೆ ಹೇಳಿಕೊಂಡೆ: "ಜನರನ್ನು ದಹನ ಮಾಡುವ ಈ ರೂಢಿ ಭಯಾನಕವಾದದ್ದು ಮತ್ತು ದಿಗಿಲುಗೊಳಿಸುವಂತೆ ಅತಿ ಕ್ರೂರವಾದದ್ದು!" ತಾನು ಮರಣ ಹೊಂದಿದ್ದೇನೆ ಎಂಬುದು ಅವನಿಗೆ ತಿಳಿದಿರಲಿಲ್ಲ, ಈ ರೂಢಿಯಿಂದ ಅವನಿಗೆ ತಿಳಿದು ಬಂದಿತು! ಶರೀರದಲ್ಲಿದ್ದ ರೂಪದ ಪ್ರಾಣದ ಪ್ರತಿಕ್ರಿಯೆಯಿಂದ ಅದು ಅವನಿಗೆ ತಿಳಿಯಿತು.

ದೇಹ ಪೂರ್ತಿಯಾಗಿ ಕೆಟ್ಟ ಸ್ಥಿತಿಯಲ್ಲಿದ್ದಾಗಲೂ ಕೂಡ, ರೂಪದ ಪ್ರಾಣ ಅದನ್ನು ಬಿಟ್ಟು ಹೋಗಲು ಕನಿಷ್ಠ ಪಕ್ಷ ಏಳು ದಿನಗಳನ್ನು ತೆಗೆದುಕೊಳ್ಳುತ್ತದೆ. ಮತ್ತು ಯೋಗಾಚರಣೆ ಮಾಡುತ್ತಿರುವವನಿಗೆ ಈ ರೂಪ ಪ್ರಜ್ಞೆಯುಳ್ಳದ್ದಾಗಿರುತ್ತದೆ. ಜನರು ಮರಣ ಹೊಂದಿದ್ದಾರೆ ಎಂದು ವೈದ್ಯರು ಸಾರಿ ಹೇಳಿದ ಕೂಡಲೆ ಕೆಲವು ಗಂಟೆಗಳ ನಂತರ ಅವರನ್ನು ದಹನ ಮಾಡಿಬಿಡುತ್ತೀರಿ, ಆದರೆ ರೂಪದ ಪ್ರಾಣ ಪ್ರತಿಯೊಂದು ಇಂಚಿನಲ್ಲಿ ಜೀವಂತವಿರುತ್ತದೆ. ಮತ್ತು ಯೋಗಾಚರಣೆ ಮಾಡುವವರಲ್ಲಿ ಪ್ರಜ್ಞೆಯಿಂದಿರುತ್ತದೆ.

ನೀವು ಮರಣ ಹೊಂದುತ್ತಿರುವುದನ್ನು ತಿಳಿದುಕೊಳ್ಳದೆಯೇ ಮರಣ ಹೊಂದುವುದು ಸಾಧ್ಯವಿದೆ. ಜನರಿಗೆ ಶವಸಂಸ್ಕಾರ (ದಹನಕ್ರಿಯೆ) ಮಾಡಬಾರದೆಂದು ಹೇಳುತ್ತಿಲ್ಲ, ಏಕೆಂದರೆ ಕನಿಷ್ಠಪಕ್ಷ ನೂರು ಸಂದರ್ಭಗಳಲ್ಲಿ ತೊಂಬತ್ತೊಂಬತ್ತರಲ್ಲಿ ಅದು ಕೈಕೊಳ್ಳಬಹುದಾದ ಅತ್ಯಂತ ಒಳ್ಳೆಯ ಕಾರ್ಯವಾಗಿರುತ್ತದೆ. ಜನರಿಗೆ ಇರುವ ಏಕೈಕ ಪರಿಹಾರವೆಂದರೆ ವಿವೇಕಿಗಳಾಗಿ ಬೆಳೆಯುವುದಾಗಿದೆ, ಅವರು ವಿವೇಕಿಗಳಾಗಿರುವುದಿಲ್ಲ. ಅವರು ನಿಯಮವೊಂದನ್ನು, ತತ್ವವೊಂದನ್ನು ಕುರುಡಾಗಿ ಅನುಸರಿಸುವ ಆವಶ್ಯಕತೆಯನ್ನು ಒಪ್ಪಿಕೊಂಡಿರುತ್ತಾರೆ.

**ಅನುಯಾಯಿಯೊಂದಿಗೆ ಮಾತುಕತೆ: ಜುಲೈ 4, 1962** **– ಶ್ರೀಮಾತೆ**

*

**ಮರಣ ಹೊಂದಿದ ನಂತರ ಶ್ರೀಮಾತೆಯವರ ವಾತಾವರಣದಲ್ಲಿ ಉಳಿದುಕೊಳ್ಳುವುದು**

I.B ಕೊಲೆಗೀಡಾದಾಗ ನಾನು ಅವನ ಸತ್ತೆಯ ಎಲ್ಲ ಸ್ಥಿತಿಗಳನ್ನು, ಹಾಗೂ ಚಟುವಟಿಕೆಗಳನ್ನು ಒಟ್ಟಿಗೆ ಸೇರಿಸಬೇಕಾಗಿತ್ತು, ಅವು ಅಪಘಾತದ ಹಿಂಸೆಯಿಂದಾಗಿ ಚೆಲ್ಲಾಪಿಲ್ಲಿಯಾಗಿದ್ದವು– ಅದು ಅತಿ ಘೋರ ಸ್ಥಿತಿಯಾಗಿತ್ತು, ಅವನು ಚೆಲ್ಲಾಪಿಲ್ಲಿಯಾದ ಭಯಾನಕ ಸ್ಥಿತಿಯಲ್ಲಿದ್ದ, ಎರಡರಿಂದ ಎರಡೂವರೆ

ದಿನಗಳ ಕಾಲ ಅವನನ್ನು ಬದುಕಿಸಲು ವೈದ್ಯರು ಶತಪ್ರಯತ್ನ ಮಾಡಿದರು, ಆದರೆ ಅದು ಅಸಾಧ್ಯವಾಗಿತ್ತು. ಆ ಎರಡು ದಿನಗಳ ಅವಧಿಯಲ್ಲಿ ಅವನ ಎಲ್ಲ ಪ್ರಜ್ಞೆಯನ್ನು ಒಟ್ಟಿಗೆ ತಂದೆ, ಅದನ್ನು ಅವನ ದೇಹದ ಮೇಲೆ ಶೇಖರಿಸಿದೆ. ಎಷ್ಟರಮಟ್ಟಿಗೆಂದರೆ ಅದು ಅಲ್ಲಿ ಬಂದಾಗ ತನ್ನನ್ನು ರೂಪಕ್ಕೊಳಪಡಿಸಿದಾಗ, ಎಂತಹ ಜೀವಶಕ್ತಿ, ಎಂತಹ ಪ್ರಾಣ ಅವನ ದೇಹದಲ್ಲಿ ಮರಳಿ ಬರುತ್ತಿತ್ತೆಂದರೆ, ಕೆಲವು ಗಂಟೆಗಳ ನಂತರ ವೈದ್ಯರು ಅವನನ್ನು ರಕ್ಷಿಸಲಾಯಿತೆಂದು ನಂಬಿದ್ದರು. ಆದರೆ ಅದು ಉಳಿದುಕೊಳ್ಳಲಿಲ್ಲ, (ಅದು ಸಾಧ್ಯವಿರಲಿಲ್ಲ, ಮಿದುಳಿನ ಒಂದು ಭಾಗ ಹೊರಗೆ ಬಂದಿತ್ತು). ಸರಿ, ಕೇವಲ ಅವನ ಆತ್ಮವನ್ನಷ್ಟೇ ಅಲ್ಲ, ಆದರೆ ಅವನ ಮಾನಸಿಕ ಹಾಗೂ ಪ್ರಾಣಿಕ ಸತ್ತೆಗಳನ್ನು ಮತ್ತು ಉಳಿದದ್ದೆಲ್ಲವನ್ನು ಅವನ ದೇಹದ ಮೇಲೆ ಸರಿಯಾಗಿ ಸಂಗ್ರಹಿಸಿಟ್ಟಾಗ ಹಾಗೂ ಸಂಘಟಿತಗೊಳಿಸಿದಾಗ ಮತ್ತು ತನ್ನ ದೇಹ ನಿರುಪಯುಕ್ತವಾಗಿದೆ ಎಂದು ಅವನಿಗೆ ತಿಳಿದಾಗ, ಅದು ಮುಗಿದು ಹೋಗಿತ್ತು– ಅವರು ದೇಹವನ್ನು ಬಿಟ್ಟುಕೊಟ್ಟರು ಮತ್ತು ಅದು ಮುಗಿದು ಹೋಗಿತ್ತು.

I.B ಯನ್ನು ನನ್ನ ಬಳಿ ಕಾಪಾಡಿಕೊಂಡು ಬಂದೆ, ಏಕೆಂದರೆ ಅವನನ್ನು ತತ್‌ಕ್ಷಣ ಇನ್ನೊಂದು ದೇಹದಲ್ಲಿ ಮರಳಿ ಹೋಗುವಂತೆ ಇರಿಸುವ ವಿಚಾರ ನನ್ನಲ್ಲಿತ್ತು. ಅವನ ಆತ್ಮಕ್ಕೆ ಸಮಾಧಾನವಿರಲಿಲ್ಲ, ಅದು ತನ್ನ ಅನುಭವವನ್ನು ಮುಕ್ತಾಯಗೊಳಿಸಿರಲಿಲ್ಲ. (ಅಲ್ಲಿ ಪರಿಸ್ಥಿತಿಗಳ ಇಡೀ ಸಂಯೋಜನೆಯಿತ್ತು) ಅದು ಪೃಥ್ವಿಯ ಮೇಲೆ ಜೀವಿಸುವುದನ್ನು ಮುಂದುವರಿಸಿಕೊಂಡು ಹೋಗಲು ಬಯಸಿತ್ತು. ಆಗ ಆ ದಿನ ರಾತ್ರಿ ಅವನ ಆಂತರಿಕ ಸತ್ತೆ ಗೋಳಾಡುತ್ತ V ಯನ್ನು ಹುಡುಕುತ್ತ ಹೋಯಿತು, ತಾನು ಮರಣ ಹೊಂದಿದ್ದೇನೆ, ಮರಣ ಹೊಂದಬೇಕೆಂದು ಬಯಸಿರಲಿಲ್ಲ, ನಾನು ನನ್ನ ದೇಹವನ್ನು ಕಳೆದುಕೊಂಡಿದ್ದೇನೆ ಮತ್ತು ಜೀವಿಸುವುದನ್ನು ಮುಂದುವರಿಸಿಕೊಂಡು ಹೋಗಲು ಬಯಸಿದ್ದೆ ಎಂದು V ಗೆ ಹೇಳಿತು. V ತುಂಬಾ ಗಲಿಬಿಲಿಗೊಳಗಾದ. ಅದನ್ನು ನಾನು ತಿಳಿದುಕೊಳ್ಳಲು ಬೆಳಿಗ್ಗೆ ನನಗೆ ಅನುವುಮಾಡಿಕೊಟ್ಟ: "ಸಂಭವಿಸಿದ್ದು ಹೀಗೆ ಇಲ್ಲಿದೆ", ಎಂದು ತಿಳಿಸಿದ. ನಾನೇನು ಮಾಡುತ್ತಿದ್ದೇನೆ ಎಂಬುದರ ಬಗ್ಗೆ ಅವನಿಗೆ ಮಾಹಿತಿ ಕಳಿಸಿಕೊಟ್ಟೆ: ನಾನು I.B ಯನ್ನು ನನ್ನ ವಾತಾವರಣದಲ್ಲಿಯೇ ಕಾಪಾಡಿಕೊಂಡು ಬಂದಿದ್ದೇನೆ, ಅವನು ಸ್ಥಿರತೆಯಿಂದ ಉಳಿದುಕೊಳ್ಳಬೇಕು, ಉದ್ವಿಗ್ನಗೊಳ್ಳುವುದು

ಬೇಡ, ಏಕೆಂದರೆ ಸಾಧ್ಯವಿದ್ದಷ್ಟು ಬೇಗನೆ ಅವನನ್ನು ಮರಳಿ ಒಂದು ದೇಹದಲ್ಲಿ ಇರಿಸುವವಳಿದ್ದೇನೆ– ಆಗಲೆ ನನ್ನ ದೃಷ್ಟಿಯಲ್ಲಿ ಏನೋ ಒಂದಿತ್ತು. ಅದೇ ದಿನ ಸಾಯಂಕಾಲ I.B ಮತ್ತೆ V ನ ಬಳಿ ಹೋದ. ಅದೇ ಬಗೆಯ ದೂರನ್ನು ಹೇಳಿದ. ಆಗ V ಅವನಿಗೆ ಸ್ಪಷ್ಟವಾಗಿ ಹೇಳಿದ: "ಶ್ರೀಮಾತೆಯವರು ಹೇಳುತ್ತಿರುವುದು ಹೀಗಿದೆ, ಅವರು ಕೈಕೊಳ್ಳಲಿರುವುದು ಇಲ್ಲಿದೆ, ಈಗ ಬಾ, ಸ್ಥಿರತೆಯಲ್ಲಿ ಉಳಿದುಕೋ, ಮತ್ತು ನಿನ್ನನ್ನು ಪೀಡೆಗೊಳಿಸಿಕೊಳ್ಳಬೇಡ." I.B ಯ ಮುಖದಲ್ಲಿ ಅವನು ಅರ್ಥಮಾಡಿಕೊಂಡಿದ್ದಾನೆ ಎಂಬುದನ್ನು V ನೋಡಿದ (ಸ್ವಾಭಾವಿಕವಾಗಿ ಆಂತರಿಕ ಸತ್ತೆ I.B ಯ ಭೌತಿಕ ತೋರಿಕೆಯನ್ನು ತೆಗೆದುಕೊಂಡಿತ್ತು.) ಅವನ ಮುಖ ನಿರಾಳವಾಗಿತ್ತು ಅವನು ತೃಪ್ತಿಯಿಂದ ಉಳಿದುಕೊಂಡ.

ಅವನು ಹೊರಟು ಹೋದ ಮತ್ತು ಎಂದಿಗೂ ಮರಳಿ ಬರಲಿಲ್ಲ. ಎಂದರೆ ನಾನು ಅವನನ್ನು 'C'ಯ ಮಗುವಿನಲ್ಲಿ ಅವನನ್ನಿರಿಸುವವರೆಗೆ ಅವನು ಪ್ರಶಾಂತತೆಯಿಂದ ನನ್ನ ಬಳಿ ಉಳಿದುಕೊಂಡ.

**ಅನುಯಾಯಿಯೊಂದಿಗೆ ಮಾತುಕತೆ: ಜೂನ 24, 1961** **- ಶ್ರೀಮಾತೆ**

*

## ಆತ್ಮ ಹೊರಟುಹೋದ ನಂತರ ವಾಡಿಕೆಯ ಪ್ರಕಾರ ಜೀವಿಸುವುದು

ನಿನಗೆ B ಯ ಪರಿಚಯವಿತ್ತೆ? ಸಾಕಷ್ಟು ಸಮಯದ ಹಿಂದೆ ಅವನ ಚೈತ್ಯಸತ್ತೆ ಅವನನ್ನು ಬಿಟ್ಟುಕೊಟ್ಟು ಹೋಗಿತ್ತು, ಪರಿಣಾಮವಾಗಿ ಮೇಲ್ಮೈಪ್ರಜ್ಞೆಯಲ್ಲಿ ಅವನು ಸ್ವಲ್ಪ ಬುದ್ಧಿಭ್ರಂಶನಾದವನಂತೆ ತೋರಿಬರುತ್ತಿದ್ದ– ಅವನು ಬುದ್ಧಿಭ್ರಂಶನಾಗಿರಲಿಲ್ಲ, ಆದರೆ ಕುಗ್ಗಿ ಹೋಗಿದ್ದ. ಅವನು, ನಾನು ಹೇಳಿದ ಹಾಗೆ, ವಾಡಿಕೆಯ ಪ್ರಕಾರ ಜೀವಿಸುತ್ತಿದ್ದ. ಭೌತಿಕ ಪ್ರಜ್ಞೆ ಇನ್ನೂ ಅಲ್ಪಮಾತ್ರದ ಪ್ರಾಣಿಕವನ್ನು, ಮನಸ್ಸನ್ನು ಹಿಡಿದುಕೊಂಡಿತ್ತು, ಅವನು ವಾಡಿಕೆಯ ಪ್ರಕಾರ ಜೀವಿಸುತ್ತಿದ್ದ. ಗಮನಿಸಬೇಕಾದ ವಿಷಯವೆಂದರೆ, ಕೆಲವೊಮ್ಮೆ ಕೆಲ ಸೆಕೆಂಡುಗಳ ಕಾಲ ಅವನು ಮೆಚ್ಚುಗೆ ಪಡೆಯುವ ರೀತಿಯಲ್ಲಿ, ಪೂರ್ತಿ ಪ್ರಕಾಶದಲ್ಲಿ ಜೀವಿಸಬಲ್ಲವನಾಗಿದ್ದ, ಅದು ಹಾಗಿರುವಾಗ ಇತರ ಸಮಯಗಳಲ್ಲಿ ಅವನು ತನ್ನ ಸಂಜ್ಞೆಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿದ್ದ, ನಂತರ ಅವನು ಎಲ್ಲವನ್ನೂ ಬಿಟ್ಟುಕೊಟ್ಟ: ಸಂಗ್ರಹ ಮಾಡಿದ್ದ ಎಲ್ಲ ಚೈತನ್ಯ ಸ್ವಲ್ಪ, ಸ್ವಲ್ಪವಾಗಿ ಕುಂದಿತು, ಅವನ ದೇಹದಲ್ಲಿ

ಏನೆಲ್ಲ ಉಳಿದುಕೊಂಡಿತ್ತೋ ಅದು ಹೋಗಿಬಿಟ್ಟಿತು. ಅದು ಅವನ ಜನ್ಮದಿನ (ಡಿಸೆಂಬರ 30ರ ರಾತ್ರಿ)ದಂದಾಗಿತ್ತು. ಯಾವಾಗಲೂ ಕೈಕೊಳ್ಳುವಂತೆ ಅವರು ಅವನ ಕೋಣೆಯನ್ನು ಸ್ವಚ್ಛ ಮಾಡಿದರು, ಎಲ್ಲ ಪೀಠೋಪಕರಣಗಳನ್ನು ಹೊರಗಿಟ್ಟರು. ಆಗಿನಿಂದ ಅವನ ಯಾವ ಕುರುಹೂ ಇರಲಿಲ್ಲ. ನಿನ್ನೆ ಸಾಯಂಕಾಲ ಊಟದ ನಂತರ (ಹನ್ನೆರಡು ದಿನಗಳ ಹಿಂದೆ ಅವನು ಮರಣ ಹೊಂದಿದ್ದು ಅದೇ ಸಮಯದಲ್ಲಾಗಿತ್ತು) ನಾನು ವಿಶ್ರಾಂತಿ ತೆಗೆದುಕೊಳ್ಳುತ್ತ ಧ್ಯಾನಮಗ್ನಳಾಗಿದ್ದೆ. ಆಗ ಹಠಾತ್ತನೆ ತುಂಬಾ ಉದ್ವಿಗ್ನನಾಗಿ ಇಲ್ಲಿಗೆ ಬಂದ, ನನಗೆ ಹೇಳಿದ: “ಶ್ರೀಮಾತೆಯವರೆ, ಅವರು ನನ್ನ ಕೋಣೆಯಿಂದ ಎಲ್ಲ ಪೀಠೋಪಕರಣಗಳನ್ನು ತೆಗೆದುಕೊಂಡು ಹೋಗಿದ್ದಾರೆ! ನಾನೀಗ ಏನು ಮಾಡಲಿ?” ನಾನು ಅವನಿಗೆ ಹೇಳಿದೆ: “ಸಿಟ್ಟಿಗೇಳುವುದು ಬೇಡ, ನಿನಗೀಗ ಅಂತಹವುಗಳ ಆವಶ್ಯಕತೆ ಇಲ್ಲ”. ಆಗ ಅವನನ್ನು ವಿಶ್ರಾಂತಿಯ ಸ್ಥಿತಿಯಲ್ಲಿ ಇರಿಸಿದೆ ಮತ್ತು ಅವನ ಸತ್ತೆಯ ಉಳಿದ ಭಾಗವನ್ನು ಕೂಡಿಕೊಳ್ಳಲು ಕಳಿಸಿಕೊಟ್ಟೆ.

ಇದರರ್ಥ ಅವನ ಎಲ್ಲ ಅಂಶಗಳು ಕೂಡಿಕೊಂಡು ರೂಪತಾಳಲು ಹನ್ನೆರಡು ದಿನಗಳು ಬೇಕಾದವು. ನಿಮಗೆ ತಿಳಿದ ಹಾಗೆ ಅವನ ಶರೀರವನ್ನು ಸುಟ್ಟುಬಿಡಲಾಗಿದೆ. ಅವನಿಗೆ ಶವಸಂಸ್ಕಾರ ಮಾಡಿದ್ದೇವೆ, ಆದರೆ ನಾನು ಒಂದು ವಿಶಿಷ್ಟ ಸಮಯದ ಅವಧಿಯನ್ನು ಒತ್ತಾಯದಿಂದ ಬೇಡಿದ್ದೆ, ಆದಾಗ್ಯೂ ಇವನ ಸಂದರ್ಭದಲ್ಲಿ ಅದು ನಿಜವಾಗಿ ಕ್ರಮೇಣ ಬರಿದಾಗುವುದಾಗಿತ್ತು, ಅವನ ದೇಹದಲ್ಲಿ ಹೆಚ್ಚಿನದೇನೂ ಉಳಿದುಕೊಂಡಿರಲಿಲ್ಲ, ಅದೇನೇ ಇದ್ದರೂ, ಆಗಲೂ ಕೂಡ ಪ್ರಜ್ಞೆಯನ್ನು ಜೀವಕೋಶಗಳಿಂದ ರಭಸದಿಂದ ಎಸೆದು ಬಿಡಲಾಗಿರುತ್ತದೆ, ಮತ್ತೆ ರೂಪತಾಳಲು ಅದಕ್ಕೆ ಹನ್ನೆರಡು ದಿನಗಳು ಬೇಕಾದವು. ಅದು ಅವನ ಆತ್ಮವಲ್ಲ. (ಅದಾಗಲೇ ಹೊರಟು ಹೋಗಿತ್ತು). ಆದರೆ ಅವನ ಶರೀರದ ಚೇತನ ನನ್ನ ಬಳಿ ಬಂದಿತು. ಅವನ ಶಾರೀರಿಕ ಪ್ರಜ್ಞೆ ಚೆನ್ನಾಗಿ ವಸ್ತ್ರಧಾರಣ ಮಾಡಿದ, ಅಚ್ಚುಕಟ್ಟಾದ B ಯಲ್ಲಿ ಒಟ್ಟುಗೂಡಿತ್ತು, ಅವನ ತಲೆಗೂದಲು ಚೆನ್ನಾಗಿ ಬಾಚಿಕೊಂಡಂತ್ತಿತ್ತು. ಅವನು ನನ್ನ ಬಳಿ ಬಂದಾಗ ಒಳ್ಳೆಯ ಬಟ್ಟೆಬರೆ ಧರಿಸಿದ್ದ, ಅದು ಅವನು ಜೀವಂತವಾಗಿದ್ದ ಕಾಲದಲ್ಲಿ ಇದ್ದ ಹಾಗಿತ್ತು. ನನ್ನನ್ನು ನೋಡಲು ಬಂದಾಗ ಅವನು ಯಾವಾಗಲೂ ಚೆನ್ನಾಗಿ ಸಿಂಗರಿಸಿಕೊಂಡಿರುತ್ತಿದ್ದ, ಕಳಂಕರಹಿತನಾಗಿರುತ್ತಿದ್ದ, ಅದು ಅವನ ರೀತಿಯಾಗಿತ್ತು. ಅದೆಲ್ಲ ಒಂದೆಡೆ

ಸೇರಿಕೊಳ್ಳಬೇಕಾದರೆ ಹನ್ನೆರಡು ದಿನಗಳು ಬೇಕಾದವು, ಏಕೆಂದರೆ ನಾನು ಆ ಕಡೆ ಲಕ್ಷ್ಯಗೊಟ್ಟಿರಲಿಲ್ಲ. (ನಾನು ಅತ್ತ ತುಸು ಲಕ್ಷ್ಯಕೊಟ್ಟರೆ ಕೆಲವು ಗಂಟೆಗಳ ಕಾಲದಲ್ಲಿ ಮಾಡಿಬಿಡಬಲ್ಲೆ) ಆದರೆ ಇವನ ಸಂದರ್ಭದಲ್ಲಿ ಆತ್ಮ ದೀರ್ಘಕಾಲದಿಂದ ವಿಶ್ರಾಂತಿ ಸ್ಥಿತಿಯಲ್ಲಿತ್ತು, ಹಾಗಾಗಿ ಅದು ಮಹತ್ವದ್ದೆನಿಸಲಿಲ್ಲ. ಹೀಗೆ ಹನ್ನೆರಡು ದಿನಗಳ ಕಾಲದಲ್ಲಿ ಅದು ಮತ್ತೆ ರೂಪವನ್ನು ತೆಗೆದುಕೊಂಡಿತು, ಮತ್ತು ಅವನು ತಯಾರಾದಾಗ (ನಗುತ್ತ) ತನ್ನ ಕೋಣೆಯಲ್ಲಿ ವಾಸಮಾಡಲು ಮರಳಿ ಬಂದಿದ್ದ! ... ಅಲ್ಲಿ ಯಾವ ಪೀಠೋಪಕರಣಗಳು ಉಳಿದಿರಲಿಲ್ಲ, ಏನೇನೂ ಇರಲಿಲ್ಲ!

ಅದು ನನಗೆ ಬಹಳ ಮೋಜಿನದೆನಿಸಿತು.

ಮತ್ತು ಅವನು ಒಂದು ವರ್ಷಕ್ಕಿಂತ ಹೆಚ್ಚಿನ ಕಾಲ, ಬಹುಮಟ್ಟಿಗೆ ಎರಡು ವರ್ಷಗಳ ಕಾಲ ವಾಡಿಕೆಯ ರೀತಿಯಲ್ಲಿ ಜೀವಿಸುತ್ತಿದ್ದ ಎಂದು ನನಗನಿಸುತ್ತದೆ.

**ಅನುಯಾಯಿಯೊಡನೆ ಮಾತುಕತೆ: ಜನವರಿ 12, 1963** **- ಶ್ರೀಮಾತೆ**

*

**ಮರಣ ಹೊಂದುವುದಕ್ಕೆ ಒಂದು ದೀರ್ಘಾವಧಿ**

ಇಲ್ಲಿ ಹಳೆಯ ಕಾಲದ ಧಡೂತಿ ವೈದ್ಯನ ಅಕ್ಕ ಇದ್ದಾಳೆ, ಆಕೆ (ನನಗನಿಸುವ ಮಟ್ಟಿಗೆ) ನನಗಿಂತ ಐದಾರು ವರ್ಷ ದೊಡ್ಡವಳಿರಬಹುದು– ಅವಳೀಗ ತೊಂಬತ್ತರ ಹತ್ತಿರ ಬಂದಿದ್ದಾಳೆ. ಹಲವಾರು ತಿಂಗಳುಗಳಿಂದ ಆಕೆ ಮರಣ ಹೊಂದುತ್ತಲೇ ಬಂದಿದ್ದಾಳೆ. ವೈದ್ಯರು (ಇಂತಹ ವಿಷಯಗಳಲ್ಲಿ ಅವರಿಗೇನೂ ತಿಳಿದಿರುವುದಿಲ್ಲ) ಕೆಲ ದಿನಗಳಲ್ಲಿ ಅವಳು ಮರಣ ಹೊಂದುತ್ತಾಳೆ ಎಂದು ಹೇಳಿದ್ದರು. ನಾನು ಅವರಿಗೆ ಹೇಳಿದೆ: “ಸ್ವಲ್ಪಕಾಲ ಕಾದು ನೋಡಿರಿ, ಈ ಸ್ತ್ರೀಗೆ ವಿಶ್ರಾಂತಿ ಸ್ಥಿತಿಗೆ ಹೇಗೆ ಹೋಗಬೇಕೆಂಬುದು ಗೊತ್ತಿದೆ, ಅವಳಲ್ಲಿ ಬಹಳ ಶಾಂತಿಯುತ ಪ್ರಜ್ಞೆಯಿದೆ– ಅದು ದೀರ್ಘಕಾಲ ಉಳಿದುಕೊಳ್ಳುತ್ತದೆ, ಬಹಳ ವರ್ಷಗಳ ಕಾಲ ಉಳಿದುಕೊಳ್ಳಬಹುದು.” ಅವಳು ಹಾಸಿಗೆ ಹಿಡಿದಿದ್ದಾಳೆ, ಅಡ್ಡಾಡಲು ಆಗುವುದಿಲ್ಲ, ಆದರೆ ಅವಳು ಜೀವಿಸಿದ್ದಾಳೆ. ಅವಳೂ ಕೂಡ ವಾಡಿಕೆಯ ರೀತಿಯಲ್ಲಿ ಜೀವಿಸುತ್ತಿದ್ದಾಳೆ.

ವಾಸ್ತವದಲ್ಲಿ ಮಾನವ ದೇಹ ಮನುಷ್ಯರು ಯೋಚಿಸುವುದಕ್ಕಿಂತ ಹೆಚ್ಚಿನಕಾಲ ಬದುಕಲು ಶಕ್ತವಾಗಬಹುದು. ಅವರು ಅದನ್ನು ಅತ್ತಿತ್ತ ನೂಕುತ್ತಾರೆ:

ಯಾರೊಬ್ಬರು ಅಸ್ವಸ್ಥರಾದ ಕೂಡಲೆ ಅವರು ಅವನ ದೇಹಕ್ಕೆ ಔಷಧಿ ನೀಡುತ್ತಾರೆ, ಅತ್ತಿತ್ತ ನೂಕುತ್ತಾರೆ, ಅದು ಬಹಳ ಕಾಲ ಬಾಳುವಂತೆ ಮಾಡುವ ಸಸ್ಯಿಯ ಪ್ರಶಾಂತತೆಯನ್ನು ತೆಗೆದು ಹಾಕುತ್ತಾರೆ. ಆ ಪ್ರಶಾಂತತೆಯೇ ಮರಗಳು ಮೃತವಾಗಲು ಬಹಳ ಕಾಲ ತೆಗೆದುಕೊಳ್ಳುವುದಕ್ಕೆ ಕಾರಣವಾಗಿರುತ್ತದೆ.

**ಅನುಯಾಯಿಯೊಡನೆ ಮಾತುಕತೆ: ಜನವರಿ 12, 1963 - ಶ್ರೀಮಾತೆ**

*

**ಅವಿತುಕೊಂಡ ಅದ್ಭುತಗಳು**

ಅಲ್ಲಿ ಒಂದು ವಿಷಯವಿತ್ತು. ಈಗ ಈ ಚಿಕ್ಕವಳ ಶವಸಂಸ್ಕಾರ ಮಾಡುವವರಿದ್ದರು. ಹಾಗಾಗಿ ಅವರು ನನ್ನ ಬಳಿ ಒಂದು ತಟ್ಟೆಯ ತುಂಬ ಹೂಗಳನ್ನಿಟ್ಟುಕೊಂಡು ಬಂದಿದ್ದರು. ಅವುಗಳನ್ನು ಅವಳ ದೇಹದ ಮೇಲೆ ಇರಿಸುವವರಿದ್ದರು. ಮತ್ತು ಅಲ್ಲಿ (ತಟ್ಟೆಯೊಂದಿಗೆ) ಆ ಚಿಕ್ಕವಳದಾದ ಏನೋ ಒಂದಿತ್ತು.– ಚೈತ್ಯ ಭ್ರೂಣಾಂಕುರ (embyo). ಅದು ಅಲ್ಲಿತ್ತು. ಅದು ಅಲ್ಪ ಚಲನೆ ಮಾಡಿತು... ಹಠಾತ್ತನೆ, ಎಷ್ಟೊಂದು ಆಳವಾದ ಕೋಮಲತೆಯಿರುವ ಚಲನೆ. ಅವಳು ಹೀಗಿದ್ದಳು. (ಶ್ರೀಮಾತೆಯವರ ಎದುರಿನಲ್ಲಿ ಸಂಜ್ಞೆ, ಹೂಗಳ ತಟ್ಟೆಯೊಂದಿಗೆ), ನಾನು ಗುಲಾಬಿ ಹೂವೊಂದನ್ನು ಕೈಗೆತ್ತಿಕೊಂಡೆ, ಅದು ನಾನು ಅದನ್ನೆತ್ತಿಕೊಂಡು ಅವಳ ಕೈಗಳಲ್ಲಿರಿಸಿದ ಹಾಗಿತ್ತು. ಅದನ್ನು ಕೊಟ್ಟು ಹೇಳಿದೆ: "ಇಲ್ಲಿ ಇದು ನಿನಗಾಗಿ ಇದೆ". ಅದೆಲ್ಲವೂ, ಆ ಎಲ್ಲ ಕಂಪನಗಳು, ಅದೆಲ್ಲವೂ ಪ್ರಕಾಶಮಾನವಾಗಿತ್ತು, ಸುಂದರವಾಗಿತ್ತು ಮತ್ತು ಅವಳು (ಅವಳ ಪ್ರಜ್ಞಾಪೂರ್ಣ ಭಾಗ) ಎಷ್ಟೊಂದು ಪರಿಪೂರ್ಣವಾಗಿ ಸಂತೋಷದಿಂದಿತ್ತು!

ಅದನ್ನು ಅವಳ ತಂದೆ–ತಾಯಿಗಳಿಗೆ ಹೇಳುವುದು ಹೇಗೆ? ಅವರು ನಿಮಗಿದೆಂತಹ ಹುಚ್ಚು ಎಂದು ಹೇಳಬಹುದಾಗಿತ್ತು.

ಆದರೆ ಅದು ವಾಸ್ತವ ಸಂಗತಿ, ಸರಳ ವಾಸ್ತವ ಸಂಗತಿ: ಚಂಪಕಲಾಲ ಆ ಹೂಗಳಿದ್ದ ತಟ್ಟೆಯನ್ನು ಹಿಡಿದುಕೊಂಡು ಬರುವುದನ್ನು ನಾನು ನೋಡಿದೆ ಮತ್ತು ಅದು (ಚೈತ್ಯದ ಭ್ರೂಣಾಂಕುರ) ಆ ರೀತಿಯಲ್ಲಿ ಮೇಲೆ ತೇಲುತ್ತಿತ್ತು, ಹಾಗಾಗಿ ನಾನವಳನ್ನು ನೋಡಿದಾಗ ನಾನೊಂದು ಗುಲಾಬಿ ಹೂವನ್ನು ಕೈಗೆತ್ತಿಕೊಂಡೆ. ಅಲ್ಲಿ ಅಷ್ಟೊಂದು ಸುಂದರವಾದ, ಪ್ರಕಾಶಮಾನವಾದ ಆ ರೀತಿಯಲ್ಲಿ ಏನೋ

ಒಂದಿತ್ತು. (ಬಹಳ ಚಿಕ್ಕ ವಸ್ತು, ಶ್ರೇಷ್ಠ ಶಕ್ತಿ ಅಥವಾ ಇನ್ನು ಬೇರೇನಿರಲಿಲ್ಲ), ಆದರೆ ಎಷ್ಟೊಂದು ಸುಂದರವಾದ, ಪ್ರಕಾಶಮಾನವಾದ, ಸಂತೋಷದಿಂದಿರುವ, ವಿಶ್ರಾಂತಿಯ ಅಷ್ಟೊಂದು ಭಾವನೆ ಹೊಂದಿದ್ದ ಭ್ರೂಣಾಂಕುರವಾಗಿತ್ತು... ಮತ್ತು ಎಷ್ಟೊಂದು ಸಲ ಆ ರೀತಿಯಲ್ಲಿ ಅದು ಸಂಭವಿಸಬಹುದು!

ನನ್ನ ಮಗು, ನಮಗೆ ಏನೂ ತಿಳಿದಿಲ್ಲ! ದಿನಕಳೆದಂತೆ ನಮಗೇನೂ ತಿಳಿದಿಲ್ಲ ಎಂಬುದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಮನವರಿಕೆಯಾಗತೊಡಗಿದೆ. ನಮಗೆ ತಿಳಿದಿದೆ ಎಂದು ನಾವು ಯೋಚಿಸುತ್ತೇವೆ, ನಾವು ಯೋಚಿಸುತ್ತೇವೆ ಮತ್ತು ನಮಗೇನೂ ತಿಳಿದಿಲ್ಲ. ನಾವು ಅವಿತುಕೊಂಡ ಅದ್ಭುತಗಳ ಸಾನ್ನಿಧ್ಯದಲ್ಲಿದ್ದೇವೆ, ಅವು ನಮ್ಮಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳುತ್ತವೆ, ಏಕೆಂದರೆ ನಾವು ಮೂರ್ಖರು. ಅಷ್ಟೇ.

**ಅನುಯಾಯಿಯೊಂದಿಗೆ ಮಾತುಕತೆ: ಎಪ್ರಿಲ್ 30, 1969** **- ಶ್ರೀಮಾತೆ**

*

## ಜೀವನ ಹಾಗೂ ಮರಣ

ಜೀವನ, ಮರಣ–ಮರಣ, ಜೀವನ ಇವೆರಡು ಪದಗಳು
ಯುಗ–ಯುಗಾಂತರಗಳ ಕಾಲ
ನಮ್ಮ ಯೋಚನೆ ಹಾಗೂ ಪ್ರಶ್ನೆಗಳನು ಮುನ್ನಡೆಸಿಕೊಂಡು ಹೋಗಿಹವು
ಹಾಗೂ ಎರಡು ವೈರುಧ್ಯಗಳೆಂದು ತೋರಿಬಂದಿಹವು;
ಆದರೆ ಈಗ ದೀರ್ಘಕಾಲ ಅವಿತುಕೊಂಡ ಪುಟಗಳನು
ತೆರೆಯಲಾಗಿಹುದು
ಅವು ಕನಸಿನಲಿ ಕಂಡಿರದ ಸತ್ಯಗಳನು ಮುಕ್ತಗೊಳಿಸಿಹವು.
ಜೀವನ ಕೇವಲ ಇದೆ. ಇಲ್ಲವೆ ಮರಣ ಮುಖವಾಡ ಧರಿಸಿದ ಜೀವನ–
ಜೀವನದ ಮೂಲಕ ನಾವು ಅಚ್ಚರಿಪಡುವವರೆಗೆ ಜೀವನ ಹ್ರಸ್ವ
ಮರಣವಾಗಿಹುದು.

**CWSA, 2/216** **– ಶ್ರೀ ಅರವಿಂದರು**

*

**ವಾಸ್ತವದಲ್ಲಿ ಜೀವನ ಹಾಗೂ ಮರಣ ಇವು ಒಂದೇ ಆಗಿವೆ ಮತ್ತು ನಾವು ಭಿನ್ನ ದೃಷ್ಟಿಯಿಂದ ನೋಡಿ ಎಲ್ಲ ಮರಣ ಕೇವಲ ಒಂದು ವಿಧಾನ ಹಾಗೂ ಜೀವನದ ಬದಲಾವಣೆ ಎಂದು ಇಲ್ಲವೆ ಎಲ್ಲ ಜೀವನ ಕೇವಲ ಮರಣದ ಚಟುವಟಿಕೆ ಎಂದು ಹೇಳಬಹುದು. ನಿಜವಾಗಿ ಅವೆರಡರ ಚೈತನ್ಯ ಒಂದೇ ಆಗಿದೆ, ಆ ಚೈತನ್ಯದ ಚಟುವಟಿಕೆಯು ಮುಖಗಳು ಎರಡು ಬಗೆಯ–ವಾಗಿರುವುದನ್ನು ನಮ್ಮ ಮುಂದಿರಿಸುತ್ತದೆ.**

**CWSA, 13/24** **– ಶ್ರೀ ಅರವಿಂದರು**

*

| **ಒಪ್ಪೋಲೆ : ಅಖಿಲ ಭಾರತ ಪತ್ರಿಕೆ, ನವ್ವೆಂಬರ 2017** | | | |
|---|---|---|---|
| **ಪುಟ** | **ಸಾಲು** | **ತಪ್ಪು** | **ಒಪ್ಪು** |
| **25** | **8** | **ಧಾನ್ಯಕ್ಕಾಗಿ** | **ಧ್ಯಾನಕ್ಕಾಗಿ** |

## ವಾರ್ತಾಪತ್ರ


### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 17ನೇ ನವೆಂಬರ್ 2017 ರ ಶುಕ್ರವಾರದಂದು "ಶ್ರೀಮಾತೆಯವರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ ಸಾಯಂಕಾಲ 5.00 ರಿಂದ 6.30 ಗಂಟೆಯವರೆಗೆ **"Spiritual Evolution seems all about Matter"** ಎಂಬ ವಿಷಯದ ಬಗ್ಗೆ ಶ್ರೀ ಭಾಸ್ಕರ ರೆಡ್ಡಿ, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 24ನೇ ನವೆಂಬರ್ 2017 ರ ಶುಕ್ರವಾರದಂದು "ಶ್ರೀ ಅರವಿಂದರ ಸಿದ್ಧಿ"ಯ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ ಸಾಂಯಂಕಾಲ 5.00 ಗಂಟೆಯಿಂದ 6.30 ರವರೆಗೆ ಶ್ರೀ ಎಸ್.ಎಸ್. ಲಹರಿರವರಿಂದ "Siddhi Day an Approach to understand it" ಎಂಬ ವಿಷಯದ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 26ನೇ ನವೆಂಬರ್ 2017ರ ಭಾನುವಾರದಂದು ಶ್ರೀ ಅರವಿಂದೋ ಸೊಸೈಟಿ ಕೇಂದ್ರ ಮತ್ತು ಶಾಖೆಗಳ ಮುಖ್ಯಸ್ಥರೊಂದಿಗೆ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಬೆಂಗಳೂರು ಕೇಂದ್ರ ಸ್ಥಾನಿಕ ಕಛೇರಿಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಸಭೆ ಬೆಳಿಗ್ಗೆ 10.30 ರಿಂದ ಪ್ರಾರಂಭವಾಯಿತು. ರಾಜ್ಯದ 19 ಕೇಂದ್ರ ಹಾಗೂ ಶಾಖೆಗಳಿಂದ ಪದಾಧಿಕಾರಿಗಳು ಆಗಮಿಸಿದ್ದರು. ತತ್ಸಂಬಂಧ ಆಯಾ ಕೇಂದ್ರ, ಶಾಖೆಗಳ ಪ್ರತಿನಿಧಿಗಳು ತಮ್ಮ ಪರಿಚಯವನ್ನು ಮಾಡಿಕೊಂಡರು. ನಂತರ ಹಿರಿಯ ಸಾಧಕರುಗಳಿಂದ (1) ಸುಪ್ರಮಾನಸದ ಶ್ರೀಮಾತೆ (2) ಪ್ರಸೂತಿ ಪೂರ್ವದ ಶಿಕ್ಷಣ (3) ಮಗುವನ್ನು ಪೋಷಿಸುವುದು ಹೇಗೆ? ಮೂರು ಕನ್ನಡ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಇದಾದ ನಂತರ ಕೇಂದ್ರ ಮತ್ತು ಶಾಖೆಗಳಿಗೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳಾದ i.e. ಪ್ರತಿವರ್ಷ ಮ್ಯಾನೇಜಿಂಗ್ ಕಮಿಟಿ ಅನುಮೋದನೆ, ನವೀಕರಣ, ಸದಸ್ಯತ್ವ ಹೆಚ್ಚಳ, ಯುವಕ ಶಿಬಿರ ಮತ್ತು ಶ್ರೀಮಾತಾರವಿಂದರ ತತ್ವ ಬೋಧನೆಗಳನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತಲುಪುವಂತೆ ಮಾಡಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರತಿನಿಧಿಗಳು ಸವಿಸ್ತಾರವಾಗಿ ತಮ್ಮ ಅನಿಸಿಕೆಗಳನ್ನು ಸಭೆಯಲ್ಲಿ ಮಂಡಿಸಿದರು. ಸಭೆಯನ್ನು ಉದ್ದೇಶಿಸಿ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್, ಕಾರ್ಯದರ್ಶಿಗಳಾದ ಶ್ರೀ ಶ.ಸ. ಸಿಂಹ ಮಾತನಾಡಿದರು. ಶ್ರೀ ಪುರುಷೋತ್ತಮ ಗಲಗಲಿ, ಹಿರಿಯ ಸಾಧಕರು ಉಪಸ್ಥಿತರಿದ್ದರು. ಸಭೆ ಸಾಯಂಕಾಲ 4.30ಕ್ಕೆ ಧ್ಯಾನ ಮತ್ತು ವಂದನಾರ್ಪಣೆ–ಯೊಂದಿಗೆ ಮುಕ್ತಾಯಗೊಳಿಸಲಾಯಿತು.



*The impossible is the hint of what shall be,*
*Mortal the door to immortality..*

- Sri Aurobindo

RNI No. 22511/1971
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.